ದೇಹೇಂದ್ರಿಯ ಮನೋಬುದ್ಧಿ ವ್ಯಾಪಾರಗಳಿಗೆ ಅತೀತನಾಗಿ ಬಾಲಕನಾದ ಶಂಕರರು ನಿಂತರು. ಆ ನಿಶ್ಚಂಚಲ ಚಂಚಲ ಸ್ಥಿತಿ ಮಂಡನರಿಗೆ ಗೋಚರವಾಯಿತು. ಆದರೆ ಅಲ್ಲಿಗೆ ಹೋಗಲು ಅವರಿಗೆ ಸಾಧ್ಯವಾಗಲಿಲ್ಲ. ಯುಕ್ತಿ ಪ್ರಯುಕ್ತಿಗಳು ನಿಂತು ಹೋದುವು. ಮೌನ ಕವಿಯಿತು. ಧರ್ಮಪತ್ನಿ ಹಾಕಿದ ಹೂವಿನಹಾರ ಮಂಡನ ಮಿಶ್ರರ ಎದೆಯಮೇಲೆ ಬಾಡಿ ಹೋಯಿತು. ಅಷ್ಟೇ, ಆ ಕ್ಷಣದಲ್ಲಿಯೇ ಮಂಡನರು ಸನ್ಯಾಸಿಯಾಗಲು ಸಿದ್ಧರಾದರು. ನ್ಯಾಯಪೀಠದಿಂದ ಉಭಯಭಾರತಿ ಇಳಿದು ಗಂಡನ ಸೋಲು, ಕರ್ಮದ ಇತಿ ಮಿತಿಗಳನ್ನು ಗ್ರಹಿಸಿದಳು. ಆದರೂ ಗಂಡನಿಲ್ಲದೆ ತನ್ನ ಮನೆಯೇ ಅಲ್ಲ, ಈ ಜಗತ್ತೇ ಶೂನ್ಯ ಎಂದು ಭಾವಿಸಿದ ಭಾರತಿ ಬಾಲಕನನ್ನು ನೋಡಿ "ಎಲೈ ಬ್ರಹ್ಮವಾದಿಯೇ ಕರ್ಮ ಪಕ್ಷ ಪೂರ್ತಿ ಸೋಲಲಿಲ್ಲ ಆ ಪಕ್ಷಕ್ಕೆ ಸೇರಿದ ಮಂಡನಮಿಶ್ರರ ಅರ್ಧಾಂಗಿಯಾದ ನನ್ನನ್ನು ವಾದದಲ್ಲಿ ಜಯಿಸಬೇಕು. ಆಗಲೇ ನನ್ನ ಗಂಡ ಸನ್ಯಾಸಿಯಾಗುವುದು" ಎಂದಳು. ಮುಗುಳ್ನಗುವಿನಿಂದ ಆಚಾರ್ಯರು "ಸರ್ವಜ್ಞ ಪೀಠಾಧ್ಯಕ್ಷಿಣಿಯಾದ ನೀವೇ ಹೀಗೆಂದರೆ ನಾನೇನು ಹೇಳಲಿ! ತಾಯೇ ನಿನ್ನ ಇಚ್ಛೆಗೆ ಭಂಗವಿಲ್ಲ. ಸತ್ಯಕ್ಕೆ ಚ್ಯುತಿಯಿಲ್ಲ ಎಂದರು. ಇವರಿಬ್ಬರ ನಡುವೆ ಬಹುಕಾಲ ವಾದವಿವಾದಗಳು ನಡೆಯಲಿಲ್ಲ. ಭಾರತೀ ದೇವಿಯ ಪ್ರಶ್ನೆ ಒಂದೇ. ಆ ಪ್ರಶ್ನೆಗೆ ಶಂಕರರು ಬೆರಗಾದರು. ಪ್ರಶ್ನೆಯಲ್ಲಿ ದೋಷವಿಲ್ಲ. ಅದು ಸತ್ಯಕ್ಕೆ ದೂರವೂ ಅಲ್ಲ. ಆದರೆ ಅದು ತನ್ನ ಅನುಭವದಲ್ಲಿಯೇ ಇಲ್ಲ. ಅನುಭವಕ್ಕೆ ದೂರವಾದ ಸತ್ಯವನ್ನು ಆಚಾರ್ಯರು ಮಾತನಾಡುವುದಿಲ್ಲ. ಗುರುಗಳನ್ನು ದಿಗ್ಭ್ರಾಂತಿಪಡಿಸಿದ ಪ್ರಶ್ನೆ ಯಾವುದೋ ಯಾವುದೋ ಎಂದು ನಮಗೆ ಕುತೂಹಲಕಾರಿಯಾಗಿರಬಹುದು. ಅದು ಬಾಲಾವಸ್ಥೆಯಕ್ರಮ, ಆಕೆಯ ಅಂತರ್ವಿಕಸಿತ ಕಳಾಪರಿಣಾಮ, ತ್ರಿಗುಣ ವ್ಯಾಪಾರಾತ್ಮಕವಾದ ಮರ್ಮವನ್ನು ಕುರಿತು ಆಕೆ ಪ್ರಶ್ನಿಸಿದಳು ಪ್ರಕೃತಿ ಪರಿಣಾಮ ಸ್ವರೂಪಿಣಿಯಾದ ಭಗವತ್ ಸುಂದರಿಯ ಮರ್ಮವನ್ನು ಸನ್ಯಾಸಿಯಾದ ನನ್ನನ್ನು ಸರ್ವಜ್ಞಳಾದ ತಾವು ಕೇಳಬಹುದೇ? ಈ ಅನುಭವ ನನಗೆ ಈ ಜನ್ಮದಲ್ಲಿಯೇ ಅಲ್ಲ ಜನ್ಮಾಂತರದ ವಾಸನದಲ್ಲಿಯೂ ಇಲ್ಲ. ಅನುಭವವಿಲ್ಲದೇ ನಾನು ಮಾತನಾ

Sri Vidyabharathi Book Centre, Sringeri

CC-O. In Public Domain. Digitized by eGangotri

ಡುವುದು ಉಚಿತವಲ್ಲ. ಆದರೂ ತಮ್ಮ ಪ್ರಶ್ನೆಗೆ ಪ್ರತ್ಯುತ್ತರ ಕೊಡಲು, ತಾಯೇ ನನಗೆ ಒಂದು ತಿಂಗಳು ವ್ಯವಧಿ ಕೊಡಬೇಕೆಂದು ಕೇಳಿ, ಶಂಕರರು ಶಿಷ್ಯರೊಡನೆ ಆ ಪ್ರದೇಶವನ್ನು ಬಿಟ್ಟರು. ಉಭಯಭಾರತಿಗೆ ಸ್ವಲ್ಪ ಉಸಿರಾಡಿತು. ತಮಗೆ ವಿಯೋಗ ನಿಶ್ಚಯವೆಂದು ಆ ದಂಪತಿಗಳು ಅರಿಯದೇ ಹೋಗಲಿಲ್ಲ.

'ಚಿಂತಾಕ್ರಾಂತರಾದ ಆಚಾರ್ಯರು ಶಿಷ್ಯರೊಡನೆ ಪರರಾಜ್ಯದ ಪರಿಸರ ಪ್ರಾಂತಕ್ಕೆ ಬರಲು ದೀನಾಲಾಪಗಳು ಕೇಳಿ ಬಂದವು. ಮುಂದೆ ಹೋಗಿ ನೋಡಲು ಅಕಾಲ ಮೃತ್ಯುವಿಗೆ ತುತ್ತಾದ ಆ ರಾಜ್ಯದ ಅರಸನ ಶವ ಕಂಡು ಬಂದಿತು. ಆದರ ಸುತ್ತಲೂ ಬಂಧು ಬಳಗದ ಪ್ರಲಾಪಗಳು. ಆ ದೃಶ್ಯವನ್ನು ನೋಡಿ ಶಂಕರರು ಶಿಷ್ಯರೊಡನೆ ಹೀಗೆಂದರು—ದೇಹಿಯು ಜನನ ಮರಣಗಳ ರಹಸ್ಯವನ್ನರಿಯದೇ ದೀನರಾದ ಈ ಪಾಮರರಿಗೆ ಸತ್ಯವೆಂಬುದು ತಿಳಿಸಬೇಕು. ಇವರ ದುಃಖವನ್ನು ಹೋಗಲಾಡಿಸಲು ನಾನು ಅರಸನ ಶವದಲ್ಲಿ ಪ್ರವೇಶಿಸಿ ಶಿವತ್ವವನ್ನು ಪ್ರಭೋದಿಸಿ ಪುನಃ ಬರುತ್ತೇನೆ. ಅಲ್ಲಿಯವರೆಗೂ ನೀವು ನನ್ನ ಶರೀರವನ್ನು ಈ ರಹಸ್ಯ ಪ್ರದೇಶದಲ್ಲಿ ರಕ್ಷಿಸಬೇಕೆಂದು ತಿಳಿಸಿ, ಶಂಕರರು ಅರಸನ ದೇಹದಲ್ಲಿ ಹೊಕ್ಕರು. ಅರಸನು ಎಚ್ಚರಗೊಂಡನು. ಸುತ್ತುಮುತ್ತಿರುವ ಜನಕ್ಕೆ ಆಶ್ಚರ್ಯವಾಯಿತು. ಪರಿಜನರೊಡನೆ ಅರಸ ತನ್ನ ರಾಜ್ಯವನ್ನು ಸೇರಿ, ಅಂತಃಪುರ ಕಾಂತೆಯರೊಡನೆ ಅರಮನೆಗೆ ಪ್ರವೇಶಿಸಿದರು. ಅಕಾಲ ಮೃತ್ಯುವನ್ನು ಹರಿಸಿದ ಈ ಹೊಸ ಅರಸನ ಆಡಳಿತ ವಿಚಿತ್ರವಾಗಿತ್ತು.

ಅಂತ:ಪುರಪುರಂಧ್ರೀ ಜನರೊಡನೆ ವರ್ತಿಸುವ ವಿಧಾನವೇ ಅಪೂರ್ವವಾಗಿತ್ತು. ಆ ಪರಿಜನರಿಗೆ ಅಲ್ಲ, ಪ್ರಧಾನಿಗಳಿಗೇ ಅಲ್ಲ, ರಾಣಿಯರಿಗೂ ಈ ಶರೀರದಲ್ಲಿರುವುದು ತಮ್ಮ ಅರಸನಲ್ಲ. ಇವರು ಯಾರೋ ಸಿದ್ಧಪುರುಷರು, ವೈರಾಗ್ಯ ಸಂಪನ್ನರು, ನಿರಂತರ ಸಂಚಲನಾತ್ಮಕ ಶೀಲರು, ಇವರ ಸನ್ನಿಧಾನದಿಂದ ನಮ್ಮಲ್ಲಿ ಅಜ್ಞಾನ, ಮಮತಾಹಂಕಾರಗಳು, ರಾಗಭೋಗಗಳು ರಾಜಿಸುವುದಿಲ್ಲ ಇವರು ಗದ್ದಿಗೆ ಮೇಲೆ ಹೀಗೆ ನಿಂತರೆ ಈ ರಾಜ್ಯವೇ ಅಲ್ಲ, ಇಡೀ ಬ್ರಹ್ಮಾಂಡವೇ ಧರ್ಮನಿರತವಾಗುತ್ತದೆ. ಆದರೆ ಇವರು ಬಹಳಕಾಲ ಈ ಶರೀರದಲ್ಲಿ ನಿಲ್ಲುವುದಿಲ್ಲ ಎಂಬ ಸಂಶಯವು ಅವರಲ್ಲಿ ಹುಟ್ಟಿತು. ತಕ್ಷಣವೇ ರಾಣಿಯರ ಅನುಮತಿಯಿಂದ ಪ್ರಧಾನಾಮಾತ್ಯರು ರಾಜ್ಯದಲ್ಲಿರುವ ಹೆಣಗಳನ್ನು ಸುಡಬೇಕೆಂದು ಆಜ್ಞೆಯನ್ನು ಹೊರಡಿಸಿದರು. ರಹಸ್ಯವಾಗಿ ಆಚಾರ್ಯರ ಶರೀರವನ್ನು ರಕ್ಷಿಸುತ್ತಿದ್ದ ಶಿಷ್ಯರಿಗೆ ರಾಜಭಟರ ಕಾಟ ಉತ್ಕಟವಾಯಿತು. ಈ ವಿಪತ್ತನ್ನು ಅರಿತು ಶಂಕರರು ಅರಸರ ಶರೀರವನ್ನು ಬಿಟ್ಟು ಸ್ವಶರೀರಕ್ಕೆ ಬಂದರು. ಈ ಪರಕಾಯ ಪ್ರವೇಶದಿಂದ ರಾಜ್ಞೀ ಸಿಂಹಾಸನಾಧೀಶ್ವರರ ಪ್ರಣಯ ಪ್ರಕೃತಿಯಲ್ಲಿ ಜೀವಬ್ರಹ್ಮೈಕ್ಯಾನುಸಂಧಾನವು ಆಚಾರ್ಯರಿಗೆ ದ್ಯೋತವಾಯಿತು. ತಕ್ಷಣವೇ ಶಿಷ್ಯರೊಡನೆ ಶಂಕರರು ಉಭಯಭಾರತಿಯನ್ನು ನೋಡಿದರು. ಆಕೆಯ ಪ್ರಶ್ನೆಗೆ ಸಮಾಧಾನ ಸಮುಚಿತವಾಗಿ ಕೊಟ್ಟರು ಕನ್ಯೆ, ರೋಹಿಣಿ, ಗೌರಿ, ವೃಷಲ ಆದಬಾಲ, ಷೋಡಷಿಯಾಗಿ, ಸುಂದರಿಯಾಗಿ, ತ್ರಿಪುರಸುಂದರಿಯಂತೆ ಮೆರೆಯುವುದು ಸತ್ಯ. ತ್ರಿಗುಣಾತ್ಮಳಾದ ಈ ಸ್ತ್ರೀ ತನ್ನ ಪ್ರತ್ಯಗಾತ್ಮನಾದ ಪುರುಷನಲ್ಲಿ ಐಕ್ಯವಾಗುವಳು. ಇಲ್ಲಿ ದ್ವೈತ ಅದ್ವೈತವಾಗುತ್ತದೆ. ಈ ಆನಂದದಲ್ಲಿ ದೇಶ, ಕಾಲಗಳೇ ಅಲ್ಲ ಕಡೆಗೆ ಇವರ ಸ್ಥಿತಿ ಗತಿಗಳೂ ಇವರಿಗೆ ಗೊತ್ತಾಗುವುದಿಲ್ಲ. ಈ ಅವಸ್ಥಾಕ್ರಮವೆಲ್ಲಾ ಸಗುಣದಲ್ಲಿ ಸಮುಚಿತವೇ, ಕ್ಷಣಿಕವಾದ ಈ ಆನಂದಾಂಶದಿಂದಲೇ ಬ್ರಹ್ಮಾಂಡ ಸಮುತ್ಪನ್ನವಾಯಿತು. ಪ್ರಭೇದಗಳಿಗೆ ಅತೀತವಾದ ನಿರ್ಗುಣದಲ್ಲಿ ಕಾಣುವ ಬ್ರಹ್ಮವೇ ಪರಿಪೂರ್ಣ. ಅದು ಅಖಂಡಚೈತನ್ಯ ಅಮೃತಾನಂದ. ಸಗುಣದಲ್ಲಿಯೂ ಜೀವ ಬ್ರಹ್ಮೈಕ್ಯವನ್ನು ನೋಡಬಹುದು. ಆದರೆ ನಿರಂತರ ನಿರ್ಗುಣದಲ್ಲಿ ಚೈತನ್ಯವಾಗಿ, ಅಖಂಡವಾಗಿ, ಅಪ್ರಮೇಯವಾಗಿ ಅನಿರ್ವಚನೀಯವಾಗಿ ಬ್ರಹ್ಮವಿರುತ್ತದೆ. ಇದು ಸ್ತ್ರೀ ಪುರುಷರಲ್ಲಿಯೂ ಜೀವಬ್ರಹ್ಮೈಕ್ಯಾಂಶವನ್ನು ರೇಖಾಮಾತ್ರವಾಗಿ ನೋಡಬಹುದು ಎಂದು ಆಚಾರ್ಯರು ತಮ್ಮ ನಿಲುವನ್ನು ಪ್ರತಿಪಾದಿಸಿದರು. ಉಭಯಭಾರತಿ ಮೌನ ತಾಳಿದರು. ಮಂಡನರು ಸನ್ಯಾಸಿಯಾಗಿ ಶಂಕರರನ್ನು ಹಿಂಬಾಲಿಸಿದರು. ಉಭಯಭಾರತಿ ತನಗೆ ಈ ನಿರ್ಗುಣ ತತ್ವದಲ್ಲಿ ಇನ್ನು ಸ್ಥಾನವಿಲ್ಲ ಎಂದು ಸತ್ಯಲೋಕಕ್ಕೆ ಹೋಗಲು ಸಿದ್ಧರಾದರು. ಆಗ ಶಂಕರರು ತಮ್ಮ ಮತ ಪ್ರಚಾರಕ್ಕೆ ಆಕೆಯನ್ನು ಸಹಕರಿಸಲು

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಾರ್ಥಿಸಿದರು. ಆ ಮಾತನ್ನು ಕೇಳದೆ ಎಲ್ಲೈ ಶಂಕರ ನಿಮ್ಮ ಜ್ಞಾನವೇ ನಿಮಗೆ ನೆರವಾಗಿರಲು ನನ್ನ ಹಂಗು ನಿಮಗೇಕೆ ಎಂದು ಮುಂದೆ ಹೊರಡಲು ಶಕ್ತರಾದ ಶಂಕರರು ಶಕ್ತಿತ್ರಯಕ್ಕೆ ಮಾರಿದ ಆದಿಶಕ್ತಿಯನ್ನು ಧ್ಯಾನಿಸಿ ವನದುರ್ಗಾ ಮಂತ್ರದಿಂದ ಉಭಯಭಾರತಿಯನ್ನು ಬಂಧಿಸಿದರು. ವಿಧಿಯಿಲ್ಲದೆ ಭಾರತಿ, ಶಂಕರರೊಡನೆ ಸಮಯಕ್ಕೆ ಸಿಕ್ಕಿ ಹೀಗೆಂದಳು. "ನನ್ನನ್ನು ನೀವು ಹಿಂದಿರುಗಿನೋಡದೇಇರುವವರೆಗೆನಾನುನಿಮ್ಮನ್ನು ಹಿಂಬಾಲಿಸುವೆ" ಎಂಬ ಮಾತಿಗೆ ಶಂಕರರೂ ಸಮ್ಮತಿಸಿದರು. ನಂತರ ವಿಜಯಯಾತ್ರೆ ಪ್ರಾರಂಭವಾಯಿತು.

ಸಿಂಹದಂತೆ ಶಂಕರ ಭಗವತ್ಪಾದರು ಉತ್ತರಾಪಥದಲ್ಲಿ ಸಂಚರಿಸಿ ಮೂರು ಪೀಠಗಳನ್ನು ಸ್ಥಾಪಿಸಿದರು. ಅವರ ಪ್ರಭಾವದಿಂದ ನಾಸ್ತಿಕ ಮತಗಳು ಪಲಾಯನವಾದವು. ಪಾಷಂಡ ಮತಗಳು ನಿರ್ಮೂಲವಾಯಿತು. ಸ್ವೋತ್ಕರ್ಷದಿಂದ ಪರಸ್ಪರ ಗುದ್ದಾಟಕ್ಕೆ ಸಿಕ್ಕಿದ ಶೈವ, ವೈಷ್ಣವ, ಶಾಕ್ತ, ಕೌಮಾರ, ಗಾಣಾಪತ್ಯಾದಿ ಆಸ್ತಿಕ ಮತಗಳನ್ನು ಸಂಸ್ಕರಿಸಿದರು. ಈ ಅವಾಂತರ ಪ್ರಭೇದಗಳನ್ನು ಕ್ಷಾಳನವಯಡಿ ಎಲ್ಲ ಮತಗಳ ಲಕ್ಷ್ಯ ಒಂದೇ ಎಂದು ಸಾರಿದರು. ಜ್ಞಾನವನ್ನು ಅನುಸರಿಸಿದ ಕರ್ಮದಂತೆ ಶಂಕರರನ್ನು ಹಿಂಬಾಲಿಸಿ ಉಭಯಭಾರತಿ ಅಲ್ಲ, ಸಾಕ್ಷಾತ್ ಶಾರದೆಯೇ ನಡೆಯುತ್ತಿದ್ದಳು. ಎಲ್ಲಿ ನೋಡಲೂ ಶಂಕರರ ವಿಜಯ ದುಂಧುಬಿಯೇ. ಅಲ್ಲಿಂದ ದಕ್ಷಿಣಾಪಥಕ್ಕೆ ತಿರುಗಿದರು. ಆಗ ದಕ್ಷಿಣಭಾರತ ಕಾಪಾಲಿಕ, ಶಾಕ್ತ, ಕಾಳ, ಭೈರವಾದಿ ವಾಮಾಚಾರಗಳಿಂದ ಭಯಂಕರವಾಗಿತ್ತು. ಈ ಮಾರ್ಗದಲ್ಲಿರುವ ಪ್ರಜೆಗಳನ್ನು ಸಂಸ್ಕರಿಸಿ ಆಚಾರ್ಯರು ಅವರನ್ನು ಸಮಯಾಚಾರಕ್ಕೆ ತಂದರು. ಹೀಗೆ ತನ್ನ ಅದ್ವೈತ ಮತವನ್ನು ಸ್ಥಾಪನೆ ಮಾಡುತ್ತಾ ಆಚಾರ್ಯರು ಕನ್ನಡ ನಾಡಿಗೆ ಬಂದರು.

ಕನ್ನಡ ನಾಡು ಅತ್ಯಂತ ಪ್ರಾಚೀನವೇ ಅಲ್ಲ, ಮಹತ್ತರ ಪುಣ್ಯಭೂಮಿಯೂ ಹೌದು. ಇಲ್ಲಿ ನಿಸರ್ಗ ರಮಣೀಯವಾದ ಪ್ರಕೃತಿ ಸೌಂದರ್ಯವಿದೆ. ಸೂರ್ಯರಶ್ಮಿಯೂ ಸೋಂಕದ ಕೀಕಾರಣ್ಯಗಳೂ, ಅರಣ್ಯಗಳ ಮಧ್ಯೆ ಮನೋಜ್ಞವಾದ ಶಬ್ದಗಳು ಸದಾ ಶ್ರವಣ ಶುಭವಾಗಿದ್ದುವು. ಈ ಪ್ರಶಾಂತ ಸುಂದರ ವನವಾಟಿಕೆಗಳಲ್ಲಿ ತೇಜಃಪುಂಜಗಳಾಗಿ ಅಲ್ಲಲ್ಲಿ ಮಹಾತ್ಮರು ಆತ್ಮಾನುಸಂಧಾದಿಂದ ಶೋಭಿಸುತ್ತಿದ್ದರು.

ಇಲ್ಲಿ ಆಚಾರ್ಯರಿಗೆ ಎದುರಾಗುವ ಜನರೇ ಇಲ್ಲ. ಇವರ ಪ್ರವೇಶದಿಂದ ಅವರಲ್ಲಿ ಮತ್ತಷ್ಟು ತೇಜ ಉಕ್ಕಿ. ಆ ಪ್ರಾಂತವೆಲ್ಲಾ ಶರಶ್ಚಂದ್ರಾತಪವಾಯಿತು. ಎಲ್ಲಿ ನೋಡಲೂ ಮೌನವೇ ಯಾವ ದಿಶೆಯಲ್ಲೂಕ್ಷೋಭವಿಲ್ಲ. ಮತ್ತಷ್ಟು ಮುಂದೆ ಹೋಗಲು ಆಕಾಶದ ತಾರೆಗಳಂತೆ ಅರಳಿದ ಮಹೋನ್ನತ ವೃಕ್ಷಾಗ್ರದ ಪುಷ್ಪಗಳು. ಆ ಚಂದನ ವೃಕ್ಷಗಳನ್ನು ಅಪ್ಪಿದ ಸರೀಸೃಪಗಳು. ತಮ್ಮ ಹೆಡೆಯ ನೆರಳಿನಿಂದ ಮಂಡೂಕಗಳ ಪ್ರಸವ ವೇದನೆಯನ್ನು ಹೋಗಲಾಡಿಸುವ ಸರೀಸೃಪಗಳು. ಈ ದೃಶ್ಯ ಆಶ್ಚರ್ಯವಾಗಿತ್ತು. ವೈರವಿಲ್ಲದೆ ಯಥೇಚ್ಛವಾಗಿ ಅಲ್ಲಿ ಮಹಾಸತ್ವ ಓಡಾಡುತ್ತಿತ್ತು. ತಾವು ಪ್ರಬೋಧಿಸಿದ ಮತಕ್ಕೆ ಅನುಗುಣವಾದ ಪ್ರಕೃತಿ ಇಲ್ಲೇ ಇದೆ ಎಂದು ಶಂಕರರು ಅಲ್ಲಿ ನಿಂತು ಮುಂದೆ ನೋಡಿದರು. ಬೆರಗಾದರು. ನಿಶ್ಚಲವಾಗಿ ನಿಂತಿರುವ ಮಹೋನ್ನತ ಗಿರಿಶೃಂಗ, ಆ ದಡದಲ್ಲಿಯೇ ನಿರಂತರ ಸಂಚಲನಾತ್ಮಕವಾದ ತುಂಗಾ ತರಂಗಿಣಿ. ರಾಮಾಯಣ ಕಾಲದ ಋಷ್ಯಶೃಂಗನ ಪವಿತ್ರಶಾಂತ ಪ್ರಕೃತಿಗೆ ಪ್ರತೀಕವಾಗಿ ಊರ್ಧ್ವಪಥವನ್ನು ಮುಟ್ಟುತಿರುವ ಪರ್ವತ ಪಂಕ್ತಿ ಒಂದು ಕಡೆ, ನಿತ್ಯನೂತನ ವಿಲಾಸ ಪ್ರಭಾವದಿಂದ ಸದಾ ಮನೋಜ್ಞ ಮಂಜುಲಾರ್ಭಟ ತರಂಗಗಳ ಶೋಭೆ ಮತ್ತೊಂದು ಕಡೆ. ಒಂದು ಸ್ಥಿರ; ಮತ್ತೊಂದು ಚಂಚಲ ಒಂದು ಗಭೀರ; ಮತ್ತೊಂದು ಮಧುರ. ಒಂದು ಊರ್ಧ್ವಗಾಮಿ; ಮತ್ತೊಂದು ಅಧೋ ವ್ಯಾಪಿ. ಪರಸ್ಪರ ವಿರುದ್ಧಗಳಾಗಿ ಕಾಣುವ ತುಂಗಾ ಶೃಂಗಗಿರಿ ದೃಶ್ಯ ಸುಮನೋಜ್ಞವಾಗಿದೆ. ಇದು ಒಂದೇ ತತ್ವದ ಭಿನ್ನಾಕೃತಿಗಳು ಅಹೋ ! ಇದು ಎಷ್ಟು ನಿತ್ಯವೊ ಅದು ಅಷ್ಟು ಸತ್ಯ. ಇದು ಎಂತಹ ಸೌಂದರ್ಯವೋ ಅದು ಅಂತಹ ಚೈತನ್ಯ. ಎರಡೂ ಆನಂದ ಪ್ರದವೇ. ಪ್ರತಿಯೊಂದು ದೃಶ್ಯವೂ ಆನಂದವೇ. ಚರಾಚರಾತ್ಮಕವಾದ ಬ್ರಹ್ಮಾಂಡವೆಲ್ಲವೂ ಬ್ರಹ್ಮ ಸ್ವರೂಪವೇ. ಇಲ್ಲಿಗೆ ನನ್ನ ಕೆಲಸ ಪೂರ್ಣವಾಯಿತು. ಈ ಭೂಮಂಡಲವೇ ಅಖಂಡ ಬ್ರಹ್ಮ ತತ್ವವನ್ನು ಸಾರುತ್ತದೆ ಎಂದು ಆಚಾರ್ಯರು ಹಿಂದಿರುಗಿದರು. ಎಂದರೆ ಅಂತರ್ಮುಖರಾದರು. ಸಹಸ್ರಾರು ಚಂದ್ರಕಳೆ ಉಕ್ಕಿ ಮೇಲಕ್ಕೆ ಏರಲು ಶಂಕರರು ಚಂದ್ರಮೌಳಿಯಾದರು ಆಚಾರ್ಯರು ಹಿಂದಿರುಗಿದ ಕ್ಷಣವೇ ಉಭಯಭಾರತಿ ನಿಶ್ಚಲವಾದ ಶಾರದಾ ಪ್ರತಿಮೆಯಾದಳು ಕರ್ಮಜ್ಞಾನಗಳ ಸಮುಚ್ಚಯದಂತೆ ಶಾರದಾ ಚಂದ್ರಮೌಳಿಗಳ ಪ್ರಭೆ ಸದಾ ಜಗತ್ ಕಲ್ಯಾಣಕಾರಿಯಾಗಿದೆ. ಇದೇ ನಮ್ಮ ನಾಡಿನ ಜೀವನಾಡಿ. ಇದೇ ಶೃಂಗೇರಿ. ಇದರ ಮಹತ್ತೇ ದಶದಿಶಾವ್ಯಾಪ್ತವಾಗುತ್ತಿದೆ. ★

Sri Vidyabharathi Book Centre, Sringeri

CC-O. In Public Domain. Digitized by eGangotri

ಗುರುದೇವ ಶ್ರೀ ವಿದ್ಯಾತೀರ್ಥ

ಲೇಖಕರು : ಲ. ನ. ಶಾಸ್ತ್ರೀ

ಶ್ರೀ ಚಂದ್ರಶೇಖರ ಭಾರತಿಗಳವರ ಕರಕಮಲ ಸಂಜಾತರಾದ ಶ್ರೀಮದಭಿನವ ವಿದ್ಯಾತೀರ್ಥ ಶ್ರೀ ಪಾದರವರ ಪೂರ್ವಾಶ್ರಮದ ಹೆಸರು ಶ್ರೀ ಶ್ರೀನಿವಾಸರೆಂದು. ಇವರ ಪೂರ್ವಜರು ಸ್ಮೃತಿ ಮತ್ತು ಧರ್ಮಶಾಸ್ತ್ರಗಳಲ್ಲಿ ಉದ್ದಾಮ ಪಂಡಿತರಾಗಿದ್ದು ನ್ಯಾಯಾಧೀಶರಾಗಿದ್ದವರು. ಕರ್ನಾಟಕ ಸಂಗೀತದ ತ್ರಿಮೂರ್ತಿಗಳಲ್ಲಿ ಶ್ರೇಷ್ಠತಮರಾಗಿದ್ದ ಶ್ರೀ ತ್ಯಾಗರಾಜರವರೂ ಸಹ ಇವರ ಭಿನ್ನ ವಂಶಕ್ಕೆ ಸೇರಿದವರೇ.

ಶ್ರೀ ಶ್ರೀನಿವಾಸರಿಗೆ ದೈವಭಕ್ತಿ, ಧರ್ಮನಿಷ್ಠೆ ಮುಂತಾದ ಗುಣಗಳು ಬಾಲ್ಯದಲ್ಲಿಯೇ ಒಲಿದಿದ್ದವು- ಪೂಜೆ, ಭಜನೆ, ಪವಿತ್ರ ಗ್ರಂಥಗಳ ಅಧ್ಯಯನ ಇವುಗಳಲ್ಲಿ ಮೊದಲಿನಿಂದಲೂ ಆಸಕ್ತರಾಗಿದ್ದ ಶ್ರೀನಿವಾಸರು ಜಗದ್ಗುರು ಶ್ರೀ ಚಂದ್ರಶೇಖರ ಭಾರತಿಗಳವರ ಕಟಾಕ್ಷಕ್ಕೆ ಪಾತ್ರರಾದರು. ಬೆಂಗಳೂರಿನಲ್ಲಿ ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿದ್ದ ಶ್ರೀನಿವಾಸರನ್ನು ಬೆಂಗಳೂರಿನಿಂದ ಶೃಂಗೇರಿಗೆ ಕರೆಯಿಸಿಕೊಳ್ಳಲಾಯಿತು. ಅವರಿಗೆ ಶ್ರೀ ಗುರುಗಳಾಜ್ಞೆಯಂತೆ ಶ್ರೀ ಶಾರದಾಂಬಾ ಸನ್ನಿಧಿಯಲ್ಲಿಯೇ ಉಪನಯನವೂ ಆಯಿತು. ಮತ್ತು ಮಠದ ಶ್ರೀ ಸದ್ವಿದ್ಯಾಸಂಜೀವಿನೀ ಪಾಠಶಾಲೆಯಲ್ಲಿ ಪ್ರವೇಶವೂ ಆಯಿತು. ಪ್ರೌಢವಿದ್ಯೆಯಲ್ಲಿಯೂ, ಶಾಸ್ತ್ರಗಳಲ್ಲಿಯೂ ಕ್ರಮವಾಗಿ ವಿದ್ಯಾಭ್ಯಾಸವೂ ಜರುಗಿತು.

ದಿನೇ ದಿನೇ ಪ್ರವರ್ಧಮಾನಕ್ಕೆ ಬರುತ್ತಿದ್ದ ಶ್ರೀ ಶ್ರೀನಿವಾಸರನ್ನು ತಮ್ಮ ಶಿಷ್ಯರನ್ನಾಗಿ ಪರಿಗ್ರಹಿಸುವ ಉದ್ದೇಶದಿಂದಲ್ಲವೇ ಶ್ರೀ ಚಂದ್ರಶೇಖರಭಾರತಿಗಳವರು ಅವರನ್ನು ಶೃಂಗೇರಿಗೆ ಕರೆಯಿಸಿದ್ದು ? ಶ್ರೀ ಜಗದ್ಗುರುಗಳು ಹೀಗೆ ಮಾಡಲು ಇದ್ದ ಕಾರಣಗಳು ಎರಡು : ಮೊದಲನೆಯದು ತಾವು ಸನ್ಯಾಸಾಶ್ರಮ ಪ್ರವೇಶ ಮಾಡಿದಾ ಗ ತಮಗೆ ತಮ್ಮ ಗುರುಗಳಿಂದ ಪ್ರತ್ಯಕ್ಷ ನಿರ್ದೇಶನವನ್ನು ಪಡೆದುಕೊಳ್ಳಲಾಗಲಿಲ್ಲ, ತಮ್ಮ ಗುರುಗಳು ಆ ಮೊದಲೇ ವಿದೇಹ ಮುಕ್ತಿ ಹೊಂದಿದ್ದುದರಿಂದ, ತಮ್ಮ ಶಿಷ್ಯರನ್ನು ತಮ್ಮ ಮಾರ್ಗದರ್ಶನದಲ್ಲಿಯೇ ತಯಾರು ಮಾಡಿ ಅಭ್ಯುದಯದ ಹಾದಿಯಲ್ಲಿ ಪದಾರ್ಪಣ ಮಾಡಿಸುವುದು, ಎರಡನೆಯದು ತಮ್ಮ ಶಿಷ್ಯರು ಎಲ್ಲಾ ವೈದಿಕ, ಲೌಕಿಕ ಆಚಾರ ವ್ಯವಹಾರಗಳಲ್ಲಿ ಪರಿಣತಿಯನ್ನು ಹೊಂದಿ ಮಠದ ಎಲ್ಲ ಜವಾಬ್ದಾರಿಯನ್ನೂ ವಹಿಸಿಕೊಂಡಲ್ಲಿ ತಾವು ಪೂರ್ಣ ವಿರಾಮ ಹೊಂದಿ ತಪೋನಿರತರಾಗಿರಬಹುದೆಂದು. ಇದಕ್ಕೆ ಶ್ರೀ ಜಗದಂಬೆಯ ಅನುಜ್ಞೆಯೂ ಇತ್ತು.

ಆದರಂತೆಯೇ ಪ್ರಜೋತ್ಪತ್ತಿ ಸಂವತ್ಸರದ ಜ್ಯೇಷ್ಠ ಶುದ್ಧ ಪಂಚಮಿಯ ಶುಭದಿನದಂದು (ಮೇ ೨೨, ೧೯೩೧) ಶ್ರೀ ಶ್ರೀನಿವಾಸರಿಗೆ ಸಂನ್ಯಾಸದೀಕ್ಷೆಯನ್ನಿತ್ತು ಶಿಷ್ಯರನ್ನಾಗಿ ಸ್ವೀಕರಿಸಿದರು. ಶ್ರೀಮದಭಿನವ ವಿದ್ಯಾತೀರ್ಥರೆಂದು ತುರೀಯಾಶ್ರಮ ಪ್ರವೇಶ ಮಾಡಿದ ಶ್ರೀ ಜಗದ್ಗುರುಗಳವರು ಹಿರಿಯ ಗುರುಗಳ ನಿಕಟ ಸಂಪರ್ಕ, ದಿವ್ಯಮಾರ್ಗದರ್ಶನ ಮತ್ತು ಉಪದೇಶಗಳನ್ನು ಇಪ್ಪತ್ತುಮೂರು ವರ್ಷಗಳ ಕಾಲ ಸತತವಾಗಿ ಪಡೆದ ಮಹಾ ಭಾಗ್ಯಶಾಲಿಗಳು. ಶ್ರೀ ಚಂದ್ರಶೇಖರ ಭಾರತಿಗಳವರ ದಿವ್ಯವಾಣಿಯನ್ನು ಒಮ್ಮೆ ಆಲೈಸಿದ್ದರೇ ಸಾಕು, ಅದೇ ಎಂದೆಂದಿಗೂ ನಮಗೆ ದಾರಿದೀಪವಾಗಿ ನಮ್ಮನ್ನು ಉದ್ಧರಿಸುತ್ತದೆ. ಅವರ ದಿವ್ಯ ಕಟಾಕ್ಷಕ್ಕೆ ಒಮ್ಮೆ ಪಾತ್ರರಾಗಿದ್ದರೆ ಸಾಕು, ಅವರ ಶ್ರೀಮೂರ್ತಿ ಹೃದಯದಲ್ಲಿ ನೆಲೆಸಿ ಎಂದೆಂದಿಗೂ ರಕ್ಷಿಸುತ್ತದೆ, ತಪ್ಪು ಹೆಜ್ಜೆಯಿಡುವ ಮಗುವನ್ನು ಕಾಯುವ ತಾಯಿಯಂತೆ ! ಅಂತಹುದರಲ್ಲಿ ಇಪ್ಪತ್ತುಮೂರು ವರ್ಷಗಳು ಸತತವಾಗಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಅವರ ದಿವ್ಯ ಸನ್ನಿಧಿಯಲ್ಲಿ ಬೆಳೆದು ಅವರಿಂದ ಉಪದೇಶ ಹೊಂದಿದ್ದ ಶ್ರೀ ವಿದ್ಯಾತೀರ್ಥರ ಅದೃಷ್ಟ ಎಷ್ಟು ಶ್ರೇಷ್ಠತಮವಾಗಿರಬೇಕು !

ವೇದಶಾಸ್ತ್ರಗಳಲ್ಲಿಯೂ, ಆತ್ಮಸಾಧನೆಯಲ್ಲಿಯೂ ಪ್ರಗತಿ ಹೊಂದುತ್ತಾ ಬಂದ ಶ್ರೀ ವಿದ್ಯಾತೀರ್ಥರು ಹಿರಿಯ ಗುರುಗಳಿಗೆ ಎಲ್ಲಾ ವಿಧದಲ್ಲಿಯೂ ನೆರವಾದರು. ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹ ಭಾರತಿಯವ ರಂತೆಯೇ ಆಧ್ಯಾತ್ಮಿಕ ಮಹತ್ವ, ತಪೋನುಷ್ಠಾನಗಳಲ್ಲಿ ಶ್ರೀ ವಿದ್ಯಾತೀರ್ಥರು ಪ್ರಖ್ಯಾತರಾಗುತ್ತಾರೆಂದು ಶ್ರೀ ಚಂದ್ರಶೇಖರ ಭಾರತಿಗಳವರು ನುಡಿದಿದ್ದರು. ಶ್ರೀ ಗುರುಗಳು ತಮ್ಮ ಶಿಷ್ಯರಲ್ಲಿ ವಾತ್ಸಲ್ಯಪೂರಿತರಾಗಿದ್ದು, ತಮ್ಮ ಆಶೀರ್ವಾದ ಅನುಗ್ರಹ ಮತ್ತು ದಿವ್ಯರಕ್ಷೆ ಯಲ್ಲಿಯೇ ಅವರನ್ನು ತಿದ್ದಿದರು, ರೂಪಿಸಿದರು. ಶ್ರೀ ವಿದ್ಯಾತೀರ್ಥರು ತಮ್ಮ ಗುರುವರ್ಯರ ನಿರೀಕ್ಷಣೆ ಯಂತೆಯೇ ಆಧ್ಯಾತ್ಮಿಕ ವಿದ್ಯೆಯಲ್ಲಿ ಉಚ್ಚ ನೈಪುಣ್ಯ ವನ್ನು ಪಡೆದು ತಮ್ಮ ಅಭಿಧಾನಕ್ಕೆ ತಕ್ಕಂತೆ ಶ್ರೀ ವಿದ್ಯಾತೀರ್ಥರೇ ಆದರು.

ತಮ್ಮ ಗುರುಗಳು ವಿದೇಹ ಮುಕ್ತಿ ಹೊಂದಿ ಬ್ರಹ್ಮೈಕ್ಯರಾದ ಬಳಿಕ ಶ್ರೀ ವಿದ್ಯಾತೀರ್ಥರು ಸ್ವಲ್ಪ ಕಾಲ ತಪೋನುಷ್ಠಾನನಿರತರಾಗಿದ್ದು, ಆ ಬಳಿಕ ಅನೇಕ ಶಿಷ್ಯರ ಪ್ರಾರ್ಥನೆಯಂತೆ ಭಾರತದ ಪ್ರವಾಸ ಕೈಗೊಂಡರು. ಸನಾತನ ಧರ್ಮ ಪ್ರಸಾರಕ್ಕಾಗಿ, ಸಂಪ್ರದಾಯದಂತೆ ಶೃಂಗೇರಿಯ ಎಲ್ಲಾ ಆಲಯ ಗಳಲ್ಲಿಯೂ ಅರ್ಚನಾದಿಗಳನ್ನು ನಡೆಸಿ, ತುಂಗಾ ಮೂಲಕ್ಕೆ ಪ್ರಯಾಣ ಬೆಳೆಸಿ ಅಲ್ಲಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೊಲ್ಲೂರು ಶ್ರೀ ಮೂಕಾಂಬಿಕೆಯನ್ನು ಪೂಜಿಸಿ, ಆ ಬಳಿಕ ಕೇರಳದಲ್ಲಿ ಸಂಚಾರಗೈದು ಕಾಲಟೀ ಮಹಾಕ್ಷೇತ್ರಕ್ಕೆ ಬಂದರು. ಆದ್ಯಗುರು ಶ್ರೀ ಶಂಕರ ಭಗವತ್ಪಾದರ ಮತ್ತು ಶ್ರೀ ಶಾರದಾ ಸನ್ನಿಧಿಯಲ್ಲಿ ಚಾತುರ್ಮಾಸ್ಯ ಸಂಕಲ್ಪಗೈದರು. ನವರಾತ್ರೀ ಉತ್ಸವ ವನ್ನು ನೆರವೇರಿಸಿದರು. ಅಲ್ಲಿಯೇ ಶ್ರೀ ಗಣೇಶೋತ್ಸವದ ಅಂಗವಾಗಿ ವಿದ್ವತ್ಸದಸ್ಸೂ ನಡೆದು ಅನೇಕ ವಿದ್ವಾಂಸರು ಗಳು ಬಹುವಾಗಿ ಗೌರವಿಸಲ್ಪಟ್ಟರು. ಸುಮಾರು ಹನ್ನೆರಡು ವರ್ಷಗಳ ಕಾಲ ಸತತವಾಗಿ ಭಕ್ತಾನುಗ್ರಹ ಕ್ಕಾಗಿ ಸಂಚಾರದಲ್ಲಿಯೇ ಇದ್ದ ಶ್ರೀ ಶ್ರೀಗಳವರು ದೇಹ ಶ್ರಮವನ್ನೂ ಗಣನೆಗೆ ತಾರದೆ ಜ್ಞಾನಜ್ಯೋತಿಯನ್ನು ಎಲ್ಲೆಲ್ಲಿಯೂ ಬೆಳಗಿಸಿದರು. ಕೇರಳ, ತಮಿಳುನಾಡು, ಆಂಧ್ರ ಮತ್ತು ಕರ್ನಾಟಕಗಳಲ್ಲಿ ವಿಶೇಷವಾಗಿ ಸಂಚರಿ ಸಿದ ಗುರುವರ್ಯರು ಅನೇಕ ಸ್ಥಳಗಳಲ್ಲಿ ಶ್ರೀ ಶಂಕರ ಮಠಗಳನ್ನು ಸ್ಥಾಪಿಸಿದರು. ಅನೇಕ ದೇವಾಲಯಗಳ ಮೂರ್ತಿ ಪ್ರತಿಷ್ಠೆ, ಕುಂಭಾಭಿಷೇಕಗಳನ್ನು ಸ್ವಹಸ್ತ ದಿಂದ ನೆರವೇರಿಸಿದರು. ಮೈಸೂರಿನ ರುದ್ರಪಟ್ಟಣದಲ್ಲಿ ಮಹಾರುದ್ರಯಾಗವು ಶ್ರೀ ಶ್ರೀಗಳವರ ನೇತೃತ್ವದಲ್ಲಿಯೇ ನಡೆದು ಯಾಗಾರಂಭವಾದ ದಿನವೇ ನಮ್ಮ ಸೈನಿಕರು ಅನ್ಯಾಕ್ರಮಣವಾಗಿದ್ದ ಗೋವೆಯನ್ನು ವಶಪಡಿಸಿ ಕೊಳ್ಳಲು ಯುದ್ಧ ದುಂದುಭಿಯನ್ನು ಮೊಳಗಿಸಿದರು. ಶ್ರೀ ಶ್ರೀಗಳು ತಮ್ಮ ಸಂಚಾರ ಕಾಲದಲ್ಲಿ ಅನೇಕ ವಿದ್ವತ್ಸಭೆಗಳನ್ನು ನಡೆಸಿ ವಿದ್ವಾಂಸರಿಗೆ ಆಶ್ರಯದಾತ ರಾದರು, ಅನುಗ್ರಹ ಮಾಡಿದರು.

ಶೃಂಗೇರಿಯ ಪೀಠಾಚಾರ್ಯರಲ್ಲಿ ಭರತಖಂಡ ವನ್ನೆಲ್ಲಾ ಸಂಚರಿಸಿ, ಧರ್ಮದುಂದುಭಿ ಮೊಳಗಿಸಿದವರಲ್ಲಿ ಶ್ರೀ ಶಂಕರರ ಅನಂತರ ಶ್ರೀ ಶ್ರೀ ಅಭಿನವ ವಿದ್ಯಾ ತೀರ್ಥರು ಅಗ್ರಗಣ್ಯರು. ಶ್ರೀ ಶ್ರೀಗಳವರು ಕನ್ಯಾ ಕುಮಾರಿಯಿಂದ ಕಾಶ್ಮೀರದವರೆಗೆ ಮಾತ್ರವಲ್ಲದ, ನೇಪಾಳದಲ್ಲಿಯೂ ಯಾತ್ರೆ ನಡೆಸಿ, ಶ್ರೀ ಶ್ರೀ ಶಂಕರರ ಅವತಾರದ ಉದ್ದೇಶವಾದ ಧರ್ಮಪ್ರಸಾರವನ್ನು ಮಾಡಿದರು.

ಹದಿಮೂರು ಹದಿನಾಲ್ಕನೆಯ ಶತಮಾನದಲ್ಲಿ ಜಡತೆ ಕವಿದು ನಮ್ಮ ದೇಶದ ಲೌಕಿಕ ಮತ್ತು ಧಾರ್ಮಿಕ ಜೀವನದಲ್ಲಿ ಪ್ರಕ್ಷುಬ್ಧ ಪರಿಸ್ಥಿತಿಯುಂಟಾಗಿತ್ತು. ಆಗ ತಪಶ್ಚಕ್ರವರ್ತಿ ಮಹಾಯೋಗಿ ಶ್ರೀ ವಿದ್ಯಾತೀರ್ಥರು ವ್ಯಾಖ್ಯಾನ ಪೀಠದಲ್ಲಿದ್ದರು. ಆ ಮಹಾಪೂಜ್ಯರು ಸೊರಗಿ ಹೋಗಿದ್ದ ನಾಡಿಗೆ ದಿವ್ಯಚೇತನವನ್ನಿತ್ತು ಧರ್ಮ ಜಾಗೃತಿಯನ್ನುಂಟುಮಾಡಿದ್ದರು. ಪ್ರಖ್ಯಾತರಾದ ಶಿಷ್ಯರನ್ನು ಶ್ರೀ ಭಾರತೀತೀರ್ಥ ಮತ್ತು ಶ್ರೀ ವಿದ್ಯಾ ರಣ್ಯರಂತಹ ಜಗತ್ಪೂಜ್ಯರನ್ನು, ದೇಶೋದ್ಧಾರಕ್ಕಾಗಿ ನಿಯಮಿಸಿದ್ದರು. ಒಂದು ಶತಮಾನಕ್ಕಿಂತ ಹೆಚ್ಚು ಕಾಲ ಶೃಂಗೇರಿ ಪೀಠದಲ್ಲಿ ವಿರಾಜಮಾನರಾಗಿದ್ದ ಆ

Sri Vidyabharathi Book Centre, Sringeri

CC-O. In Public Domain. Digitized by eGangotri

ಗುರುಗಳು ತಮ್ಮ ದಿವ್ಯೋಪದೇಶದಿಂದ ಸನಾತನ ಧರ್ಮವನ್ನು ಉದ್ಧರಿಸಿ ಹೊಸದೊಂದು ಸಾಮ್ರಾಜ್ಯಕ್ಕೆ ಅಸ್ತಿಭಾರ ಹಾಕಿದರು. ಅವರ ಆಶೀರ್ವಾದದ ಫಲವೇ ಅಲ್ಲವೆ ವಿಜಯನಗರ ಸಾಮ್ರಾಜ್ಯ ? ಇಂದು ಪಾಶ್ಚಾತ್ಯ ನಾಗರಿಕತೆಯ ಪ್ರಭಾವ ನಮ್ಮ ಜೀವನದ ಎಲ್ಲಾ ರಂಗಗಳ ಮೇಲೆ ವಿಪರೀತವಾಗಿ ನಾವು ಭಾರತೀಯತೆಯನ್ನೇ ಕಡೆಗಣಿಸುತ್ತಿದ್ದೇವೆ. ನಮಗೆ ಸ್ವಾಭಾವಿಕವಾಗಿದ್ದ ಶಾಂತಿ, ತೃಪ್ತಿ, ಸಹನೆ ಮುಂತಾದ ಸದ್ಗುಣಗಳು ನಾಶವಾಗಿ ಪ್ರಲೋಭನೆಗಳ ದಾಸ್ಯ ನಮ್ಮನ್ನು ಅಧೋಮಾರ್ಗಕ್ಕೆಳೆಯುತ್ತಿದೆ ಧರ್ಮದಲ್ಲಿ ಶ್ರದ್ಧೆ ನಂಬಿಕೆಗಳು ಸಡಿಲವಾಗುತ್ತಾ ಬಂದು ಪಾರಮಾರ್ಥಿಕ ದೃಷ್ಟಿ ಮಸಕಾಗುತ್ತಿದೆ ಇಂತಹ ಕ್ಷೋಭೆಯಿಂದ ನಮ್ಮನ್ನು ಪಾರುಮಾಡುವ ಮಹಾನುಭಾವರೊಬ್ಬರ ಆಗತ್ಯ ಇಂದು ಹೆಚ್ಚಾಗಿದೆಯಲ್ಲವೆ ? ಧರ್ಮದ ಗ್ಲಾನಿಯಾದಾಗ ಅವತರಿಸಿದ ಆ ಶ್ರೀ ವಿದ್ಯಾತೀರ್ಥರೇ ಇಂದು ಅದೇ ಪರಿಸ್ಥಿತಿಯಲ್ಲಿ ಶ್ರೀಮದಭಿನವ ವಿದ್ಯಾತೀರ್ಥರಾಗಿ ಅವತರಿಸುವ ಆಗತ್ಯ ಬಂದಿತು.

ಶ್ರೀ ವಿದ್ಯಾತೀರ್ಥರು ತಮ್ಮ ವ್ಯಕ್ತಿತ್ವವನ್ನು ವೈಶಿಷ್ಟ್ಯಪೂರ್ಣಗೊಳಿಸಿದ್ದರು. ವೇದಶಾಸ್ತ್ರಗಳಲ್ಲಿ ಆಳವೂ ವಿಶಾಲವೂ ಆದ ಪಾಂಡಿತ್ಯ, ಆ ಪಾಂಡಿತ್ಯಕ್ಕೆ ಒಪ್ಪುವ ಪ್ರತಿಭೆ, ಎಂತಹವರನ್ನೂ ಆಕರ್ಷಿಸುವ ದಿವ್ಯ ತೇಜಸ್ಸು, ನಿರರ್ಗಳವಾದ ವಾಗ್ವೈಖರಿ, ಧರ್ಮಪೀಠಾಧಿಪತಿಗಳಲ್ಲಿರಬೇಕಾದ ಇತರ ಮತಗಳಲ್ಲಿ ಸಹಾನುಭೂತಿ ಮತ್ತು ಗೌರವ, ಮೇಲುಕೀಳೆನ್ನದೆ ಎಲ್ಲರೂ ಭಗವತ್ಕಟಾಕ್ಷಕ್ಕೆ ಸಲ್ಲುವರೆನ್ನುವ ನಂಬಿಕೆ–ಇವೆಲ್ಲಾ ಶ್ರೀ ವಿದ್ಯಾತೀರ್ಥರ ಸ್ವಭಾವದಲ್ಲಿಯೇ ಹಾಸುಹೊಕ್ಕಾಗಿದ್ದವು.

ಸಂಚರಿಸಿದೆಡೆಗಳಲ್ಲೆಲಾ ಎಲ್ಲರಿಂದಲೂ ಅತ್ಯಂತ ಸಾಧಾರಣರಿಂದ ಹಿಡಿದು ರಾಜ, ಮಹಾರಾಜ, ರಾಜ್ಯಪಾಲ ರಾಷ್ಟ್ರಾಧ್ಯಕ್ಷರವರೆಗೆ ಗೌರವಿಸಲ್ಪಟ್ಟು ತಮ್ಮ ಸರಳವೂ, ನಿರರ್ಗಳವೂ, ಗಂಭೀರವೂ ಆದ ಶೈಲಿಯಿಂದ ನಾತನ ಧರ್ಮದ ತತ್ವವನ್ನು ಪ್ರಸಾರ ಮಾಡುತ್ತಾ, ಶ್ರದ್ಧೆ ನಂಬಿಕೆಗಳನ್ನು ಎಲ್ಲೆಲ್ಲಿಯೂ ಬಿತ್ತುತ್ತಿದ್ದರು. ಸಂಸ್ಕೃತ, ಕನ್ನಡ, ತೆಲುಗು, ತಮಿಳು ಮತ್ತು ಹಿಂದೀ ಮುಂತಾದ ಭಾಷೆಗಳಲ್ಲಿ ನಿರರ್ಗಳವಾಗಿ ಪ್ರವಹಿಸುವ ಅವರ ಉಪದೇಶ ಲಹರಿ ಎಂತಹವರಲ್ಲಿಯೂ ಆಸ್ತಿಕ್ಯವನ್ನು ಮೂಡಿಸುತ್ತಿತ್ತು ಅವರು ನಡೆಸುವ ಶ್ರೀ ಶಾರದಾ ಚಂದ್ರಮೌಳೀಶ್ವರ ಪೂಜೆಯು ಭಕ್ತಿ ನಮ್ರತೆಗಳನ್ನು ಚಿಮ್ಮಿಸುತ್ತಿತ್ತು. ಶ್ರೀಮತ್ ಶಂಕರ ಭಗವತ್ಪಾದರು ಭಾರತವೆಲ್ಲವೂ ಒಂದೇ ರಾಷ್ಟ್ರ ಎಂಬುದರ ಸಂಕೇತವಾಗಿಯೇ ಅಲ್ಲವೇ ನಾಡಿನ ನಾಲ್ಕು ದಿಕ್ಕುಗಳಲ್ಲಿಯೂ ಚತುರಾಮ್ನಾಯ ಪೀಠಗಳನ್ನು ಸ್ಥಾಪಿಸಿದ್ದು ? ಶ್ರೀ ವಿದ್ಯಾತೀರ್ಥರೂ ಸಹ ಆ ಏಕತೆಯ ದುಂದುಭಿಯನ್ನು ತಾವು ಹೋದೆಡೆಗಳಲ್ಲೆಲ್ಲಾ ಮೊಳಗಿಸುತ್ತಿದ್ದರು ಅಖಂಡ ಭಾರತಕ್ಕೆಲ್ಲಾ ಒಂದೇ ಸಂಸ್ಕೃತಿಯೆಂದೂ, ಆಂಧ್ರ ಕರ್ನಾಟಕ, ದ್ರಾವಿಡ ಸಂಸ್ಕೃತಿಯೆಂದು ಭಿನ್ನಭಿನ್ನವಲ್ಲವೆಂದೂ, ಅವೆಲ್ಲವೂ ಒಂದೇ ಸಂಸ್ಕೃತಿಯ ವಿವಿಧ ರೂಪಗಳೆಂದೂ ಸ್ಪಷ್ಟಪಡಿಸುತ್ತಿದ್ದರು ಶ್ರೀ ಶ್ರೀಗಳವರು. ಧರ್ಮವೇ ನಮ್ಮ ಆಧಾರ; ಸಾಮಾಜಿಕ ಜೀವನದಲ್ಲಿ ಸತ್ಯ, ಅಹಿಂಸೆ, ಕರುಣೆ, ಅನುಕಂಪ, ಸಾತ್ವಿಕತೆ ಮುಂತಾದ ಸಾಮಾನ್ಯ ಧರ್ಮಗಳನ್ನು ಪಾಲಿಸುವುದರಿಂದ ಭಾರತದಲ್ಲಿಯೇ ಏಕೆ, ಅಖಂಡ ವಿಶ್ವದಲ್ಲಿಯೇ ಐಕ್ಯತೆಯನ್ನು ಸಾಧಿಸಬಹುದೆಂದು ಉಪದೇಶಗೈಯುತ್ತಿದ್ದರು. ಶ್ರೀ ವಿದ್ಯಾತೀರ್ಥರು. ಭಾರತೀಯರಲ್ಲಿ ಭಾವೈಕ್ಯ ಮೂಡಬೇಕಾದರೆ, ಧರ್ಮಭಾವನೆ ಉದ್ದೀಪನಗೊಳ್ಳಬೇಕೆಂದು ಆಶಿಸುತ್ತಿದ್ದರು ಶ್ರೀ ಗುರುಗಳವರು. ರಾಷ್ಟ್ರನಾಯಕರು ದೇವರು ಧರ್ಮಗಳ ವಿಷಯಗಳಲ್ಲಿ ಅಪನಂಬಿಕೆಯ ಮಾತುಗಳನ್ನಾಡದೆ ತಮ್ಮಷ್ಟಕ್ಕೆ ತಾವಿದ್ದರೆ ಸಾಕು, ದೈವಶ್ರದ್ಧೆ, ಸದಾಚಾರ ಇವುಗಳ ಪೂರ್ಣ ವಿಕಾಸಕ್ಕೆ ಅವಕಾಶವಿತ್ತರೆ ಸಾಕು, ಧರ್ಮವು ಜನತೆಯಲ್ಲಿ ಬೆಳೆಯುತ್ತವೆ, ಎಂದು ಅಪ್ಪಣೆ ಕೊಡಿಸುತ್ತಿದ್ದರು ಗುರುವರ್ಯರು.

ಭಾರತೀಯ ಸಂಸ್ಕೃತಿಯು ಅತ್ಯಂತ ಪ್ರಾಚೀನ ಕಾಲದಲ್ಲಿ ಮಧ್ಯ ಏಷ್ಯಾದ ಆಚೆಗೂ ವ್ಯಾಪಿಸಿತ್ತು, ಪೂರ್ವದಲ್ಲಿ ಚೈನಾದೇಶದವರೆಗೂ, ಪಶ್ಚಿಮದಲ್ಲಿ ಅಫ್ಘಾನಿಸ್ಥಾನದವರೆಗೂ ಹರಡಿತ್ತು. ಈ ದೇಶದ ವಿದ್ವಾಂಸರು ವೇದಶಾಸ್ತ್ರಗಳಲ್ಲಿ ಪಾರಂಗತರಾಗಿ ತಮಲ್ಲಿಗೆ ಅನೇಕ ಜನ ವಿದೇಶದ ವಿದ್ಯಾರ್ಥಿಗಳನ್ನು ಸಹ ಆಕರ್ಷಿಸುತ್ತಿದ್ದರು. ಸನಾತನ ಹಿಂದೂ ಧರ್ಮವು ವಿಶ್ವಧರ್ಮವಾಗಿ, ಎಲ್ಲ ಮತಗಳೂ ಈ ಧರ್ಮದ ಮೂಲ

Sri Vidyabharathi Book Centre, Sringeri

CC-O. In Public Domain. Digitized by eGangotri

ತತ್ವಗಳನ್ನೇ ಅಂಗೀಕರಿಸಿ ಆಯಾ ದೇಶ, ಕಾಲ, ಜನಗಳಿಗೆ ಅನುಸಾರವಾಗಿ ರೂಪಿತವಾಗಿದ್ದವು. ಶ್ರೀ ಶಂಕರಭಗವತ್ಪಾದರು ಈ ಸನಾತನ ಧರ್ಮವನ್ನು ಪುನರುದ್ಧರಿಸಿ, ಬಲವಾದ ತಳಪಾಯದ ಮೇಲೆ ನಿಲ್ಲಿಸಿದರು. ಆ ಕಾಲದಲ್ಲಿ ಸನಾತನ ಧರ್ಮದ ಕೇಂದ್ರಸ್ಥಳವಾಗಿದ್ದ ಶಾರದಾ ಪೀಠವೆಂದು ಹೆಸರಾಗಿದ್ದ ಕಾಶ್ಮೀರದ ಶ್ರೀನಗರದಲ್ಲಿ ಸರ್ವಜ್ಞಪೀಠ ವ್ಯಾಖ್ಯಾನ ಸಿಂಹಾಸನವಿತ್ತು. ಅಲ್ಲಿ ದೊಡ್ಡ ವಿದ್ವಾಂಸರ ಸಭೆಯೇ ಇದ್ದು, ಶ್ರೀ ಶಂಕರರು ಅವರೆಲ್ಲರನ್ನೂ ವಾದ ಪ್ರತಿವಾದಗಳಲ್ಲಿ ಗೆದ್ದರು. ವಿಂಧ್ಯಕ್ಕೆ ದಕ್ಷಿಣದಲ್ಲಿದ್ದ ದಂಡಕಾರಣ್ಯವೆಂದು ಪ್ರಸಿದ್ಧವಾಗಿದ್ದ ಭಾರತದ ಭೂಭಾಗವೂ ಸನಾತನ ಧರ್ಮದ ತವರೇ ಎಂಬುದನ್ನು ಆಚಾರ್ಯರು ಸ್ಥಾಪಿಸಿ, ವ್ಯಾಖ್ಯಾನ ಪೀಠಾಧೀಶ್ವರರಾದರು.

ಆಚಾರ್ಯಪಾದರು ಭಾರತೀಯರಲ್ಲಿ, ರಾಜಕೀಯವಾಗಿ ಭಿನ್ನವಾಗಿ ಹೋಗಿದ್ದ ಅಂದಿನ ಭರತಖಂಡದಲ್ಲಿ, ನಾಲ್ಕು ಕಡೆಗಳಲ್ಲಿ ಚತುರಾಮ್ನಾಯ ಪೀಠಗಳನ್ನು ಸ್ಥಾಪಿಸಿ ಏಕರಾಷ್ಟ್ರ ಭಾವನೆಯನ್ನು ಮೂಡಿಸಿದರು. ಭಿನ್ನಭಿನ್ನವಾದ ರಾಜ್ಯಾಡಳಿತಗಳಲ್ಲಿ ಇದ್ದರೂ, ಧಾರ್ಮಿಕವಾಗಿ ಭಾರತ ಒಂದು ರಾಷ್ಟ್ರ ಎಂಬ ಭಾವನೆಯನ್ನು ಮೂಡಿಸಿದರು. ವಿವಿಧ ಮತಾಚಾರಗಳಲ್ಲಿ ಭಿನ್ನಭಿನ್ನವಾಗಿ ದೂರ ದೂರ ಸರಿಯುತ್ತಿದ್ದ ಜನಾಂಗವನ್ನು ಒಂದುಗೂಡಿಸಿ ಸನಾತನ ಧರ್ಮವನ್ನು ರಾಷ್ಟ್ರಧರ್ಮವನ್ನಾಗಿ ಉಜ್ಜೀವನಗೊಳಿಸಿದರು. ಅಖಿಲ ಭಾರತಕ್ಕೆಲ್ಲಾ ಸಮಾನ ಭಾಷೆಯಿರಬೇಕೆಂದು ಅಂದು ಪ್ರಚಲಿತವಾಗಿದ್ದ ಸಂಸ್ಕೃತವನ್ನೇ ತಮ್ಮ ಬೋಧನೆಗೆ, ಗ್ರಂಥರಚನೆಗೆ ಮಾಧ್ಯಮವನ್ನಾಗಿ ಆರಿಸಿ ಸಂಸ್ಕೃತಕ್ಕೆ ಮತ್ತೆ ರಾಷ್ಟ್ರಭಾಷೆ ಸ್ಥಾನ ಕಲ್ಪಿಸಿದರು.

ಅಂದಿನಿಂದ ಈ ದಕ್ಷಿಣಾಮ್ನಾಯ ಪೀಠಾಧೀಶ್ವರರು ಆಚಾರ್ಯರ ಮೇಲ್ಪಂಕ್ತಿಯನ್ನು ಅನುಸರಿಸಿ ರಾಷ್ಟ್ರವನ್ನೆಲ್ಲಾ ಸಂಚರಿಸುತ್ತಾ, ಭರತಖಂಡದ ರಾಷ್ಟ್ರೀಯ ಏಕತೆಯನ್ನು ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ, ಆಧ್ಯಾತ್ಮಿಕವಾಗಿ ಪುನಃ ಪುನಃ ಉದ್ಘೋಷಿಸುತ್ತಿದ್ದಾರೆ. ನಮ್ಮದು ಶೈವ, ವೈಷ್ಣವ, ಶಾಕ್ತಮತಗಳಲ್ಲ, ಸನಾತನ ವೈದಿಕಧರ್ಮ ಎಂದು ಪದೇ ಪದೇ ಸ್ಪಷ್ಟಪಡಿಸುತ್ತಿದ್ದಾರೆ. ರಾಷ್ಟ್ರದ ಭಾಷೆ, ದೇವಭಾಷೆ–ಸಂಸ್ಕೃತ ಎಂದು ಪ್ರಸಾರ ಮಾಡುತ್ತಿದ್ದಾರೆ. ಶ್ರೀ ಶಾರದಾಪೀಠವೆಂದು ಪ್ರಖ್ಯಾತವಾದ ಶೃಂಗೇರಿಯ ಪೀಠದ ಆಚಾರ್ಯರು ವಿದ್ವಾಂಸರ, ಪಂಡಿತರ ಪೋಷಕರಾಗಿ ಸದ್ದುಗದ್ದಲವಿಲ್ಲದೆ ಭಾರತೀಯ ಸಂಸ್ಕೃತಿಯ ಪ್ರಸಾರ ಕಾರ್ಯ ಮಾಡುತ್ತಿದ್ದಾರೆ.

ಶ್ರೀವಿದ್ಯಾತೀರ್ಥ ಸ್ವಾಮಿಗಳವರು ಹಿಂದಿನ ಆಚಾರ್ಯರಂತೆಯೇ ತಾವೂ ಸಹ ಪಂಡಿತರನ್ನು ಆಹ್ವಾನಿಸಿ, ಅವರಿಂದ ವಾಕ್ಯಾರ್ಥ ಸಭೆಗಳನ್ನು ಏರ್ಪಡಿಸಿ, ಅವರೆಲ್ಲರಿಗೂ ಸಂಭಾವನೆಯನ್ನೂ, ಜರತಾರೀ ವಸ್ತ್ರಗಳನ್ನೂ ಇತ್ತು ಪುರಸ್ಕರಿಸುತ್ತಿದ್ದರು. ಅನೇಕ ಜನ ಉದ್ದಾಮ ಪಂಡಿತರನ್ನು ಬಿರುದುಗಳಿಂದ ಗೌರವಿಸಿದ್ದರು. ಶ್ರೀ ಶ್ರೀಗಳವರಿಗೆ ವಿದ್ವಾಂಸರೆಂದರೆ ಬಹಳ ವಿಶ್ವಾಸ. ಶ್ರೀ ಶಂಕರಜಯಂತಿ, ಶ್ರೀ ಗಣಪತಿ ಉತ್ಸವದ ಸಮಯಗಳಲ್ಲಿ ವಿದ್ವತ್ಸಭೆಗಳನ್ನು ಏರ್ಪಡಿಸುವುದಲ್ಲದೆ ತಾವು ಭೇಟಿಯಿತ್ತ ದೊಡ್ಡ ನಗರಗಳಲ್ಲಿ, ಕ್ಷೇತ್ರಗಳಲ್ಲಿ ಪಂಡಿತ ಸಭೆಗಳನ್ನು ಏರ್ಪಡಿಸಿ, ವಿದ್ವಾಂಸರನ್ನು ಮನ್ನಿಸಿದ್ದರು. ವರ್ಧಂತೀ ಸಮಯದಲ್ಲಿ ವಿದ್ವಾಂಸರನ್ನು ಆಹ್ವಾನಿಸಿ ಎಲ್ಲ ಧರ್ಮಗಳಲ್ಲಿ ಪರಸ್ಪರ ಸಮ್ಮತವಾಗುವಂತಹ ತತ್ವಗಳನ್ನು ಪ್ರಸಾರ ಮಾಡಲು ಧರ್ಮ ಸಮ್ಮೇಳನವನ್ನು ನಡೆಸುತ್ತಿದ್ದರು. ಹಾಗೆಯೇ ಸಾಹಿತ್ಯ ಸಮ್ಮೇಳನವನ್ನು ಏರ್ಪಡಿಸಿ ವಿದ್ವಾಂಸರನ್ನು ಸನ್ಮಾನಿಸುತ್ತಿದ್ದರು. ಶ್ರೀ ಶ್ರೀಗಳವರ ವಾಕ್ಯಾರ್ಥ ಸಭೆಯಲ್ಲಿ ಪಾಲ್ಗೊಳ್ಳುವುದಕ್ಕಾಗಿಯೇ ದೂರದೂರದಿಂದ ಪಂಡಿತರು ಆಗಮಿಸುತ್ತಿದ್ದರು. ಪಂಡಿತರೊಡನೆ ಶಾಸ್ತ್ರ ವಿಚಾರ ಮಾಡುವ ಶ್ರೀ ಶ್ರೀಗಳವರಿಗೆ ಕಾಲದ ಪರಿವೆಯೇ ಇರುತ್ತಿರಲಿಲ್ಲ.

ಸನಾತನ ಧರ್ಮಕ್ಕೆ ಪಾಶ್ಚಾತ್ಯ ನಾಗರಿಕತೆಯ ಪ್ರಭಾವದಿಂದ ಬಂದೊದಗಿದ ಅಪಾಯವನ್ನು ತಡೆಗಟ್ಟಲು ಅನೇಕ ಮಹಾನುಭಾವರು ಪ್ರಯತ್ನಿಸುತ್ತಿದ್ದರಷ್ಟೆ ? ಶ್ರೀ ಶ್ರೀಶಿವಾಭಿನವ ನರಸಿಂಹಭಾರತೀ ಸ್ವಾಮಿಗಳವರು ಆ ದಿಸೆಯಲ್ಲಿ ಒಂದು ಪ್ರಮುಖ ಹೆಜ್ಜೆಯನ್ನಿಟ್ಟು ಶ್ರೀ ಶಂಕರ ಭಗವತ್ಪಾದರ ತತ್ವಗಳ ಪುನಃ ಪ್ರಸಾರದಿಂದ ಮಾತ್ರ ಭರತಖಂಡದ ಧಾರ್ಮಿಕ

Sri Vidyabharathi Book Centre, Sringeri

CC-O. In Public Domain. Digitized by eGangotri

ಐಕ್ಯತೆಯ ಪುನಃ ಪ್ರತಿಷ್ಠೆ ಸಾಧ್ಯ : ಎಂಬುದನ್ನು ಮನಗಂಡು ಶ್ರೀ ಶಂಕರರ ಜನ್ಮ ಕ್ಷೇತ್ರವನ್ನು ಉದ್ಧರಿಸಿ, ಅಲ್ಲಿ ಶ್ರೀ ಶಾರದಾ ಶಂಕರರ ಮೂರ್ತಿಗಳನ್ನು ಪ್ರತಿಷ್ಠೆ ಮಾಡಿದರು. ಶ್ರೀ ಶಂಕರರ ಗ್ರಂಥಗಳೆಲ್ಲವನ್ನೂ ಸಮಗ್ರವಾಗಿ ಸಂಪಾದಿಸಿ ಒಂದೇ ಕಡೆ ದೊರಕುವಂತೆ ಪ್ರಕಟಿಸಿದರು. ಶ್ರೀ ವಿದ್ಯಾತೀರ್ಥ ಸ್ವಾಮಿಗಳವರೂ ಅದೇ ಮೇಲ್ಪಂಕ್ತಿಯನ್ನು ಅನುಸರಿಸಿ ತಾವು ಸಂಚರಿಸಿದ ಸ್ಥಳಗಳಲ್ಲೆಲ್ಲಾ ಅನೇಕ ಶಂಕರ ಮಠಗಳನ್ನು ಸ್ಥಾಪಿಸಿದ್ದರು. ಬಹು ಶಂಕರ ಮಠಗಳಲ್ಲಿ ಜನಕ್ಕೆ ಆದಿಜಗದ್ಗುರುಗಳ ಸ್ಮರಣೆ ನಿತ್ಯವೂ ಉಂಟಾಗುವುದಕ್ಕಾಗಿ ಶ್ರೀ ಶಂಕರ ಶ್ರೀ ಶಾರದಾ ಮೂರ್ತಿಗಳನ್ನು ಪ್ರತಿಷ್ಠಿಸಿದ್ದರು. ಇಷ್ಟವಿಲ್ಲದೆ ಶ್ರೀಮದಾಚಾರ್ಯರ ಎಲ್ಲಾ ಕೃತಿಗಳನ್ನೂ ಪುನಃ ಮುದ್ರಣ ಮಾಡಿಸಿ ಅವುಗಳ ಅನುವಾದವು ಆಯಾ ದೇಶಭಾಷೆಗಳಲ್ಲಿ ಆಗುವಂತೆ ಏರ್ಪಡಿಸಿದ್ದರು. ಈಗಾಗಲೇ ತಮಿಳು ಮತ್ತು ತೆಲುಗಿನಲ್ಲಿ ಆಚಾರ್ಯರ ಕೃತಿಗಳೆಲ್ಲವೂ ಅನುವಾದವಾಗಿ ಹೊರಬಂದಿವೆ.

ಈ ಕೆಲಸವನ್ನು ಸುವ್ಯವಸ್ಥಿತವಾಗಿ ನೆಡೆಸಲು ಶ್ರೀ ಶ್ರೀಗುರುಗಳವರು ಅಖಿಲ ಭಾರತ ಶಂಕರ ಸೇವಾ ಸಂಸ್ಥೆಯನ್ನು ಸ್ಥಾಪಿಸಿದ್ದರು. ಆ ಸಂಸ್ಥೆಯ ಶಾಖಾ ಸಮಿತಿಗಳು ತಮಿಳುನಾಡು, ಆಂಧ್ರ ಕರ್ನಾಟಕ, ಕೇರಳಗಳಲ್ಲಿ ಕೆಲಸ ಮಾಡುತ್ತಿವೆ. ತಮಿಳು, ತೆಲುಗು, ಕನ್ನಡ ಭಾಷೆಗಳಲ್ಲಿ 'ಶ್ರೀ ಶಂಕರಕೃಪಾ' ಎಂಬ ಮಾಸಪತ್ರಿಕೆಯು ಆಯಾ ಸಮಿತಿಗಳಿಂದ ಪ್ರತಿ ತಿಂಗಳೂ ಪ್ರಕಟವಾಗುತ್ತಿವೆ.

ಭಾರತೀಯ ಸಂಸ್ಕೃತಿಗೆ ಸಂಸ್ಕೃತಭಾಷೆಯೇ ಅಡಿಗಲ್ಲು. ಭಾರತದ ಆರ್ಷಗ್ರಂಥಗಳೆಲ್ಲವೂ ಇರುವುದು ಸಂಸ್ಕೃತದಲ್ಲಿಯೇ. ವೇದೋಪನಿಷತ್ತುಗಳೂ, ವೇದಾಂತ ಗ್ರಂಥಗಳೂ ಷಡ್ದರ್ಶನಗಳೂ, ತರ್ಕನ್ಯಾಯ ವ್ಯಾಕರಣಾದಿ ಶಾಸ್ತ್ರಗಳೇ ಮುಂತಾದ ಅನೇಕವಾದ ಜ್ಞಾನ ಸಂಪತ್ತು ಇರುವುದು ಸಂಸ್ಕೃತ ಭಾಷೆಯಲ್ಲಿ. ಒಂದು ಕಾಲದಲ್ಲಿ ಕನ್ಯಾಕುಮಾರಿಯಿಂದ ಕಾಶ್ಮೀರದ ವರೆಗೆ ರಾಷ್ಟ್ರಭಾಷೆಯಾಗಿದ್ದ ಸಂಸ್ಕೃತ ಭಾಷೆಯು ಜನಸಾಮಾನ್ಯರ ಭಾಷೆಯೂ ಆಗಿತ್ತು. ಪರಕೀಯರ ಧಾಳಿಯಿಂದ ನಮ್ಮ ಎಷ್ಟೋ ದೇವಾಲಯಗಳು, ಮಠ ಮಂದಿರಗಳು ನಾಶವಾದಂತೆ ಗ್ರಂಥಾಲಯಗಳೂ, ಪುಸ್ತಕಾಲಯಗಳೂ ನಾಶವಾದವು. ಜನಜನಕ್ಕೆ ಸಂಪರ್ಕ ಉಂಟು ಮಾಡಿದ್ದ ಸಂಸ್ಕೃತ ಭಾಷೆಗೆ ಅನ್ಯರ ಆಡಳಿತದಲ್ಲಿ ಪೆಟ್ಟು ಬಿದ್ದಿತು. ಮಾತೃಭಾಷೆಯಾಗಿದ್ದ ಸಂಸ್ಕೃತ ಭಾಷೆ ಕ್ರಮೇಣ ಮಾತೃಭಾಷೆಯ ಸ್ಥಿತಿಗೆ ಇಳಿಯಿತು. ವೈದಿಕ ಸಂಸ್ಕೃತಿಯ ಪುನರುದ್ಧಾರಕ್ಕೂ, ಭಾರತೀಯರಲ್ಲಿ ಒಗ್ಗಟ್ಟು ಮೂಡಿಸುವುದಕ್ಕೂ ಈ ಭಾಷೆಯ ಪುನರುಜ್ಜೀವನ ಅತ್ಯಗತ್ಯ ಎಂಬುದನ್ನು ಕಂಡುಕೊಂಡಿದ್ದ ಶ್ರೀ ಶಿವಾಭಿನವ ನರಸಿಂಹ ಭಾರತೀ ಸ್ವಾಮಿಗಳವರು ಮೊಟ್ಟ ಮೊದಲು ಶೃಂಗೇರಿಯಲ್ಲಿಯೂ, ಅನಂತರ ಬೆಂಗಳೂರು ಕಾಲಟಿಗಳಲ್ಲಿಯೂ ಸಂಸ್ಕೃತ ಪಾಠಶಾಲೆಗಳನ್ನು ಸ್ಥಾಪಿಸಿದರು

ಶ್ರೀ ಅಭಿನವ ವಿದ್ಯಾತೀರ್ಥರು ಅದನ್ನು ಮುಂದುವರಿಸಿ ತಾವು ಸಂಚರಿಸಿದ ಅನೇಕ ಕಡೆಗಳಲ್ಲಿ ಸ್ಥಾಪಿಸಿವಾದ ಮಠಗಳಲ್ಲಿ ಸಂಸ್ಕೃತ ಭಾಷೆಯ ಬೋಧನೆ ಪ್ರಸಾರಕ್ಕೆ ಯೋಜನೆ ಮಾಡಿದ್ದರು. ಸಂಸ್ಕೃತ ಭಾಷೆಯನ್ನು ಮನೆಗೆ ಹರಡುವುದಕ್ಕಾಗಿ 'ಶ್ರೀ ಸುರಸರಸ್ವತೀ ಸಭಾ' ಎಂಬ ಸಂಸ್ಥೆಯನ್ನು ಸ್ಥಾಪಿಸಿ ನೂರಾರು ಜನ ಸಂಸ್ಕೃತ ಪಂಡಿತರ ನೆರವಿನಿಂದ ಸಂಸ್ಕೃತ ಪರೀಕ್ಷೆಗಳನ್ನು ನಡೆಸುತ್ತಿದ್ದರು. ಶ್ರೀ ಗುರುಗಳವರಿಂದ ಸ್ಥಾಪಿತವಾದ ಈ ಸಭೆ ಕರ್ನಾಟಕದಲ್ಲಿ ವ್ಯಾಪಕವಾಗಿ ಕೆಲಸ ಮಾಡುತ್ತಿದೆ. ಎಪ್ಪತ್ತಕ್ಕೂ ಹೆಚ್ಚು ಕೇಂದ್ರಗಳನ್ನು ಹೊಂದಿದ್ದು ಪ್ರತಿ ವರ್ಷವೂ ಎರಡು ಸಲ ಸರಳ ಸಂಸ್ಕೃತ ಪರೀಕ್ಷೆಗಳನ್ನು ನಡೆಸುತ್ತಿದೆ ಪ್ರತಿ ಸಲವೂ ನಾಲ್ಕು ಸಾವಿರಕ್ಕೂ ಹೆಚ್ಚು ಅಭ್ಯರ್ಥಿಗಳು ಕುಳಿತುಕೊಳ್ಳುತ್ತಾರೆ. ಶ್ರೀ ಶ್ರೀಗಳವರು ಈ ಪರೀಕ್ಷೆಗಳಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದವರಿಗೆ ಮುಂದಿನ ತರಗತಿಯ ಪಠ್ಯಪುಸ್ತಕವನ್ನು ಬಹುಮಾನಿಸುತ್ತಿದ್ದರು. ಹೆಚ್ಚಿನ ಅಂಕಗಳನ್ನು ಪಡೆದವರಿಗೆ ಶ್ರೀ ಶಾರದಾ ರಜತ ಪ್ರತಿಮೆಗಳನ್ನು ಅನುಗ್ರಹಿಸುತ್ತಿದ್ದರು. ಈ ಸಂಸ್ಥೆಯನ್ನು ಇನ್ನೂ ಬಲಪಡಿಸಿ ಸಂಸ್ಕೃತ ಭಾಷೆಯನ್ನು ಜನರು ಆಡುವ ಭಾಷೆಯನ್ನಾಗಿ ಮಾಡುವ ಪ್ರಬಲ ಇಚ್ಛೆ ಶ್ರೀ ಗುರುಗಳವರಿಗೆ ಇತ್ತು. ಅವರ ಸಂಕಲ್ಪಕ್ಕೆ ಮೂರ್ತ ಸ್ವರೂಪವನ್ನು ಕೊಡಲು ಪಂಡಿತರನೇಕರು ನಿಸ್ವಾರ್ಥ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ವೇದಶಾಸ್ತ್ರಾಭ್ಯಾಸವು ಇತ್ತೀಚಿಗೆ ಖಿಲವಾಗುತ್ತಿದ್ದು ಗುರುಕುಲಗಳಲ್ಲಿ ನಡೆಸುತ್ತಿದ್ದ ಆರ್ಷೇಯ ಪದ್ಧತಿಯ ಅಧ್ಯಯನ ಅಧ್ಯಾಪನಗಳು ಈಗ ನಿಂತು ಹೋಗಿವೆ ಯೆಂಬಷ್ಟು. ಎಲ್ಲೋ ಕೆಲವು ಪಾಠಶಾಲೆಗಳಲ್ಲಿ ಸ್ವಲ್ಪ ಮಟ್ಟಿಗೆ ಜೀವಂತವಾಗಿರುವ ಈ ಅತ್ಯುತ್ತಮ ಪದ್ಧತಿ ಯನ್ನು ಪುನರುದ್ಧರಿಸಲು ಸಂಕಲ್ಪ ತೊಟ್ಟಿದ್ದ ಶ್ರೀ ಶ್ರೀಗಳವರು ವೇದ ವಿದ್ಯಾಪರಿಷತ್ತನ್ನು ಸ್ಥಾಪಿಸಿದ್ದರು. ವೈದಿಕ ಕರ್ಮಗಳನ್ನು ಲೋಪದೋಷಗಳಿಲ್ಲದಂತೆ ನಿರ್ವಂ ಚನೆಯಿಂದ ನಡೆಸಿಕೊಡುವಂತಹ ನಿಸ್ವಾರ್ಥಿ ಪುರೋ ಹಿತರ ತಂಡವನ್ನೇ ನಿರ್ಮಿಸುವುದು ಈ ವೇದ ವಿದ್ಯಾ ಪರಿಷತ್ತಿನ ಗುರಿಯಾಗಿದೆ. ಶ್ರೀ ಶ್ರೀಗಳವರ ವರ್ಧಂ ತಿಯ ಸಮಯದಲ್ಲಿ ವೇದಾಭ್ಯಾಸ ಮಾಡುವ ವಿದ್ಯಾರ್ಥಿ ಗಳನ್ನು ಕರೆಸಿ, ಪರೀಕ್ಷೆಗಳನ್ನು ಏರ್ಪಡಿಸಿ ಅವರಿಗೆಲ್ಲಾ ಪುರಸ್ಕಾರಗಳನ್ನು ಕೊಡುತ್ತಾರೆ. ವೇದ ವಿದ್ವಾಂಸರ ನ್ನಂತೂ ಪ್ರತಿಸಲವೂ ಗೌರವ ಸಂಭಾವನೆಗಳಿಂದ ಆದರಿಸುತ್ತಾರೆ.

ಈಗಿನ ವೈಜ್ಞಾನಿಕ ವಿಶ್ವದಲ್ಲಿ, ವಿಪತ್ಪರಂಪರೆಯ ಸುಳಿಯಲ್ಲಿ, ಭಯಭೀತಿಯ ಹಾವಳಿಯಲ್ಲಿ, ದಿನದಿನಕ್ಕೂ ಹೆಚ್ಚುತ್ತಿರುವ ಅಭದ್ರತೆ ಕಷ್ಟಕಾರ್ಪಣ್ಯಗಳಲ್ಲಿ ಮನುಷ್ಯ ನಿಗೆ ಭರವಸೆಯನ್ನೀಯುವುದು ಧಾರ್ಮಿಕ ಶ್ರದ್ಧೆ ನಂಬಿಕೆ ಗಳು, ಸತ್ಯವಚನ, ನಿರ್ವಂಚನೆ, ನಿಸ್ವಾರ್ಥ ಮುಂತಾದ ಸಾಮಾನ್ಯ ಧರ್ಮಗಳನ್ನು ನಂಬಿ, ಧೈರ್ಯವಾಗಿ ಸ್ಥಿರ ಮನಸ್ಸಿನಿಂದ ಅವುಗಳನ್ನು ಪಾಲಿಸಬೇಕಾದುದು ಅಗತ್ಯ.

ಈ ಸಾಮಾನ್ಯ ಧರ್ಮದಲ್ಲಿ ನಿರತನಾದವನಿಗೆ ಮೊದ ಮೊದಲು ವಿಘ್ನ ವೈಪರೀತ್ಯಗಳು ಎದುರಾಗಬಹುದು. ಆದರೆ ಅವೆಲ್ಲವನ್ನೂ ಸಾಹಸದಿಂದ ಎದುರಿಸಿದಾಗ ತೃಪ್ತಿ, ಶಾಂತಿ, ಸಮಾಧಾನಗಳು ದೊರಕುತ್ತವೆ. ಅನ್ಯರನ್ನು ದ್ವೇಷಿಸದಿರುವುದು, ಸುಳ್ಳು ಹೇಳದಿರುವುದು, ಮೋಸ ಮಾಡದಿರುವುದು, ಜಂಭವನ್ನೂ ಸೋಗನ್ನೂ ಕಳಚಿ ಹಾಕಿ ಪ್ರಾಮಾಣಿಕತೆಯಿಂದ ಇರುವುದು-ಇವು ಇಂದಿನ ಜನಜೀವನಕ್ಕೆ ಅತ್ಯಗತ್ಯವಾದ ನಿಯಮಗಳು. ಇವುಗ ಳನ್ನು ಜನ ಪಾಲಿಸಿದಲ್ಲಿ ಭರತಖಂಡದಲ್ಲಿ ಸ್ವರ್ಣಯುಗ ಪ್ರಾರಂಭವಾಗುತ್ತದೆ. ಶ್ರೀ ಶ್ರೀಗಳವರು ತಾವು ಸಂಚರಿಸಿ ದೆಡೆಯೆಲ್ಲಾ ಇದನ್ನು ಪದೇ ಪದೇ ಬೋಧಿಸುತ್ತಿದ್ದರು. ಪುನಃ ಪುನಃ ಉಪದೇಶಿಸುತ್ತಿದ್ದರು.

ಜೀವನಕ್ಕೊಂದು ಶ್ರದ್ಧೆ, ನಂಬಿಕೆ, ಧಾರ್ಮಿಕ ಆಧಾರ ಬೇಕೆಂದು ಹುಡುಕುವವರೆಲ್ಲರಿಗೂ ಶ್ರೀ ಶ್ರೀಗಳ ವರ ಉಪದೇಶಗಳಲ್ಲಿ ಉಪಯುಕ್ತವಾದ ಆಚರಿಸಬಹು ದಾದ ಬೋಧನೆಗಳು ಎಷ್ಟೋ ಇವೆ. ಕತ್ತಲಲ್ಲಿನ ದಾರಿ ದೀಪಗಳಂತೆ ಮಾರ್ಗ ತೋರುತ್ತಿವೆ.

ಅಸತ್ಯನಿಂದ ಸತ್ಯದೆಡೆಗೆ, ತಮಸ್ಸಿನಿಂದ ಜ್ಯೋತಿ ಪಥದೆಡೆಗೆ, ಮೃತ್ಯುವಿನಿಂದ ಅಮೃತದೆಡೆಗೆ ಕರೆದೊ ಯ್ಯುವ ದಿವ್ಯ ಹರಿಕಾರರಾಗಿದ್ದರು ಶ್ರೀಮದಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಕೋಮಲ ಹೃದಯ, ಉದಾರ ಚರಿತ

ಲೇಖಕರು : ಎಸ್ ಜಿ. ನರಸಿಂಹಯ್ಯ

ಸದ್ಗುಣಗಳ ನಿಧಿ, ನಮ್ಮ ಮಹಾಸ್ವಾಮಿಗಳವರು. ನನಗೆ ಇವರ ಪರಿಚಯ ಅರ್ಧಶತಮಾನಕ್ಕೂ ಹೆಚ್ಚಿನದು; ಅರುವತ್ತು ವರ್ಷಗಳ ಹಿಂದಿನದೆಂದೇ ಹೇಳಬೇಕು.

ಪೂರ್ವಾಶ್ರಮದಲ್ಲಿ ಇವರ ಹೆಸರು 'ಶ್ರೀನಿವಾಸ', ಶ್ರೀಯುತ ಕೈಪುರಾಮಶಾಸ್ತ್ರಿಗಳೆಂಬುವರ ಮಕ್ಕಳಲ್ಲಿ ಇವರು ಎರಡನೆಯವರು; ಗಂಡುಮಕ್ಕಳಲ್ಲಿ ಇವರೇ ಹಿರಿಯರು. ಇವರು ಬಾಲ್ಯದಲ್ಲೂ ಬುದ್ಧಿವಂತರು, ಸೇವಾಪರರು. ಒಮ್ಮೆ ಇವರ ತಾಯಿ ಬಾಣಂತಿಯಾಗಿದ್ದಾಗ, ಮನೆಗೆಲಸಗಳನ್ನು ಇವರ ಅಕ್ಕನವರು ನಿರ್ವಹಿಸಬೇಕಾಯಿತು; ಆಗ ಇವರು ಎಳೆಮಗುವಿನ ಬಟ್ಟೆಗಳನ್ನು ಒಗೆದುಕೊಟ್ಟು ಸಹಕರಿಸುತ್ತಿದ್ದರು. ಅದನ್ನು ಕಂಡ ನೆರೆಹೊರೆಯವರಲ್ಲಿ ಕೆಲವರು ಇವರನ್ನು ಅಪಹಾಸ್ಯ ಮಾಡುತ್ತಿದ್ದರು. ಮೊದಮೊದಲು ಸಹನೆಯಿಂದ ಸುಮ್ಮನಿರುತ್ತಿದ್ದ ಇವರು ಆಮೇಲೆ ತಿರುಗಿಬಿದ್ದು "ನಮ್ಮ ಮನೆ ಕೆಲಸದಲ್ಲಿ ನಾನು ಸಹಕರಿಸುವುದು ತಪ್ಪಾದರೆ, ಆ ಕೆಲಸವನ್ನು ನೀವು ಮಾಡಿಕೊಡಿ, ನಾನು ಬಿಟ್ಟುಬಿಡುತ್ತೇನೆ" ಎನ್ನಲಾರಂಭಿಸಿದರು. ಅಲ್ಲಿಂದೀಚೆಗೆ ಆ ಕುಚೋದ್ಯ ನಿಂತುಹೋಯಿತು, ಯಾರಲ್ಲಿ ಹೇಗೆ ವರ್ತಿಸಬೇಕು, ಎಂಬ ವಿವೇಕ ಇವರ ಹುಟ್ಟುಗುಣ.

ರಾಮಶಾಸ್ತ್ರಿಗಳು ಒಂದು ವಿದ್ಯಾಶಾಲೆಯಲ್ಲಿ ಉಪಾಧ್ಯಾಯರಾಗಿದ್ದರು. ವಿದ್ಯಾರ್ಥಿಗಳು ಪಾಠಗಳನ್ನು ಸರಿಯಾಗಿ ಒಪ್ಪಿಸದಿದ್ದರೆ ಅವರನ್ನು ಬೆತ್ತದಿಂದ ಹೆಚ್ಚಾಗಿಯೇ ಹೊಡೆಯುತ್ತಿದ್ದರು. ಮನೆಯಲ್ಲೂ ಅದೇ ಪದ್ಧತಿಯಾಯಿತು. ಪಾಠಗಳನ್ನು ಚೆನ್ನಾಗಿ ಓದಿಕೊಳ್ಳುತ್ತಿದ್ದ ಶ್ರೀನಿವಾಸನಿಗೂ ವಿನಾಯಿತಿ ದೊರೆಯದಾಯಿತು. ಒಂದು ದಿನ ಏಟುಗಳ ಸಂಖ್ಯೆ ಏರಿತು. ಎಳೆಯ ಹುಡುಗ ಅವನ್ನು ತಡೆದುಕೊಳ್ಳಲಾರದೆ ಒಮ್ಮೆ ಬಲಗೈ, ಮತ್ತೊಮ್ಮೆ ಎಡಗೈ, ಚಾಚುತ್ತಾ ಶಿಕ್ಷೆಯನ್ನು ಅನುಭವಿಸಿದ. ತರುವಾಯ ಯಾವುದೋ ಕೆಲಸದ ಮೇಲೆ ಶಾಸ್ತ್ರಿಗಳು ಮನೆಬಿಟ್ಟು ಹೊರಗೆ ಹೋದರು. ಜ್ಯೋತಿಷ್ಯ ಮತ್ತು ಸಾಮುದ್ರಿಕಾ ಶಾಸ್ತ್ರಜ್ಞರಾದ ಮಿತ್ರರೊಬ್ಬರು ಆ ಕಾಲದಲ್ಲಿ ಶಾಸ್ತ್ರಿಗಳ ಮನೆಯಲ್ಲೇ ಇರುತ್ತಿದ್ದರು. ಅವರು ಈ ಶಿಕ್ಷೆಗೆ ಗುರಿಯಾಗಿದ್ದ ಬಾಲಕನನ್ನು ನೋಡುತ್ತಾ ಶಾಸ್ತ್ರಿಗಳ ದಾಕ್ಷಿಣ್ಯದಿಂದ ಸುಮ್ಮನಿದ್ದರು. ಅವರು ಹೊರಗೆ ಹೊರಟಮೇಲೆ ಬಾಲಕನನ್ನು ಕರೆದು ಸಮಾಧಾನಪಡಿಸಿದರು; ಅವನ ಹಸ್ತಗಳನ್ನು ನೋಡಿದರು; ಅವುಗಳಲ್ಲಿ ಹಲಕೆಲ ವಿಶೇಷಾಂಶಗಳನ್ನು ಗಮನಿಸಿದರು; ಚಕಿತರಾದರು; ಕಾಲಕ್ರಮದಲ್ಲಿ ಮಹಾಪುರುಷನೆಂದೆನಿಸಿಕೊಳ್ಳುವ ಅಸಾಧಾರಣ ಹಸುಳೆ ಇದು, ಎಂಬುದಾಗಿ ತೀರ್ಮಾನಿಸಿಕೊಂಡರು. ಶಾಸ್ತ್ರಿಗಳು ಹಿಂತಿರುಗಿದ ಮೇಲೆ ಇದನ್ನು ವಿವರಿಸಿ "ಇವನನ್ನು ಇನ್ನು ಮುಂದೆ ಸರಿಯಾಗಿ ನೋಡಿಕೊಳ್ಳಬೇಕು; ಎಂದಿದ್ದರೂ ನೀವು ಇವನ ಕಾಲಿಗೆ ನಮಸ್ಕಾರ ಮಾಡಬೇಕಾಗುವುದು" ಎಂದು ಒತ್ತಾಯಪೂರ್ವಕವಾಗಿ ಹೇಳಿದರು. ಶಾಸ್ತ್ರಿಗಳು ಆಶ್ಚರ್ಯಪಟ್ಟು ಹತ್ತಿರದಲ್ಲೇ ಇದ್ದ ಹಿರಿಯ ಬಂಧುವೊಬ್ಬರಿಗೆ ಮಗನ ಜಾತಕವನ್ನು ತೋರಿಸಿದರು. "ಇವನು ಪರಿವ್ರಾಜಕಾಚಾರ್ಯನಾಗುವುದು ದಿಟ" ಎಂದು ಅವರೂ ಹೇಳಿದರು.

ಶ್ರೀನಿವಾಸ ನಿಜವಾಗಿಯೂ ಮೇಧಾವಿ. ಪಾಠಗಳನ್ನು ಚೆನ್ನಾಗಿ ಓದಿಕೊಳ್ಳುತ್ತಿದ್ದುದು ಮಾತ್ರವಲ್ಲದೆ ಮಂದ ಬುದ್ಧಿಯವರಾಗಿದ್ದ ಸಹಪಾಠಿಗಳಿಗೆ ಹೇಳಿಕೊಡುತ್ತಲೂ ಇದ್ದ. ಆದುದರಿಂದ ಹುಡುಗರೆಲ್ಲ

Sri Vidyabharathi Book Centre, Sringeri

CC-O. In Public Domain. Digitized by eGangotri

ಇವನನ್ನು ತಮ್ಮ ಹಿರಿಯನಂತೆ, ಹಿತಚಿಂತಕನಂತೆ ಭಾವಿಸಿದ್ದರು. ಸ್ವಲ್ಪ ಕಾಲದಲ್ಲೇ ಇವರದೇ ಒಂದು 'ಗೆಳೆಯರ ಗುಂಪು' ಜನ್ಮ ತಾಳಿತು. ನಿತ್ಯವೂ ಸ್ಕೂಲಿನಿಂದ ಬಂದಮೇಲೆ ಹತ್ತಿರವಿದ್ದ 'ಚಿಕ್ಕಲಾಲ್‌ಬಾಗ್' ಎಂಬ ತೋಟದಲ್ಲಿ ಆಟವಾಡುವುದು, ಅನಂತರ ಶ್ರೀನಿವಾಸನ ಮನೆಯ ಮುಂದಿನ ಬಯಲಿನಲ್ಲಿ ಚಾಪೆ ಹಾಸಿಕೊಂಡು ಕುಳಿತು ಕಥೆಗಳನ್ನು ಹೇಳುವುದು, ಕೇಳುವುದು, ಪ್ರಶ್ನೋತ್ತರ ಅಧಿವೇಶನಗಳನ್ನು ನಡೆಸಿಕೊಳ್ಳುವುದು, ಈ ಮೊದಲಾಗಿ ಆ ಗುಂಪು ಒಂದು 'ವ್ಯಾಸಂಗ ಗೋಷ್ಠಿ'ಯಾಗಿ ಬೆಳೆಯಿತು. ಅದರಲ್ಲಿ ಪ್ರಧಾನ ಪಾತ್ರ ಯಾವಾಗಲೂ ಶ್ರೀನಿವಾಸನದೇ; ಇವನು ಹೇಳುವ ಕಥೆಗಳೆಲ್ಲ ಪೌರಾಣಿಕ, ನೀತಿಬೋಧಕ, ಬುದ್ಧಿ ಪ್ರಚೋದಕವಾದುವು.

ಶ್ರೀನಿವಾಸನ ಹೃದಯ ಅತಿ ಕೋಮಲ, ದಯಾಮಯ. ಯಾರಾದರೂ ಕಷ್ಟಕ್ಕೀಡಾದರೆ ಅವರನ್ನು ಕಂಡು ಮರುಕಪಡುವವನು; ಅವರನ್ನು ಕಷ್ಟದಿಂದ ಪಾರು ಮಾಡಲೆತ್ನಿಸುವನು. ಇವನ ಮನೆಯ ಪಕ್ಕದಲ್ಲಿ ಕವಾಡಿಗರ ಕುಟುಂಬ. ಅದರ ಯಜಮಾನ ಹಾಲು ಮಾರಿ ಸಂಸಾರವನ್ನು ನಿರ್ವಹಿಸುತ್ತಿದ್ದ. ಅವನಿಗೊಬ್ಬ ಮಗ; ಶ್ರೀನಿವಾಸನ ಸಹಪಾಠಿ; ಆದರೆ ಮಂದಬುದ್ಧಿ. ಇವನ ಮುಂದೆ ಅವನ ಬುದ್ಧಿಮಾಂದ್ಯ ಎದ್ದುಕಾಣುತ್ತಿತ್ತು. ಆದುದರಿಂದ ಕವಾಡಿಗನಿಗೆ ತನ್ನ ಮಗನ ಬಗ್ಗೆ ಚಿಂತೆ, ಆಶಾಭಂಗ, ಕೋಪ–ಎಲ್ಲವೂ ಇದ್ದವು. ಒಂದು ದಿನ ಕೋಪವು ಹೆಚ್ಚಾಗಿ, ಮಗನನ್ನು ಬಗ್ಗಿಸಿ, ಬೆನ್ನಮೇಲೆ ಒಂದು ಕಲ್ಲುಚಪ್ಪಡಿಯನ್ನಿಟ್ಟು, ಮನೆಯೊಳಕ್ಕೆ ಹೊರಟು ಹೋದ. ಎಷ್ಟು ಹೊತ್ತಾದರೂ ಮಗನ ಯಾತನೆಯನ್ನು ತಪ್ಪಿಸಲಿಲ್ಲ. ಅದನ್ನೆಲ್ಲ ನೋಡುತ್ತಿದ್ದ ಶ್ರೀನಿವಾಸನ ಮನಸ್ಸು ಕರಗಿತು; ಕವಾಡಿಗನ ಮೇಲೆ ಕೋಪ ಬಂತು; ಆದರೆ ಆ ದೊಡ್ಡ ಆಳಿಗೆ ಹುಡುಗನಾದ ತಾನು ಬುದ್ಧಿ ಕಲಿಸುವುದಾದರೂ ಹೇಗೆ ? ಒಂದು ದಾರಿ ತೋರಿತು. ಕವಾಡಿಗನ ಬಳಿ ಹೋಗಿ, "ಅಯ್ಯಾ: ನೀವೇನೋ ಈ ಹುಡುಗನ ತಂದೆಯೇ ಹೌದು; ಇವನನ್ನು ಶಿಕ್ಷಿಸುವ ಅಧಿಕಾರ ನಿಮಗಿದೆ, ನಿಜ; ಆದರೆ ಇಷ್ಟು ಹೊತ್ತು ಹಿಂಸೆಯನ್ನು ಅನುಭವಿಸಿದ್ದಾನೆ, ಇನ್ನು ಹೆಚ್ಚು ಕಾಲವಾದರೆ ತಡೆಯಲಾರ. ಆದುದರಿಂದ, ಸ್ವಲ್ಪ ಹೊತ್ತು ನಾನು ಇವನ ಹಾಗೆ ಬಗ್ಗಿರುತ್ತೇನೆ, ಕಲ್ಲು ಚಪ್ಪಡಿಯನ್ನು ನನ್ನ ಬೆನ್ನಮೇಲಿಡಿ; ಸ್ವಲ್ಪಹೊತ್ತು ಇವನು ಸುಧಾರಿಸಿಕೊಳ್ಳಲಿ; ಆಮೇಲೆ ಬೇಕಾದರೆ ಕಲ್ಲು ಚಪ್ಪಡಿಯನ್ನು ಮತ್ತೆ ಇವನ ಮೇಲೆಯೇ ಹೊರಿಸುವಿರಂತೆ." ಎಂದು ಹೇಳಿದ. ಆ ವಯಸ್ಕನಿಗೆ ಅದೇ ಸಾಕಷ್ಟು ಶಿಕ್ಷೆಯಾಯಿತು; ಬುದ್ಧಿ ಬಂದಿತು. ಮಗನನ್ನು ಎಬ್ಬಿಸಿ ಮನೆಯೊಳಕ್ಕೆ ಕಳುಹಿಸಿದ. ಅಲ್ಲಿಂದೀಚೆಗೆ ಆ ಹುಡುಗನ ಪಾಲಿಗೆ ಶ್ರೀನಿವಾಸನೇ ದೇವರು.

ಬುದ್ಧಿಶಾಲಿಯಾದ ಶ್ರೀನಿವಾಸ ತನ್ನ ತರಗತಿಗಳಲ್ಲಿ ಮೊದಲನೆಯವನಾಗಿದ್ದ. ಉಪಾಧ್ಯಾಯರು ಹೇಳಿಕೊಟ್ಟ ಪಾಠಗಳನ್ನು ಸುಲಭವಾಗಿ ಗ್ರಹಿಸುತ್ತಿದ್ದ. ಅವರ ಪ್ರಶ್ನೆಗಳಿಗೆ ತಡಮಾಡದೆ, ತಪ್ಪಿಲ್ಲದೆ, ಸ್ಪಷ್ಟವಾಗಿ ಉತ್ತರಗಳನ್ನು ಕೊಡುತ್ತಿದ್ದ. ಒಂದೊಂದು ಸಲ ತನ್ನ ಸಂದೇಹಗಳ ನಿವೃತ್ತಿಗಾಗಿ ಅವನು ಕೇಳುತ್ತಿದ್ದ ವಿಷಯಗಳ ಬಗ್ಗೆ ಉಪಾಧ್ಯಾಯರೇ ಆಶ್ಚರ್ಯಪಡುತ್ತಿದ್ದರು. ಬಾಲ್ಯದಲ್ಲೇ ಹಾಗಿದ್ದವರು, ಈಗ ಜಗದ್ಗುರುಗಳಾಗಿ, ತಮ್ಮ ಭಾಷಣಗಳಲ್ಲಿ, ಸಂಭಾಷಣೆಗಳಲ್ಲಿ, ವಿಚಾರಗಳನ್ನು ಪ್ರತಿಪಾದಿಸುವ, ಮಥನ ಮಾಡುವ, ಸಮರ್ಥಿಸುವ ವಿಧಾನ, ಪ್ರೌಢಿಮೆ, ವೈಶಿಷ್ಟ್ಯ ಮುಂತಾದುವನ್ನು ಕಂಡು ಯಾರು ತಾನೆ ಆಶ್ಚರ್ಯಪಡರು ?

ಮಹಾಸ್ವಾಮಿಗಳವರ ಕಲ್ಯಾಣಗುಣಗಳೆಲ್ಲವನ್ನೂ ಬಲ್ಲವರು ವಿರಳ. ಆದರೆ ಕೆಲವನ್ನಾದರೂ ಅರಿಯದವರೇ ಇಲ್ಲವೆನ್ನಬಹುದು. ಜಿಜ್ಞಾಸುಗಳಿಗೆ ಅವರು ಅನುಗ್ರಹಿಸುವ ಉಪದೇಶದ ವಿಧಾನ, ಆ ಉಪದೇಶದ ಹಿನ್ನೆಲೆಯಾಗಿರುವ ವಾತ್ಸಲ್ಯ; ಅವರ ದರ್ಶನಕ್ಕಾಗಿ ಬಂದಿರಲಿ, ಬಾರದಿರಲಿ, ಯೋಗ್ಯರಾದವರೆಲ್ಲರಲ್ಲೂ ಅವರಿಗಿರುವ ಗೌರವ, ದಿನಂಪ್ರತಿ ಬಂದುಹೋಗುವ ಅಸಂಖ್ಯಾತ ಶಿಷ್ಯರ ಮೇಲೆ ಸತ್ಪರಿಣಾಮವನ್ನುಂಟು ಮಾಡುತ್ತಿರುವ ಅವರ ಅಸಮಾನ ಸರಳತೆ, ಅನುಗ್ರಹ ಭಾಷಣ ಕಾಲಗಳಲ್ಲಿ ಅವರ ಮೃದುಮಧುರವಾದ ಹಾಗೂ ಹಿತಕರವಾದ, ಅಮೃತವಾಣಿ, ಅವರ ಮುಖಮಂಡಲದಲ್ಲಿ ಸದಾ ಪ್ರತಿಬಿಂಬಿತವಾಗುವ ಮನಶ್ಶಾಂತಿ ಮತ್ತು ಮನನಲತೆ, ತಪ್ಪಿತಸ್ಥರಲ್ಲೂ ಅವರಿಗಿರುವ ಸಹನೆ, ದೀನ ಶಿಲಿತರಲ್ಲಿ ಅವರ ಅನುಕಂಪ, ಸ್ವಪ್ರಯತ್ನದಿಂದ, ಆತ್ಮಗೌರವದಿಂದ, ಜೀವನ ಮಾಡುತ್ತಿರುವ ಕಡು

Sri Vidyabharathi Book Centre, Sringeri

CC-O. In Public Domain. Digitized by eGangotri

...ಡನರ ಬಗ್ಗೆ ಅವರ ಮೆಚ್ಚುಗೆ, ಸ್ವಾರ್ಥರಹಿತ ಪ್ರಜಾ ಸೇವಕರಲ್ಲಿ ಅವರು ತೋರಿಸುವ ಅತಿಶಯ ಪ್ರೇಮ, ತಮ್ಮನ್ನೇ ನಂಬಿರುವ ನಿಜಭಕ್ತರ ಉದ್ಧಾರಕ್ಕಾಗಿ ಅವರು ಪ್ರವಹಿಸುವ ಅನುಗ್ರಹಪರಂಪರೆ ಈ ಮೊದಲಾದ ಗುಣರತ್ನಗಳನ್ನು ಕೃತಜ್ಞತೆಯಿಂದ ಸ್ಮರಿಸಿಕೊಳ್ಳುವ ಸಜ್ಜನರು ಅಲ್ಲಲ್ಲಿ ಬಹುಮಂದಿ ಇದ್ದಾರೆ. ಒಟ್ಟಿನಲ್ಲಿ 'ಶ್ರದ್ಧಾತ್ರಯ ವಿಭಾಗ ಯೋಗ'ದಲ್ಲಿ ಗೀತಾಚಾರ್ಯನು ಒಪ್ಪಣೆ ಕೊಡಿಸಿರುವ ತಪಸ್ಸಿನ ಆಚರಣೆ ಈಗಲೂ ಸಾಧ್ಯ, ಬರೀ ಬಾಯಿಮಾತು ಅಲ್ಲ, ಎಂಬುದಕ್ಕೆ ನಮ್ಮ ಜಗದ್ಗುರು ಮಹಾಸ್ವಾಮಿಗಳವರೇ ಸಾಕ್ಷಾತ್ ನಿದರ್ಶನವಾಗಿದ್ದರು. ಇವರ ಜೀವಿತದಿಂದ, ಇವರ ಬೋಧೆಗಳಿಂದ, ಇವರ ಕಾರ್ಯ ಸಾಧನಾ ಕ್ರಮದಿಂದ ಕಲಿಯಬಹುದಾದ, ಕಲಿಯಬೇಕಾದ, ನೀತಿಸಾರವನ್ನು ಹೀಗೆ ಸಂಗ್ರಹಿಸಬಹುದು. "ಅತ್ಯಂತ ಶ್ರೇಷ್ಠವಾದ ನರಜನ್ಮ ದೊರಕಿರುವ ಈ ಅಪೂರ್ವ ಅವಕಾಶವನ್ನು ನಾವು ತಪ್ಪದೆ ಸದುಪಯೋಗಪಡಿಸಿಕೊಳ್ಳಬೇಕು. ಶುದ್ಧ ಜೀವನವನ್ನು ನಡೆಸಬೇಕು, ಪ್ರತಿನಿಮಿಷದಲ್ಲೂ ನಮ್ಮ ಕೆಲಸ, ನಮ್ಮ ಮಾತು, ನಮ್ಮ ಯೋಚನೆ, ಎಲ್ಲವೂ ನಮ್ಮ ಆತ್ಮೋದ್ಧಾರಕ್ಕೆ ಸಹಾಯಕವಾಗಿರಬೇಕು. ನಮ್ಮ ಆಧ್ಯಾತ್ಮಿಕ ಪ್ರಗತಿ ಮುಂದುವರಿಯುತ್ತಿದೆ ಎಂಬ ನಂಬಿಕೆ ದಿನೇ ದಿನೇ ದೃಢತರವಾಗುತ್ತಿರಬೇಕು." "ಉತ್ಸರ್ಪಿಣೀ ಖಲು ಮಹತಾಂ ಪ್ರಾರ್ಥನಾ" ಇದೇ ನಮ್ಮ ಬಗ್ಗೆ ಜಗದ್ಗುರುಗಳ ದಿವ್ಯವಾದ ದೃಷ್ಟಿ, ಇದೇ ಅವರು ನಿತ್ಯವೂ ಕರುಣಿಸುತ್ತಿದ್ದ ದಿವ್ಯತರ ಉಪದೇಶ ಇದೇ ಅವರು ನಮ್ಮ ಉದ್ಧಾರಕ್ಕಾಗಿ ಅನುಗ್ರಹಿಸುತ್ತಿದ್ದ ದಿವ್ಯತಮ ಸಂದೇಶ. ಈ ಅನುಗ್ರಹತ್ರಯದಿಂದ ಮಹಾಸ್ವಾಮಿಗಳ ಶಿಷ್ಯಕೋಟಿಯು, ಇಂದಲ್ಲ, ನಾಳೆ, ಉದ್ಧಾರವಾಗುವುದರಲ್ಲಿ ಸಂಶಯವಿಲ್ಲ.

ಉಪದೇಶಕರು ಎಷ್ಟೋ ಮಂದಿ ಇದ್ದಾರೆ. ಆದರೆ ಅವರಿಂದಾಗುವ ಪರಿಣಾಮ ಬಗೆಬಗೆಯಾಗಿರುವುದು, 'ಗುರು'ವೆಂದರೇನು, ಗುರೂಪದೇಶ ಸತ್ಪರಿಣಾಮಕರವಾಗಬೇಕಾದರೆ ಆ ಗುರುವಿನ ಜೀವನ ಕ್ರಮ ಹೇಗಿರಬೇಕು. ಅವರ ಪೂರ್ವೋತ್ತರಗಳು ಎಂತಹುದಾಗಿರಬೇಕು, ಎಂಬುದನ್ನು ಅವಲಂಬಿಸಿರುವುದು. ಅವರ ನಡೆ-ನುಡಿಗಳೇ ಉಪದೇಶಗಳಾಗುವುವು. ಈ ಕಾರಣದಿಂದ, ನಮ್ಮ ಗುರುಸಮ್ರಾಟರ ಜಗದ್ವಿಖ್ಯಾತ ಕೀರ್ತಿಪ್ರಭಾವಗಳ ಹಿನ್ನೆಲೆ ಏನು, ಅವರ ಅಪಾರ ಶಕ್ತಿ ಎಲ್ಲಿಯದು, ಆ ಶಕ್ತಿಯ ಮೂಲವಾವುದು, ಆ ಮೂಲದ ಬೆಲೆ-ಭದ್ರತೆಗಳು ಎಷ್ಟು, ಎಂಬುದನ್ನೆಲ್ಲ ಅರ್ಥ ಮಾಡಿಕೊಂಡರೆ ನಮಗೇ ಒಳ್ಳೆಯದು. ನಮ್ಮ ಸಂಶಯಗಳ ನಿವೃತ್ತಿಗೆ, ನಮ್ಮ ಭಕ್ತಿಯ ಬೆಳವಣಿಗೆಗೆ, ನಮ್ಮ ಸಾಧನೆಯ ಸಿದ್ಧಿಗೆ, ಅದೇ ಹೇತುವಾದೀತು.

ಮಹಾಸ್ವಾಮಿಗಳವರು ಸಿದ್ಧಸಂಕಲ್ಪರು. ಅವರು ಈಗಾಗಲೇ ಸಾಧಿಸಿರುವ ಮಹಾಕಾರ್ಯಗಳು ಅನೇಕಾನೇಕವಾಗಿರುವುವು. ಆದರೆ ಅವುಗಳ ಯಶಸ್ವೀ ಸಾಧನೆಯು ತಮ್ಮ ಪ್ರಯತ್ನದಿಂದ, ತಮ್ಮ ಸಾಹಸದಿಂದ, ತಮ್ಮ ಪ್ರಭಾವದಿಂದ ಆಯಿತೆಂಬುದಾಗಿ ಎಂದಿಗೂ ಹೇಳರು, ಎಂದಿಗೂ ಒಪ್ಪರು ಈ ವಿಚಾರವಾಗಿ ಮಾತು ಬಂದಾಗಲೆಲ್ಲ ಅವರಾಡುವ ದಿವ್ಯೋಕ್ತಿ ಏನೆಂದರೆ: "ಮನುಷ್ಯ ಯೋಚನೆಗೆ, ಮನುಷ್ಯ ಪ್ರಯತ್ನಕ್ಕೆ, ಮನುಷ್ಯ ಸಾಹಸಕ್ಕೆ ಮೀರಿದ ಮಹಾಶಕ್ತಿಯೊಂದಿದೆ. ಅದು ಯಾವಾಗಲೂ ತನ್ನ ನಿರ್ದಿಷ್ಟ ಕಾರ್ಯಗಳನ್ನು ನಿರಂತರವಾಗಿ, ನಿರ್ದಾಕ್ಷಿಣ್ಯವಾಗಿ, ನಿರ್ವಹಿಸುತ್ತಲೇ ಇರುವುದು. 'ಈಶ್ವರೇಚ್ಛೆ' ಎಂಬುದಾಗಿಯೂ, 'ದೈವಯತ್ನ' ಎಂಬುದಾಗಿಯೂ ನಮ್ಮ ಪ್ರಾಚೀನ ವಾಙ್ಮಯದಲ್ಲಿ ಸಂಬೋಧಿಸಿರುವುದು ಅದನ್ನೇ. ನಮ್ಮ ಪ್ರಯತ್ನದಿಂದ ಎಲ್ಲವನ್ನೂ ಸಾಧಿಸಬಲ್ಲೆವೆಂಬುದು ಸುಳ್ಳು ಮಾತು."

ಬಹಳ ವರ್ಷಗಳ ಹಿಂದೆ, ಮರೆಯಲಾಗದಂತಹ ಒಂದು ಪುಟ್ಟ ಸಂಭಾಷಣೆ ನಡೆಯಿತು: "ಶ್ರೀ ಸಂಸ್ಥಾನದ ಪಂಚಾಂಗಗಳಲ್ಲಿ ಮತ್ತು ಇತರ ಪ್ರಕಟಣೆಗಳಲ್ಲಿ ಸಾಮಾನ್ಯವಾಗಿ ಅಚ್ಚಾಗುತ್ತಿರುವ ಮಹಾಸನ್ನಿಧಾನದ ಭಾವಚಿತ್ರಕ್ಕಿಂತ ಅವರದೇ ಬೇರೊಂದನ್ನು ಮುದ್ರಿಸಿದರೆ ಒಳಿತು" ಎಂದು ಬಿನ್ನೈಸಿದೆ. 'ಏಕೆ ?' ಎಂದರು ಗುರುವರ್ಯರು. 'ಅದರಲ್ಲಿ ಯಾವ ಅಲಂಕಾರವೂ ಇಲ್ಲ, ರಾಜಸಂನ್ಯಾಸದ ಯಾವ ಚಿಹ್ನೆಗಳೂ ಇಲ್ಲ. ಅವಕ್ಕೆ ಬದಲಾಗಿ ವಿಪರೀತವಾಗಿ ಬೆಳೆದ ಗಡ್ಡ ಬೇರೆ. ದೂರದಿಂದ ನೋಡಿದರೆ ಯಾರೋ ಒಬ್ಬ ಸಾಮಾನ್ಯ ಬೈರಾಗಿಯ ಚಿತ್ರದಂತಿದೆ' ಎಂದು ವಿಜ್ಞಾಪಿಸಿದೆ. ಆಗ ಅವರಾಡಿದ ವಾಕ್ಯಸರಣಿ, ಚಿರಸ್ಮರಣೀಯ ಮತ್ತು ಗಮ

Sri Vidyabharathi Book Centre, Sringeri

CC-O. In Public Domain. Digitized by eGangotri

ನಾರ್ಹ : "ಅದೇ ನನಗೆ ಪ್ರಿಯತಮವಾದುದು. ನೀನು ಸೂಚಿಸಿದ ಬಹಿರಾಡಂಬರಗಳೊಂದೂ ನನಗೆ ಬೇಕಿಲ್ಲ, ಅವೆಲ್ಲವೂ ಕ್ಷಣಿಕವಾದುವು. ನನ್ನ ಗುರುನಾಥನ ಕೃಪೆಯಿಂದ ನನ್ನಲ್ಲಿ ಸ್ಥಿರಗೊಂಡಿರುವ ಈ ಅರಿವಿನ ಬಲದಿಂದಲೇ ನನಗೆ ಈ ಕಿರೀಟ, ಪಲ್ಲಕ್ಕಿ, ಮೊದಲಾದವುಗಳಲ್ಲಿ ವ್ಯಾಮೋಹವಿಲ್ಲದಿರುವುದು. ನನ್ನ ಆಶಯವೇ ಬೇರೆ; ನನಗೆ ಪೂರ್ಣ ಸ್ವಾತಂತ್ರ್ಯವಿದ್ದಿದ್ದರೆ, ಈ ಕ್ಷಣ ಹಿಮಾಲಯ ಪ್ರಾಂತಕ್ಕೆ ಧಾವಿಸಿ, ನಾನೇ ನಾನಾಗಿ ವಿಹರಿಸುತ್ತಾ, ಅಲ್ಲಿನ ದೈವಿಕ ವಾತಾವರಣದೊಂದಿಗೆ ಬೆರೆತು, ಕೈಲಾಸೇಶ್ವರನ ವಿಭೂತಿಯ ವರ್ಣನಾತೀತ ಆನಂದಸಾಗರದಲ್ಲಿ ನಿರಂತರವಾಗಿ, ನಿರುಪಾಧಿಕವಾಗಿ, ಮುಳುಗಿ ತೇಲಾಡುತ್ತಲಿದ್ದೆ." ಇದು, ನಮ್ಮ ಮಹಾಸನ್ನಿಧಾನದ ಅಚ್ಚಳಿಯದ, ಸ್ವಾಭಾವಿಕ, ಅಸ್ಥಿಗತ ವೈರಾಗ್ಯ; ಇದೇ. ಅವರು ಅತ್ಯಮೋಘ ಸದ್ಗುಣ ಮಹಾ ಮಾಲೆಯು ನಾಯಕಮಣಿ. ಅಸ್ಥಿಗತ ವೈರಾಗ್ಯ; ಇದೇ. ಅವರು ಅತ್ಯಮೋಘ ಸದ್ಗುಣ ಮಹಾ ಮಾಲೆಯ ನಾಯಕಮಣಿ. "ಅನರ್ಘ್ಯಮಪಿ ಮಾಣಿಕ್ಯಂ ಹೇಮಾಶ್ರಯಮಪೇಕ್ಷತೇ" ಎಂಬಂತೆ, ಪರಮಗುರುಗಳ ಪೂರ್ಣಾನುಗ್ರಹದ ಹಿನ್ನೆಲೆಯಲ್ಲಿ ಈ ಗುರುವರ್ಯರ ಗುಣರಾಶಿಯು ಥಳಥಳಿಸುತ್ತಿರುವುದರಿಂದ ಇದರಹೊಳಪು ನನ್ನಂತಹ ಅಸಂಖ್ಯ ಶಿಷ್ಯರ ಅಜ್ಞಾನಾಂಧಕಾರವನ್ನು ತೊಲಗಿಸುವುದರಲ್ಲಿ ಸಂದೇಹವಿಲ್ಲ. ನಿಜವಾಗಿಯೂ, ಲೋಕಕಲ್ಯಾಣ ಸಾಧನೆಯಾಗಬೇಕಾದದು, ಆಗುತ್ತಿರುವುದು, ಇಂತಹ ಮಹಿಮಾನ್ವಿತ ಪುರುಷಪುಂಗವರಿಂದ. ಇವರ ಅನುಗ್ರಹ ಲೋಕಕ್ಕೆ ಚಿರಕಾಲ ಲಭಿಸುತ್ತಿರುವಂತೆ ಜಗನ್ಮಾತೆ ಶ್ರೀ ಶಾರದಾಂಬೆಯು ಕರುಣಿಸಲಿ.

ಚಿರಮಭಿವರ್ಧತಾಂ ಗುರುಕೀರ್ತಿಶ್ರೀಃ

Sri Vidyabharathi Book Centre, Sringeri

CC-O. In Public Domain. Digitized by eGangotri

Our Great Guru: Sri Abhinava Vidyatirtha Mahaswami

H. H. SRI BHARATI TIRTHA MAHASWAMIGAL

The historic Anugraha Bhashanam of Jagadguru Sri Sannidhanam, H. H. Sri Bharati Tirtha Mahaswamiji, on completion of his Guru's aradhana on Oct. 4, 1989.

Akhilanugraha deeksham nikhila thamappunja nigrahey daksham Abhinava Vidyatirtham hamsavali seyvitham vandey,

Sri Sankara Bhagavatpada, the very incarnation of Lord Parameshwaral accomplished three importent tasks for the reestablishment of Santana dharma.

The first one was the detailed commentary (bhasya) written by him on prasthanatraya (Upanishads, Brahma Sutra and Srimad Bhagavad Gita).

The Second was the extensive yatra undertaken throughout Bharat debating, convincing and winning over the pandits who were mistakenly following different religious paths and practices.

The third and the most important of all was the establishment of four amnaya (Vedic) peethas in the four directions of the country, for the perpetuation of Santana dharma.

It is the extraordinary foresight of Sri Sankara which made him establish these Chathuramnaya peethas. Our Guru used to say that Adi Sankara is the only personality born so far in this world with such remarkable talent and foresight.

He selected places in the midst of mountains for the southern peetha, sringeri and northern peetha, Badri. For the other two, he selected the shores of oceans-Dwaraka in the West and Puri in the East.

He could have set up the peethas in big cities or on the outskirts of cities. But he did not do so. The places were so chosen that people will get rid of their worries and enjoy peace by a mere visit to those places. Sri Sankara chose the serene beautiful Sringeri Kshetram for the Dakshinamnaya peetham.

ONLY FOUR PEETHAS

It is well-known that the Vedas are Four, the directions are Four, and the faces of Brahma are four. Therefore Bhagavatpada established four amnaya peethas. He also specified for each peetham, the Devata, the Kshetra, the Tirtha and the Acharya purusha.

Not only that, he prescribed the qualifications for his successors in those

Sri Vidyabharathi Book Centre, Sringeri

CC-O. In Public Domain. Digitized by eGangotri

peethas. In his Mathamnaya sashanam, he has laid down : suchihi, Jiteyndriyaha, Vedavendangaadi Vichakshanaha, that is, a person of unimpeachable character who has conquered his senses and who is well versed in Vedas with its angas and the sastras, It will not do, if a person is just well learned and has the ability to attract, people. He could not occupy the Peetham unless he is of unimpeachable character.

How can one who is a slave to the senses, impress the people by his preaching ? In Vivekachudamani Bhagvatpada has clearly pointed out that creatures which go after even one sense object only, face destruction, and what will be the fate of the man who is swayed by all the five senses (sound, touch, form, taste and smell) together ?

Sri Bhagavatpada has defined the guru as one who is well learned and has mastered the Tattva and who is also concerned with the welfare of his disciplies. A person well learned but does not have adequate concern for the Sishya's welfare or a person who is much interested in the welfare of the Sishya but he himself is ignorant, can never be a guru. These strict qualifications apply to the peethadhipatis

It is the great good fortune of the people that all the successive peethadhipatis of Dakshinamnaya Sringeri Sri Sarada peetham have possessed all the prescribed qualifications in toto. I wonder as to what an auspicious appropriate excellent moment (Muhurtha) Sri Sankara Bhagavatpada should have chosen to establish this peetham at Sringeri which has such all illustrious unbroken line of Mahathmas as peethadhipatis !

FOREMOST JNANI

Our acharya, Jagadguru Sri Abhinava Vidyatirtha Mahaswamiji, possessed all the qualifications laid down by Sri Sankara. I do not consider myself competent enough to speak adequately about the complete sense-control and the most glorious unblemished perfect character and high erudition of our acharya. It is beyond the comprehension of ordinary man.

Sri Sankara Bhagavatpada has quoted a sloka in his Brahadaranyaka Bhasya and elsewhere Shakuneenaam Ivaakaashey jaley Vaaricharasya cha Padam Yathaa na drishyeta tatha jnaanavataam gatihi.

(The ways of jnanis are uncomprehendable like the paths of vulture on the high sky and the fish in the water).

Our guru is foremost among such jnanis. Similar to Adi Sankara, our acharya also embraced Sannyasa at a very young age and as such never knew anything about the third purushartha (Kama) but only knew about the fourth (moksha)

He used to advise people who came to talk to him, not to waste time in gossiping. At the same time he welcomed useful talk. This nature of his is the outcome of his deep study and constant contemplation of Upanishadic injunctions. The Upanishad says : Naanuddhyaayaath bahoon shabdaan Vaacho viglaapanam hi thath.
Inner purity

(Dont' speak too many words. It is only exhaustion of the Lungs).

Sri Vidyabharathi Book Centre, Sringeri

CC-O. In Public Domain. Digitized by eGangotri

It is better to keep quiet than waste time by taking too much. At least we won't be wasting our lungs. Our Acharya was observing that.

He had great taste for going through the works of Sri Sankara Bhagavatpada and contemplating on the tattvas clarified. He always advised me to keep in mind the tatva expounded by Sri Bhagavatpada even while moving about.

He said' Going to Sri Sarada temple, prostrating before the idol and such things are external activities (Bhahya Vyavahara). The inner vyavahara should be the tattva proclaimed by Sri. Bhagavatpada. This alone will make life worthwhile. Otherwise how can our life become purposeful ?" The constant contemplation on Upanishadic tecahings, as expounded hy Sri Adi Shankara, was our Acharya's great quality.

The following sloka of Kalidasa was dear to our Acharya
"Dweyshyopi Sammathaha Shistaha
Thaasaarthasya Yathoushadam
Thyaajyo dushtaha priyopyaaseeth
angulee Vouragakshathaa.

He used to tell me that our lives should be modelled after the above sloka which is from Raghuvamsa describing the qualities of Dileepa Maharaja.

This Sloka answers the query as to who is acceptable and who is not. Normally for an ordinary man, relationship or friendship counts in accepting a person. But for Dileepa Maharaja it was different. What he looked for was competence (Yogyata). Whether the other person likes me or not is immaterial. If he is competent, I require him. He may be averse towards me but still I need him because of his competence".

Kalidasa has given a simile The medicine, though bitter is required for the patient. The curative factor is important and not the taste. The finger bitten by a poisonous snake is to be chopped off (lest life be in danger).

We should not have the abhimana that the finger is our own dear thing. These are the criteria for acceptance or rejection of persons.

This nature of Dileepa Maharaja was liked by our Acharya. A competent person (Yogya) is liked by our Acharya, even if he remains at a distance and he will ignore a person who is an ayogya, even if he remains in close proximity, To use his words : tath Diseypi Namo Namha ! He won't even glance at that direction.

Again, like Dileepa Maharaja, our Acharya had the other characteristcs such as nobility, intelligence, balance, bravery and excellence—all in abundance.

PURPOSE OF LIFE

He was overflowing with compassion towards everyone. He considered that life was meant for Paropakara. Normally a person would react if some one behaves in an improper manner, and nurturing ill-will, he would wait for an opportunity to wreak vengeance.

But our Acharya was always for giving and forgetting the misconduct of of others, due to his inherent nature of

Sri Vidyabharathi Book Centre, Sringeri

CC-O. In Public Domain. Digitized by eGangotri

compassion and mercy. He used to tell us always that we must not have a feeling or retaliation—Kruthasya Prathikarthavyam. He said : 'It is the nature of one possessed with raajasa disposition. We the Sannyasis should be of Satvika deposition always'.

This not just what my guru talked. I have personally witnessed many incidents where erring persons were not only pardoned but also blessed There are hundreds of such incidents which can be cited. This is our Acharya's nature and another significant aspect of our guru

He could never hurt the feelings of others. He used to say : 'Why should I say something which would hurt your feelings ? I don't know what difficulties and problems you are undergoing that make you speak/behave in a mistaken manner. What would I gain if I hurt you ?''.

Whenever devotes approached our Acharya and sought his permission to leave, he used to say : 'You have come. I did not ask you as to when you came or when you propose to leave. I take it that you stay here until your other duties require your presence elsewhere.'' This is one of the examples of his magnanimous unimposing nature.

It is my good fortune that I have witnessed many such educative incidents all these 23 years that I had been with him. The coincidence in this matter is that our Acharya also was with his guru for a period of 23 years The only difference is that our Acharya was with his Guru for that period as a Sannyasi, while I was a brahmacharI for the first eight years of my life with my guru.

GREAT AFFECTION

He had extraordinary affection towards me. I came to know that from his own expressions. On a Pradosha day, in the every beginning of my coming to SringerI, I had been to the other side of the river. That night while sitting for puja, our Acharya enquired : 'Did you go to other side of the river' ?

''Yes. I went', was my reply.

''You stay put in Narasimha Vana itself. Don't go elsewhere I will always be observing you,'' said my guru. I did not know that he was closely watching my movements. To say that I should always be in Narasimha Vana and that he was obseiving me intently, denotes the amount of affection he had for me.

He used to tell me that there must not be any distraction or diversion, while studying. He said, 'Once diversion comes, it is impossible to train you as a Pandit. ''He narrated his Experience with his Guru. Sri. Chandrasekhara Bharati Mahaswami, saying : Our Aharya will reprimand us if we did not study even for a short while.

Like this he used to narrate innumerable experiences and taught us how to conduct overselves, the traditions of the math that are to be followed and the way of dealing with sishyas, etc, when Circumstances, arose, he used to give the picture of various persons But in the end he would emphasise that irrespective of the behaviour of persons, we must always, without fail, be affectionate to-

Sri Vidyabharathi Book Centre, Sringeri

CC-O. In Public Domain. Digitized by eGangotri

wards each one and nobody should get a feeling that he is not liked by us.

VALID EVEN TODAY

Kalidasa has described how Dasaratha conducted himself :

Each one in his Kingdom was feeling that he himself is liked by the Maharaja. Such was the behaviour of Dasaratha Maharaja.

Our Acharya added : Look here ! Swamiji ! We mus not think that it was relevant only in Dasaratha's period or Kalidasa's period. But, it is a lesson for us even today'. Thus teaching many things, our Guru has blessed us.

Another surprising factor comes to my mind. My Guru took Sanyasa in 1931 and he was with his guru for 23 years. till 1954 when he was appointed as the peetadhipati. He was the 35th Peetadhipati in the line of succession and his period of reign is also 35 years. I don't know what Ishwara Sankalpa this is.

It will be hard to believe if we enumerate the devalopment works carried out by him in this math during these 35 years.

In the administration of the math and its affairs, in strengthening the bonds between the sishyas and the math, in establishing branches, in the propagation of vedas and sastras, and in short in all activities that are beneficial to the people at large, our Guru's contribution has been very significant. There is no matter connected with the math in which the gurn has not played an effective rdle.

It is true that right from the beginning the charyas of Srigeri Sri. Sarada Peetham have undertaken Yatras to bless the sishyas. But it is difficult to find a personality like our Guru in the annals of the math who has so extensively and repeatedly travelled from Kanyakumari to Kashmir.

Not only that, our Guru is the only amnaya Peethadhipati after Adi Sankara to have visited Nepal. Mahasivaratri was celebrated by our Guru at Nepal in 1957. That too was on the earnest and devout request made by the then king of NEPAL.

1951 EVENTS RECALLED.

Our Guru did not go and stand at their doors on his own. Out of gratitutde for the special blessings received by his father, King Tribhuvan, from the Sringeri Acharya, King Mahendra of Nepal extended a reverential invitation to our Acharya.

in 1951 a distress befoll kIng Tribhuvan the father of King Mahendra. He came to India and Stayed incognito Jagadguru Sri. Chandrasekhara Bharati Mahaswamiji who had heen remaining anthamukha in those years, one day caused a Srimukham to be sent to the King, in Delhi, blessing—" you will regain the throne very shortly Sri. Sarada Chandramoue eeswara and Sri. Pasupatinath will bless you for that."

Sri Vidyabharathi Book Centre, Sringeri

CC-O. In Public Domain. Digitized by eGangotri

This blessing fructified and King Tribhuvan got back the throne within waeks. That was in the mind of King mahendra when he invited our Guru to Nepal. The King showed great reverence and took the acharya for special darsan of Sri. Pasupatinath.

Our acharya started on his first yatra in 1956 and covered the four southern states Karnataka, Kerala, Tamil Nadu and Andhra Pradesh continuously for a period of six years. Again starting from Sringeri in June 1964, he covered southern and northerm India continuosly for four years. This was his second major yatra

In many parts of the country, he established branches. In many places, he consecrated the idols of Sri Saradamba and Sri Sankara Bhagavatpada. He established pathaslas and initiated activities for Dharmic awareness.

For the propagation of Vedas, our acharya added a Veda Pathashala to the existing sastra pathashala at Bangalore, Everybody is aware of the tremendous developments that have taken place in the 100 year old patashala at Sringeri, during the time of our guru.

Similarly, for the propagation of Sanskrit, our guru has established 'Surasaraswati Sabha'which is conducting exams twice a year and not less than 6000 students are appearing every time.

JOURNALS STARTED

Likewise he caused jounrnais to De started for the propagation of Sanatana Dharma and Vedanta. He called them "Sri Sankara Krupa" The first was in Tamil which began in 1959 and is now completing 30 years. When he was travelling in Andhra Pradesh in 1961, he started the journal in Telugu, and it is completing 28 years now. Afterwards ne started the journal in Kannada. It is also completing 25 to 26 years now. This year the Malayalam journal, 'Sri Sankara Krupa' has resumed publication.

In one way or anothet we should make people believe in God; we should make people sensitive to dharma; we should make them go in the path of rectitude, these were the intentions with which he caused the starting of those jouruals,

In the Sringer Math, innumerable were the things he did to improve the place. Many of you might remember the meagre facilities which were available to Pilgrims coming here. Now our guru has created facilities to such an extent that we are ready to receive a thousand pilgrims at a time.

In this connection, I would like to recall another attitude of mind of his' He used to say "We should do our duty. We should not be tempted to enjoy the result ourselves. Let anybody enjoy." pointing to the coconut grove he brought up and the buildings, he used to say," I have planted so many coconut trees. I have not planted them with the the expectation that I woulde enjoy the produce. I thought it my duty to plant them and so I did it. Let anybody

Sri Vidyabharathi Book Centre, Sringeri

CC-O. In Public Domain. Digitized by eGangotri

enjoy the result, See I have built so many buildings here. It is not with the intention of living in them that I got them coustrncted. It is for the use of the devotees who come here."

HOSPITAL FOR ALL

Many a time I have said that my guru has constructed a hospital and goes there often, not for his own treatment but to see how improvements could be brought about there Thus his principle in life was that we should perform our duty without expectation of reaping the fruits ourselves. Another example is the renovation of the Sri Malahanikareshwara temple. One wonders at the extraordinary transformation brought about on that hillock.

All these only illustrate the breadth of vision and the greatness of soul of our guru. I could go on like this for hours and I would not have completed enumerating the great qualities of mind of our guru.

By his attaining siddhi, we have incurred a great loss. As you know, I had to rush from Pune where I was staying for Chaturmasya. Even though I tried to bear the loss, I could not control the grief when I had to perform the abishekam in the same place at which he bestowed on me sannyasa and blessed me with the kamandalam. I had to perfom abishekam to his body with the same kamandalam. At that moment my grief was about to break through the floodgates. But with a great effort ane determination, I controlled myself.

GOD'S WILL

Our guru used to tell me, "I know your grief will be uncontrollable when this body ceases to exist. But it is the way of all flesh." These were the very sentiments expressed by Sri Narasimha Bharati Swami to his sishya, Sri Sacchidananda Sivabhinava Narasimha Bharati Swami. Our guru's physical absence affects us greatly. The great Bana Bhatta has somewhere said thet we are helpless in regard to God's pleasure. We have to console ourselves dwelling on such thoughts If by the grace of Sarada Parameshwari and the blessings of our guru we are able to discharge the responsibilities assigned to us by our guru it would be a fitting tribue to his memory and the service we can render him.

On September 22, the day next to the one on which our guru attained videha mukti, the Prime Minster of India who had come on that occasion expressed similar sentiments He told me "A great responsibility has fal'en on you." I answered thaf by the grace of the guru and with the helping hand extended by such as he I am confident of discharging my responsibilities. He commented that what I had spoken is very appropriate.

Therefore my sole object is to deserve the blessings of our guru by following the path shown by him.

Our guru bestowed his affection on all people. But, since he had assigned a great responsibility to me he bestowed on me affection in abundant measure. In accordance with his directions I undertook travel in North India. He used to

Sri Vidyabharathi Book Centre, Sringeri

CC-O. In Public Domain. Digitized by eGangotri

send benedictory letters now and then. His last letter to me dated July 28 was to me at Pune through the administrator. The letter is in Sanskrit. I will read it as it is and render it into Kannada (The English rendering of the letter is given below—Editor.)

GURUJI'S LETTER

"The letter which you wrote on the first day of Vaishaka bahula was brought to me by Sri Vinayaka Udupa, the principal of our pathashala. The letter which you wrote on the third day of Ashada Bahula was delivered to me by the secretary when I was in the shrine of our guru. We were glad to know about your welfare.

I came to Dharwad from Kaladi and nstalled Saradamba there. Later I returned to Sringeri. After resting for a while, acceding to the prayers of Hariharan and Jyoti Subramanyam I proceeded to Mysore and Bangalore, and blessed their efforts. I returned to Sringeri on the fifth day of Ashada, and took the vow of Chaturmasya on the full moon day

"I was greatly delighted to learn that you are giving discourses on the Bhashya during Chaturmasya at Pune. I convey my blessings for yuur happy sojourn at Pune. Let your stay at pune and the work you have undertaken bring you fame. There are many persons in Pune who are well versed in Sanskrit I hope your discourses would delight them.

"I expect that the work on the bridge across the Tunga would be completed by Magha. The rains had continued till now. The state of my health is in accordance with my age. I am doing those works which need to be done and wite nothing to worry about I am feeling happy. It is our prayer that the Almighty bring you Kshema."

This is what he wrote This is an illustration of his benediction and sympathy for me. I read this letter often nowadays and I feel as thoug I am seeing my guru face to face But the cruel fact that ur guru has become a mukta stares uso in the face.

It is said that Sri Sacchidananda sivabhinava Narasimha Bharati Swamigal was immersed in grief when his guru passed away. He was grief stricken to such an extent that he sat immobila for several days. Then the guru appeared in a dream and chastised him. "what is this? You are weeping like a woman? Where have we gone? Till now we were confined to a particular body. Now have become a part of the all-pervading chaitanya." I recall this message and console myself that our guru has not left us at all and ask you to follow in the footsteps of our guru and deserve his blessings.

GRAND MEMORIAL

On this occasion I wish to tell you that we will construct a grand devalaya to our guru on the model of the devalayas constructed in memory of our parama guru Sri Chandrasekhara Bharati Mahaswami and Parameshti guru Sri Sacchidananda Sivabhinava Narasimha Bharati Mahaswami.

Remembering once again our guru of blessed memory I conclude with these words.

Rishya Sringa puraadeesham Tunga tirtha nivaasinam

Bhaktaamoda pradam vande Vidyaatirtham Maha gurum.

Courtesy : TATTVALOKA

Sri Vidyabharathi Book Centre, Sringeri

CC-O. In Public Domain. Digitized by eGangotri

|| ಶ್ರೀ ||

ಸ್ಮರಣೆಯಾಗಿರುವ ಸ್ಮರಣ ಶಕ್ತಿ

ಲೇಖಕರು : ಡಾ|| ಎಂ. ಸೂರ್ಯ ಪ್ರಸಾದ್, ಎಂ. ಎ , ಪಿ. ಹೆಚ್. ಡಿ.
ಹಿಂದಿ ಉಪನ್ಯಾಸಕರು, ವಿಜಯ ಕಾಲೇಜು, ಬೆಂಗಳೂರು-4
ಕಲಾ ವಿಮರ್ಶಕರು, "ದಿ ಹಿಂದೂ"

ಜಗದ್ಗುರು ಶ್ರೀಶ್ರೀ ಅಭಿನವ ವಿದ್ಯಾತೀರ್ಥಮಹಾಸ್ವಾಮಿಗಳ ಅತ್ಯಂತ ನಿಕಟ ಹಾಗೂ ಆತ್ಮೀಯ ಸಾನಿಧ್ಯವನ್ನು ಪಡೆಯುವ ಭಾಗ್ಯ ನನಗೆ ಸುಮಾರು ಏಳೆಂಟು ವರ್ಷಗಳ ಹಿಂದೆ ಒದಗಿತ್ತು. ಆಗ ತಾನೇ ಅವರ ಜೀವನ ಚರಿತ್ರೆಯನ್ನು ಕುರಿತಾದ ಒಂದು ಪುಸ್ತಕವು ಕನ್ನಡದಲ್ಲಿ ಪ್ರಕಟಣೆಯಾಗಿತ್ತು. ಅದನ್ನು ನಾನು ಹಿಂದಿಗೆ ಅನುವಾದಿಸಬೇಕೆಂಬ ಹಂಬಲದೊಂದಿಗೆ ಶ್ರೀಶ್ರೀಗಳವರ ಆಶೀರ್ವಚನ ಪಡೆಯಲು ಬೆಂಗಳೂರಿನ ಶಂಕರಮಠದಲ್ಲಿ ತಂಗಿದ್ದ ಶ್ರೀಶ್ರೀಯವರನ್ನು ಕಾಣಲೆಂದು ಹೋದೆ.

ತೇಜೋಮಯ ಮುಖಮಂಡಲ, ಝಗಝಗಿಸುವ ಮೂರು ವಿಭೂತಿ ಪಟ್ಟೆಗಳು, ಏನೋ ವಿಶೇಷತೆಯಿಂದೊಡಗೂಡಿದ್ದ ಕನ್ನಡಕ, ಇವೆಲ್ಲವನ್ನು ಬಹಳ ಹತ್ತಿರದಿಂದ ನೋಡಿದಾಗ ನನಗೆ ಎಂಥದೋ ಅಪೂರ್ವ ಅನುಭವವುಂಟಾಯಿತು. ಪ್ರವರದೊಂದಿಗೆ ಸಾಷ್ಟಾಂಗ ಪ್ರಣಾಮಮಾಡಿದ ನನ್ನನ್ನು ಅವರು ಆಶೀರ್ವದಿಸಿ ಕುಶಲ ಸಮಾಚಾರಗಳನ್ನು ವಿಚಾರಿಸಿದರು. ನಾನೊಬ್ಬ ಹಿಂದಿ ಎಮ್.ಎ., ಪದವೀಧರನೆಂದು ತಿಳಿದೊಡನೆ ಅವರು ಇದುವರೆಗೂ (ನಮ್ಮ ಅಣ್ಣನವರ ಗುರುತಿನ ಮೇಲೆ) ತೆಲುಗಿನಲ್ಲಿ ಮಾತನಾಡುತ್ತಿದ್ದವರು ಹಿಂದಿಯಲ್ಲಿ ಮಾತನಾಡತೊಡಗಿದರು. ಹಿಂದಿಯ ಸಾಹಿತ್ಯ, ಭಾಷೆ ಇತ್ಯಾದಿಗಳ ಬಗ್ಗೆ ಕೆಲ ಕ್ಷಣಗಳೇ ಆದರೂ ರಸಪೂರ್ಣ ಚರ್ಚೆ ನಡೆದುದು ಈಗಲೂ ನನ್ನ ನೆನಪಿನಲ್ಲಿ ಅಚ್ಚಳಿಯದೆ ಉಳಿದಿದೆ.

ನಂತರ, ಅವರ ಜೀವನ ಚರಿತ್ರೆಯ ಹಿಂದಿ ಅನುವಾದದ ಬಗ್ಗೆ ಅವರು ಬಹಳ ಉತ್ಸಾಹದಿಂದ ಅನುಮತಿಯನ್ನು ನೀಡಿದರು. ಆದರೆ ಆ ಕೆಲಸವನ್ನು ಬೇರೆ ಯಾರೋ ಮಾಡಿ ನಾನು ಮಾಡದೇ ಹೋದುದಕ್ಕೆ ನನ್ನಿಂದ ಕರ್ತವ್ಯಲೋಪವಾಯಿತೇನೋ ಅನ್ನಿಸುತ್ತದೆ.

೦ ೦ ೦ ೦

ಶ್ರೀಶ್ರೀಗಳವರ ವರ್ಧಂತಿಯ ಪ್ರಯುಕ್ತ ಬೆಂಗಳೂರಿನ ಶ್ರೀ ಶಂಕರಮಠದಲ್ಲಿ ನಡೆದ ಧಾರ್ಮಿಕ ಹಾಗೂ ಸಾಹಿತ್ಯಕ ಕಾರ್ಯಕ್ರಮಗಳ ಬಗ್ಗೆ ಇಂಗ್ಲೀಷಿನ ಪ್ರಸಿದ್ಧ ದಿನಪತ್ರಿಕೆಯಾದ "ದಿ ಹಿಂದೂ"ವಿನ ಶುಕ್ರವಾರದ ನನ್ನ 'ಕಾಲಂ'ನಲ್ಲಿ ಬರೆದು ಅದರ ಪ್ರತಿಯನ್ನು ಅವರಿಗೆ ಸಮರ್ಪಿಸಿದಾಗ ಅವರಿಗಾದ ಆನಂದ ಅವರ್ಣನೀಯವಾಗಿತ್ತು. ಅತಿ ಹಸನ್ಮುಖರಾಗಿ ಅದನ್ನು ಓದಿ ಮಠದ ಬಗ್ಗೆ ಇದೇ ರೀತಿಯ ಬಾಂಧವ್ಯವನ್ನು ಮುಂದುವರಿಸಲು ತಿಳಿಸಿದರು.

೦ ೦ ೦ ೦

ಎರಡು ವರ್ಷಗಳ ಹಿಂದೆ ನಾನು ಶೃಂಗೇರಿಗೆ ಹೋಗಿದ್ದೆ. ಅಲ್ಲಿ ಶ್ರೀಶ್ರೀಗಳು ನನ್ನನ್ನು ಕಂಡೊಡನೆ ಹತ್ತಿರ ಕರೆದು ನಮ್ಮ ತಂದೆ–ತಾಯಿ, ಅಣ್ಣ ತಮ್ಮಂದಿರ ಹಾಗೂ ನನ್ನ ಕಾರ್ಯ ಚಟುವಟಿಕೆಗಳ ಬಗ್ಗೆ ವಿಚಾರಿಸಿ ಪ್ರಸಾದಾದಿಗಳನ್ನು ಇತ್ತರು. ಎರಡು ದಿನ ಅಲ್ಲಿ ಇರುವಂತೆಯೂ ಆದೇಶ ನೀಡಿದರು. ಇದು ಅವರ ಜ್ಞಾಪಕ

Sri Vidyabharathi Book Centre, Sringeri

CC-O. In Public Domain. Digitized by eGangotri

ಶಕ್ತಿ ಹಾಗೂ ಪ್ರೀತಿ ವಿಶ್ವಾಸಗಳನ್ನು ತೋರುತ್ತದೆ. ಅಷ್ಟೇ ಅಲ್ಲದೆ, ಕಿರಿಯ ಸ್ವಾಮಿಗಳಾದ ಶ್ರೀಶ್ರೀ ಭಾರತೀ ತೀರ್ಥಸ್ವಾಮಿಗಳವರ ದರ್ಶನ ಮಾಡಿ ನನ್ನ ಎಲ್ಲಾ ಕಾರ್ಯ ಚಟುವಟಿಕೆಗಳ ಬಗ್ಗೆ ಅವರಲ್ಲಿ ಅರಿಕೆಮಾಡಿ ಕೊಳ್ಳಲು ತಿಳಿಸಿದರು.

೦ ೦ ೦ ೦

ಕಳೆದ ಬಾರಿ ಶ್ರೀಶ್ರೀಗಳ ವರ್ಧಂತಿಯ ಮಹೋತ್ಸವವು ಶ್ರೀ ಶೃಂಗೇರಿಯಲ್ಲಿ ನಡೆಯಿತು. ತತ್ಸಂಬಂಧವಾಗಿ ಏರ್ಪಡಿಸಿದ ಸಾಹಿತ್ಯಗೋಷ್ಠಿಯಲ್ಲಿ "ಹಿಂದಿ ಸಾಹಿತ್ಯದಲ್ಲಿ ಅದ್ವೈತ" ಎಂಬ ವಿಷಯದ ಪ್ರತಿಪಾದನೆಯನ್ನು ಮಾಡುವ ಸದವಕಾಶ ನನಗೆ ಲಭಿಸಿತು ನನ್ನ ವಿಚಾರಗಳನ್ನು ತದೇಕಚಿತ್ತದಿಂದ ಆಲಿಸಿ, ನಂತರ ತಮ್ಮ ಮೆಚ್ಚುಗೆಯ ನುಡಿಗಳೊಂದಿಗೆ ಶಾಲು, ಮಂತ್ರಾಕ್ಷತೆಗಳೊಂದಿಗೆ ನನ್ನನ್ನು ಆಶೀರ್ವದಿಸಿದರು. ಅಂದೂ ಅಷ್ಟೆ, ಮಹಾಸ್ವಾಮಿಗಳು ಸ್ವಲ್ಪವೂ ಮರೆಯದೆ ನನ್ನ ಕಾರ್ಯ ಕಲಾಪಗಳ ಬಗ್ಗೆ ವಿಚಾರಿಸಿದರು. ಇದು ಅವರ ಸ್ಮರಣಶಕ್ತಿ ಹಾಗೂ ವತ್ಸಲತೆಯ ಸುಂದರ ನಿದರ್ಶನವಾಗಿದೆ.

ಹೀಗೆ ಮಹಿಮಾನ್ವಿತ, ಮಹಾನ್ ಜಗದ್ಗುರು ಶ್ರೀಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರ ಕೃಪಾಕಟಾಕ್ಷ ನನ್ನ ಮೇಲಿದ್ದು ಅವರ ಆಶೀರ್ವಾದದ ಶ್ರೀರಕ್ಷೆ ನನಗೆ ಎಂದೆಂದಿಗೂ ಇರಲಿ ಎಂದು ವಿನಮ್ರವಾಗಿ ಬೇಡಿಕೊಳ್ಳುತ್ತಾ ಈಗಿನ ಪೀಠಾಧಿಪತಿಗಳಾದ ಜಗದ್ಗುರು ಶ್ರೀ ಭಾರತೀ ತೀರ್ಥ ಸ್ವಾಮಿಗಳಲ್ಲಿ ಸಾಷ್ಟಾಂಗ ಪ್ರಣಾಮಗಳು.

Sri Vidyabharathi Book Centre, Sringeri

CC-O. In Public Domain. Digitized by eGangotri

ರಕ್ಷಾಶಕ್ತಿ

ಲೇಖಕರು : ತ.ರಾ.ಸು.

ನಾವು ದಿನ ನಿತ್ಯ ಬಳಸುವ ಹಲವಾರು ಮಾತುಗಳಲ್ಲಿ ಎಷ್ಟೋ ಮಾತುಗಳು ಅತಿ ಬಳಕೆಯಿಂದಾಗಿ, ತಪ್ಪು ಬಳಕೆಯಿಂದಾಗಿ, ಅರ್ಥವಿಲ್ಲದ ಬಳಕೆಯಿಂಬಾಗಿ, ಆ ಮಾತುಗಳು ತಮ್ಮ ಸಹಜ ಸತ್ವವನ್ನು, ಅರ್ಥಕಾಂತಿಯನ್ನು ಕಳೆದುಕೊಂಡು, ಬಹುವೇಳೆ ಕೇಳಿದವರ ಮನಸ್ಸಿನಲ್ಲಿ ವಿರೋಧಾಭಿಪ್ರಾಯವನ್ನೋ, ವ್ಯಂಗ್ಯ ಭಾವನೆಯನ್ನೋ ಮೂಡಿಸುತ್ತವೆ. ನಮ್ಮ ಭಾಷೆಯ ಧಾರ್ಮಿಕ ವಿಚಾರದಲ್ಲಿ ಬಳಸುವ ಹಲವು ಮಾತುಗಳಲ್ಲಿಯಂತೂ ಇದು ತೀರಾ ಸತ್ಯ. ಹಾಗೆಯೇ ತಮ್ಮ ಸಹಜ ತೇಜಸ್ಸನ್ನು ಕಳೆದುಕೊಂಡ ಶಬ್ದಗಳಲ್ಲಿ "ಜಗದ್ಗುರು" ಎನ್ನುವ ಮಾತೂ ಒಂದು.

ನಾನು ಹುಟ್ಟಿ ಬೆಳೆದದ್ದು ನಿಷ್ಠಾವಂತ. ಧಾರ್ಮಿಕ ಶ್ರದ್ಧೆಯ ವಾತಾವರಣದಲ್ಲಿ ಎಂತಲೇ ಚಿಕ್ಕಂದಿನಲ್ಲೇ ಕೆಲವರು ಜಗದ್ಗುರುಗಳನ್ನು ನೋಡಿದ್ದೆ. ಸಾಧು–ಸಂತರ ದರ್ಶನವಂತೂ ನಮ್ಮ ಮನೆಯಲ್ಲಿ ದಿನನಿತ್ಯದ ಮಾತಾಗಿತ್ತು. ಅಂಥ ಕೆಲವರ ಹತ್ತಿರದ ಪರಿಚಯವೂ ನನಗಾಗಿತ್ತು. ಆ ಪರಿಚಯದಿಂದ ನನ್ನಲ್ಲಿ ಆ ಜನರ ಬಗ್ಗೆ ಗೌರವ ಭಾವನೆ ಮೂಡುವುದು ಇರಲಿ, ತದ್ವಿರುದ್ಧವಾಗಿ ಅಂತಹವರ ಬಗ್ಗೆ ತಾತ್ಸಾರ ಭಾವನೆ ಮೂಡಿ ನಾನು ಬೆಳೆಬೆಳೆಯುತ್ತಾ ನನ್ನ ಬುದ್ಧಿ ಬೆಳೆದಂತೆ–ಇಂಥ ಜನ ನಮ್ಮ ವೈಯಕ್ತಿಕ ಪ್ರಗತಿಗೆ, ಸಾಮಾಜಿಕ ಪ್ರಗತಿಗೆ ಅಪಾಯಕಾರಿಗಳು, ಎನ್ನುವ ಭಾವನೆ ನನ್ನ ಮನದಲ್ಲಿ ಬೆಳೆಯಲಾರಂಭಿಸಿತ್ತು. ಸಾಹಿತಿಯಾಗಿ ಕೆಲವು "ಜಗದ್ಗುರು"ಗಳ ನಿಕಟ ಪರಿಚಯವಾದ ಮೇಲಂತೂ ಇಂಥ ಜನದಿಂದ ಎಷ್ಟು ದೂರವಿದ್ದರೆ ಅಷ್ಟು ಲೇಸು ಎನ್ನುವ ಭಾವನೆ ಮತ್ತಷ್ಟು ಬಲಗೊಂಡಿತ್ತು. ಹಾಗಾಗಿ ಅಂಥವರ ಪರಿಚಯವಾಗುವ ಅವಕಾಶ ಬಂದಾಗಲೂ ಆದಷ್ಟು ದೂರವಿರುತ್ತಿದ್ದೆ. ಅಷ್ಟೇ ಅಲ್ಲ ಅವರ ಬಗ್ಗೆ ತಾತ್ಸರದ ಮಾತಾಡಲು ಎಳ್ಳಷ್ಟೂ ನನಗೆ ಸಂಕೋಚವೆನಿಸುತ್ತಿರಲಿಲ್ಲ. ಅನಿವಾರ್ಯವಾಗಿ ಅಂಥವರ ಪರಿಚಯವಾದಾಗಲೂ ಹೊರಗೆ ಅವರನ್ನು ಕಂಡಿದ್ದೇನೆಯೇ ಹೊರತು, ಅವರ ಪರಿಚಯನ್ನು ಬೆಳೆಸಿಕೊಳ್ಳಬೇಕು, ಅವರನ್ನು ಮನೆಗೆ ಕರೆಯಬೇಕು ಎಂಬ ಭಾವನೆ ನನಗೆ ಎಂದೂ ಬಂದಿರಲಿಲ್ಲ. ನನ್ನ ಈ ವರ್ತನೆಯಿಂದಾಗಿ ಬಹಳ ಜನ ನನ್ನನ್ನು ನಾಸ್ತಿಕ ಎಂದೇ ಕರೆದಿದ್ದರು. ಆ ಬಗ್ಗೆ ನನಗೆ ಅಸಮಾಧಾನವೂ ಇರಲಿಲ್ಲ. ಅಷ್ಟೇಕೆ, ಎಷ್ಟೋ ವೇಳೆ "ಜಗದ್ಗುರು"ಗಳು ಎಂದು ಎಷ್ಟೋ ಜನರಿಂದ ಕರೆಸಿಕೊಂಡು, ನನ್ನಿಂದಲೂ ಆ ಮನ್ನಣೆಯನ್ನು ಬಯಸಿದ ಒಬ್ಬಿಬ್ಬರನ್ನು ಬುದ್ಧಿ ಪೂರ್ವಕವಾಗಿಯೇ ಮುಖಭಂಗ ಮಾಡಿದ್ದೇನೆ.

ನನ್ನಲ್ಲಿ ಬೆಳೆದು ಬಂದ ಈ ಭಾವನೆ ತಪ್ಪು ಎಂದು ಮನವರಿಕೆಯಾಗಿ ಯಾರ ಬಲವಂತವೂ, ಯಾವ ಪ್ರಚೋದನೆಯೂ, ಯಾವುದೇ ಬಗೆಯ ಪ್ರಲೋಭನೆಯೂ ಇಲ್ಲದೆ ನಾನಾಗಿಯೇ ಮನಃಪೂರ್ವಕವಾಗಿ ದೀರ್ಘದಂಡ ಪ್ರಣಾಮಮಾಡಿ "ಧನ್ಯನಾದೆ" ಎಂಬ ಭಾವನೆಯನ್ನು ಮೂಡಿಸಿದವರು ಶೃಂಗೇರಿಯ ಶ್ರೀ ಶಾರದಾಪೀಠದ ಜಗದ್ಗುರುಗಳಾದ ಶ್ರೀ ಶ್ರೀ ಶ್ರೀಮದಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರು.

ಶ್ರೀ ಶ್ರೀಗಳವರನ್ನು ಮೊದಲಬಾರಿಗೆ ನಾನು ದರ್ಶನ ಮಾಡಿದ್ದೇ ನನ್ನ ಜೀವನದಲ್ಲಿ ಒಂದು ಮರೆಯಲಾಗದ ದಿನ ನನ್ನ ಬಾಳಿನ ಪ್ರವಾಹಕ್ಕೆ ಹೊಸ ಮುಖವನ್ನು ತೋರಿದ ದಿನ ನಿಜವಾಗಿಯೂ ನನ್ನ ಬಾಳಿನಲ್ಲಿ ಅದೊಂದು ಪವಾಡವೆಂದೇ ಹೇಳಬೇಕು.

Sri Vidyabharathi Book Centre, Sringeri

CC-O. In Public Domain. Digitized by eGangotri

ಜಗದ್ಗುರುಗಳು, ಮಠಾಧಿಪತಿಗಳ ಬಗ್ಗೆ ನನ್ನ ಅಭಿಪ್ರಾಯ ಹೇಗಿತ್ತೆಂಬುದನ್ನು ಮುಂಚೆಯೇ ಹೇಳಿದ್ದೇನೆ. ಜಗದ್ಗುರುಗಳ ಬಗ್ಗೆ ಆ ಭಾವನೆ ಇದ್ದರೂ ಶೃಂಗೇರಿಯ ಶ್ರೀ ಶಾರದಾಂಬಾ ನನ್ನ ಜೀವನದಲ್ಲಿ ಮೊದಲಿನಿಂದಲೂ ಆರಾಧ್ಯ ದೇವತೆ ಶಿವಮೊಗ್ಗ, ತೀರ್ಥಹಳ್ಳಿ, ಚಿಕ್ಕಮಗಳೂರಿನ ಕಡೆಗೆ ಏನೇ ಕೆಲಸದ ಮೇಲೆ ಹೋದರೂ ಶೃಂಗೇರಿಗೆ ಹೋಗಿ ತಾಯಿಯ ದರ್ಶನ ಮಾಡದೆ ಬರುತ್ತಿರಲಿಲ್ಲ. ಅಷ್ಟೇಕೆ, ಅತ್ತ ಕಡೆಯ ಜನ ಯಾರಾದರೂ ನನ್ನನ್ನು ಭಾಷಣಕ್ಕೆ ಕರೆದಾಗ ನನ್ನನ್ನು ಶೃಂಗೇರಿಗೆ ಕರೆದುಕೊಂಡು ಹೋಗಬೇಕೆಂಬುದನ್ನು ಕರಾರು ಮಾಡಿಕೊಂಡೇ ಅವರ ಆಹ್ವಾನವನ್ನು ಅಂಗೀಕರಿಸುತ್ತಿದ್ದೆ. ಹಾಗೆಯೇ ಹತ್ತಾರು ಬಾರಿ ಶೃಂಗೇರಿಗೆ ಹೋಗಿ ಶ್ರೀ ಶಾರದಾದೇವಿಯ ದರ್ಶನ, ಆರಾಧನೆಯನ್ನು ಮಾಡಿ ತೃಪ್ತನಾಗಿದ್ದರೂ ಎಂದೂ ನನಗೆ ದೇವಾಲಯದ ಬಳಿಯ ಹೊಳೆಯನ್ನು ದಾಟಿ ಆಚೆಯ ಬದಿಯ 'ನರಸಿಂಹವನ'ಕ್ಕೆ ಹೋಗಿ ಅಲ್ಲಿದ್ದ ಗುರುಗಳನ್ನು ದರ್ಶನ ಮಾಡಬೇಕು—ಎಂಬ ಅಪೇಕ್ಷೆ ಮೂಡಿರಲಿಲ್ಲ.

ಒಂದೆರಡು ಬಾರಿ ನನ್ನ ಮಿತ್ರರು—ಗುರುಗಳ ದರ್ಶನಕ್ಕೆ ಹೋಗೋಣವೇ ?' ಎಂದು ಕೇಳಿದಾಗಲೂ ದೇವಿಯ ದರ್ಶನವಾಯಿತಲ್ಲ ಅದಕ್ಕಿಂತ ಹೆಚ್ಚಿನ ಭಾಗ್ಯ ಬೇರಾವುದೂ ನನಗೆ ಬೇಕಿಲ್ಲ—ಎಂದು ಹೇಳಿ ಜಾರಿಕೊಂಡಿದ್ದೆ.

ಒಮ್ಮೆ ನಾನು ಹೀಗೆ ಮಾಡಿದುದನ್ನು ನನ್ನಿಂದಲೇ ಕೇಳಿದ ನನ್ನ ಸಾಹಿತ್ಯ ಜೀವನದ ಬೆನ್ನೆಲುಬಾದ ದಿವಂಗತ ಅ.ನ.ಕೃ.ರವರು—ಅವರು ನನ್ನ ವರ್ಗಕ್ಕೇ ಸೇರಿದ 'ನಾಸ್ತಿಕ'ರೇ ಆದರೂ "ಸುಬ್ಬು, ಶೃಂಗೇರಿಗೆ ಹೋದ ನೀನು ಶ್ರೀ ಶ್ರೀ ಚಂದ್ರಶೇಖರಭಾರತೀ ಮಹಾಸ್ವಾಮಿಗಳವರನ್ನು ದರ್ಶನಮಾಡದೆ ಬಂದದ್ದು ತುಂಬಾ ಅನ್ಯಾಯ. ಒಂದು ರೀತಿಯಲ್ಲಿ ನೀನು ನತದೃಷ್ಟ. ಜೀವಂತದೇವರನ್ನು ಕಣ್ಣಾರೆ ನೋಡುವ ಅವಕಾಶವನ್ನು ಕಳೆದುಕೊಂಡೆ. ಮತ್ತೊಮ್ಮೆ ಹಾಗೆ ಮಾಡಬೇಡ"-ಎಂದು ಹೇಳಿದ್ದರು.

"ಆಯಿತು, ಮತ್ತೊಮ್ಮೆ ಶೃಂಗೇರಿಗೆ ಹೋಗುವ ಅವಕಾಶ ದೊರೆತರೆ ಶ್ರೀ ಶ್ರೀಗಳ ದರ್ಶನ ಮಾಡುತ್ತೇನೆ" ಎಂದಷ್ಟೇ ಹೇಳಿದೆ.

ಅ.ನ.ಕೃ. ಅವರೇ ಹಾಗೆ ಹೇಳಿದಾಗ ಶ್ರೀ ಶ್ರೀ ಚಂದ್ರಶೇಖರಭಾರತಿಗಳವರನ್ನು ನೋಡಬೇಕು ಎನ್ನುವ ಭಾವನೆಯೂ ನನ್ನಲ್ಲಿ ಮೂಡಿತ್ತು. ಸಾಹಿತ್ಯದಲ್ಲಿ ಜೀವನದಲ್ಲಿ ಎರಡರಲ್ಲೂ ನನಗೆ ಹಿರಿಯರಾದ ದಿವಂಗತ ದೇವುಡು ನರಸಿಂಹಶಾಸ್ತ್ರಿಗಳೂ ಆ ಬಯಕೆಗೆ ಮತ್ತಷ್ಟು ಹುರುಪನ್ನು ತಂದುಕೊಟ್ಟಿದ್ದರು.

ಆದರೆ ಆ ಪರಮ ಪೂಜ್ಯರನ್ನು ಕಣ್ಣಾರೆ ನೋಡುವ ಭಾಗ್ಯ ನನಗೆ ಒದಗಿ ಬರಲಿಲ್ಲ. ಆ ಬಳಿಕ ಅಲ್ಲಿಯ ಜಗದ್ಗುರುಗಳನ್ನು ನೋಡಬೇಕು ಎನ್ನುವ ಬಯಕೆಯೂ ಇಂಗಿಹೋಯಿತು.

"ಯಾವುದಕ್ಕೂ ಕರ್ಮ ಪಕ್ವವಾಗಬೇಕು, ಕಾಲ ಕೂಡಿಬರಬೇಕು" ಎನ್ನುವ ಮಾತು ಸುಳ್ಳಲ್ಲ. ನನಗೆ ಎಳ್ಳಷ್ಟು ಇಚ್ಛೆ ಇಲ್ಲದಿದ್ದರೂ ನಾನಾಗಿಯೇ ಬಯಸಿ ಶೃಂಗೇರಿಗೆ ಹೋಗಿ ಶ್ರೀ ಶ್ರೀಗಳವರನ್ನು ದರ್ಶನಮಾಡಿ ಪುನೀತನಾಗುವ ಕಾಲ ತಾನಾಗಿಯೇ ಕೆಲವು ವರ್ಷಗಳ ಹಿಂದೆ ಒಂದು ದಿನ ನನ್ನ ಬಾಳಿನಲ್ಲಿ ಕೂಡಿಬಂತು.

ಆದಾದದ್ದು ಹೀಗೆ ಆಗ—ನನ್ನ ಜೀವನದಲ್ಲಿ ಕತ್ತಲಿನ ಕಾಲ. ನನ್ನ ಜೀವನದಲ್ಲಿ ನಾನು ಬೆಳೆಸಿಕೊಂಡ ಕೆಲವು ದುರಭ್ಯಾಸಗಳ ಫಲವಾಗಿ ನನ್ನ ಆರೋಗ್ಯ ತುಂಬಾ ಕೆಟ್ಟು ಹೋಗಿತ್ತು. ಆರ್ಥಿಕ ಪರಿಸ್ಥಿತಿಯೂ ಹದಗೆಟ್ಟಿತ್ತು ನಾನು ಮುಂದೆ ಹೆಚ್ಚು ದಿನ ಬದುಕುತ್ತೇನೆ ಎನ್ನುವ ನಂಬಿಕೆಯೇ ನನಗಿರಲಿಲ್ಲ. ಆ ಪರಿಸ್ಥಿತಿಯಲ್ಲಿ ಒಂದು ದಿನ ಮಲಗಿದ್ದಾಗ ಒಂದು ಸ್ವಪ್ನವಾಯಿತು.

ಸ್ವಪ್ನದಲ್ಲಿ ಶೃಂಗೇರಿಯ ಶ್ರೀ ಶ್ರೀಗಳವರ ಪ್ರತಿನಿಧಿಗಳೊಬ್ಬರು ನಮ್ಮ ಮನೆಗೆ ಬಂದು ಶ್ರೀ ಶಾರದಾ ದೇವಿಯ ಪ್ರಸಾದ ಶ್ರೀ ಶ್ರೀಗಳವರ ಆಶೀರ್ವಾದಾಕ್ಷತೆಯನ್ನು ನನಗೆ ಕೊಟ್ಟು "ಇಷ್ಟೇಕೆ ಚಿಂತೆಮಾಡುತ್ತೀಯಾ ? ನಿನ್ನಿಂದ ದೊಡ್ಡ ಕೆಲಸವೊಂದು ಆಗಬೇಕಾದದ್ದಿದೆ. ಆದ್ದರಿಂದ ನಿನ್ನ ಆಯುಸ್ಸಿನ ಬಗೆಯಾಗಲಿ, ಆರೋಗ್ಯದ ಬಗ್ಗೆಯಾಗಲಿ ಚಿಂತೆ ಮಾಡುವುದು ಬೇಡ ಎಂದು ಹೇಳಿ ಶ್ರೀಗಳವರು ನನಗೆ ತಿಳಿಸಲು ನನ್ನನ್ನಿಲ್ಲಿಗೆ ಕಳಿಸಿದ್ದಾರೆ, ಈ ಪ್ರಸಾದವನ್ನು ತೆಗೆದುಕೋ ಎಂದು ಹೇಳಿ ನನ್ನ ಕೈಗೆ ಹೂವು, ಹಣ್ಣು. ಕುಂಕುಮ ಮಂತ್ರಾಕ್ಷತೆಗಳಿದ್ದ ತಟ್ಟೆಯನ್ನು ಕೊಟ್ಟರು.

Sri Vidyabharathi Book Centre, Sringeri

CC-O. In Public Domain. Digitized by eGangotri

ನನ್ನ ಕೈಗೆ ಆ ಫಲಮಂತ್ರಾಕ್ಷತೆಯು ತಟ್ಟಿ ಸೋಕುತ್ತಿದ್ದ ಹಾಗೆ ನನ್ನ ಮೈಯಲ್ಲಿ ಮಿಂಚು ಸಂಚರಿಸಿದಂತಾಗಿ ತಟಕ್ಕನೆ ಎಚ್ಚರವಾಯಿತು. ಕಣ್ಣುಬಿಟ್ಟು ನೋಡಿದೆ– ಒಳ್ಳೇ ಬ್ರಾಹ್ಮೀ ಮುಹೂರ್ತದ ಸಮಯ ಎಚ್ಚರವಾದಾಗಲೂ ನನ್ನ ಮೈ ಇನ್ನೂ ಸ್ವಪ್ನಾನುಭವದ ವಿದ್ಯುತ್ಪರಿಣಾಮದಿಂದ ಪುಳಕಗೊಂಡಿತ್ತು. ಆ ಅನುಭವದ ತೀವ್ರತೆ ಕೊಂಚವೂ ತಗ್ಗಿರಲಿಲ್ಲ. "ಹೀಗೇಕೆ" ಸ್ವಪ್ನವಾಯಿತು ? ಶೃಂಗೇರಿಯ ಬಗ್ಗೆ ಎಂದೂ ಯೋಚಿಸದ ನನಗೆ ಇಂಥ ಸ್ವಪ್ನವೇಕೆ ಬಿತ್ತು" ಎಂದು ಯೋಚಿಸುತ್ತಲೇ ನನ್ನ ಹತ್ತಿರದಲ್ಲೇ ನಿದ್ರಿಸುತ್ತಿದ್ದ ನನ್ನ ಮಡದಿಯನ್ನು ಎಬ್ಬಿಸಿ ಆಕೆಗೆ ನನಗಾದ ಸದ್ವಾನುಭವವನ್ನು ಹೇಳಿದೆ. ನನ್ನಷ್ಟೇ ಅವಳಿಗೂ ಆಶ್ಚರ್ಯವಾಯಿತು.

ಧರ್ಮ ದೇವರುಗಳ ವಿಷಯದಲ್ಲಿ ನನ್ನಾಕೆ ನನಗಿಂತ ಹೆಚ್ಚಿನ ಶ್ರದ್ಧೆ ಇರುವವಳು. ಎಂತಲೇ ಎಷ್ಟಾದರೂ ಒಳ್ಳೆಯ ಕನಸು ನಮ್ಮ ಕಷ್ಟ ತೀರುವ ಕಾಲ ಹತ್ತಿರ ಬಂದಿದೆ ಎಂದು ಕಾಣಿಸುತ್ತಿದೆ" ಎಂದು ಹೇಳಿ ಕೈಕಾಲು ತೊಳೆದು ದೇವರ ಮುಂದೆ ದೀಪ ಹಚ್ಚಿಟ್ಟು ನಮಸ್ಕಾರ ಮಾಡಿ, ನನಗೂ ನಮಸ್ಕಾರ ಮಾಡ ಹೇಳಿದಳು ನಾನು ಕೈಕಾಲು ತೊಳೆದು ನಮಸ್ಕಾರ ಮಾಡಿ ಬಂದೆ.

ಎಷ್ಟೋ ಕನಸುಗಳ ಹಾಗೆ ಆ ದಿನದ ಕನಸು ನನ್ನ ಮನದಿಂದ ಮರೆಯಾಗಲಿಲ್ಲ. ದಿನವೂ ಏನೋ ಒಂದು ಬಗೆಯ ಕಾತರ ನನ್ನನ್ನು ಕರೆಯುತ್ತಿತ್ತು. ಶೃಂಗೇರಿ ನನ್ನ ಹೃದಯವನ್ನು ತನ್ನತ ಸೆಳೆಯುತ್ತಿತ್ತು. ಒಮ್ಮೆಹೋಗಿ ಬರೋಣ ಎಂದು ಅನಿಸಿದರೂ ಶ್ರಮ ಸಾಧ್ಯವಾದ ಆ ಪ್ರಯಾಣವನ್ನು ಮಾಡುವಷ್ಟು ಆರೋಗ್ಯವೂ ನನಗಿರಲಿಲ್ಲ. ಕಾರಿನಲ್ಲಿ ಹೋಗಿ ಬರುವಷ್ಟು ಆರ್ಥಿಕ ಚೈತನ್ಯವೂ ನನಗೆ ಇರಲಿಲ್ಲ.

ಹಾಗಾಗಿ ನನ್ನ ಶೃಂಗೇರಿಯ ಕನಸು—ಕನಸಾಗಿಯೇ ಉಳಿದು ಹೋಗುತ್ತದೆಯೇನೋ ಎಂಬ ಚಿಂತೆ ನನ್ನನ್ನು ಕಾಡುತ್ತಿತ್ತು.

ಆ ಹೊತ್ತಿನಲ್ಲಿ ಅತ್ಯಂತ ಅನಿರೀಕ್ಷಿತವಾಗಿ ಶೃಂಗೇರಿಯ ಕಾಲೇಜಿನಿಂದ ನನಗೊಂದು ಆಹ್ವಾನ ಬಂತು. ಆ ಆಹ್ವಾನವನ್ನು ತಂದ ಮಿತ್ರರು ನನ್ನ ಆರೋಗ್ಯ ಸ್ಥಿತಿಯನ್ನು ಗಮನಿಸಿ ನಾವೇ ಹೋಗಿ ಬರಲು ಶಿವಮೊಗ್ಗವರೆಗೆ ಪ್ರಥಮ ದರ್ಜೆ ರೈಲು ಪ್ರಯಾಣ ಮುಂದಕ್ಕೆ ಕಾರಿನ ಅನುಕೂಲ ಎಲ್ಲವನ್ನೂ ಒದಗಿಸಿ "ನಿಮ್ಮ ಮನೆಯವರನ್ನು ಕರೆದುಕೊಂಡು ಬನ್ನಿ" ಎಂದು ಹೇಳಿದರು.

ಅವರು ಅಷ್ಟು ಹೇಳಿದ ಬಳಿಕ ಮರು ಮಾತಾಡನೆ ಶೃಂಗೇರಿಗೆ ಹೋಗಲು ಒಪ್ಪಿಕೊಂಡೆ. ಅಷ್ಟೇ ಅಲ್ಲ ಶೃಂಗೇರಿಗೆ ಹೋದಾಗ ಶ್ರೀ ಶ್ರೀಗಳ ದರ್ಶನವನ್ನೂ ಮಾಡಬೇಕು ಎಂದು ಮನಸ್ಸಿನಲ್ಲೆ ಸಂಕಲ್ಪಮಾಡಿಕೊಂಡೆ.

ಶಿವಮೊಗ್ಗಕ್ಕೆ ತಲುಪಿದ ಬಳಿಕ ಶೃಂಗೇರಿಯಲ್ಲಿ ಶ್ರೀ ಶ್ರೀಗಳವರ ಬಳಿಗೆ ನನ್ನನ್ನು ಕರೆದೊಯ್ದು ಪರಿಚಯಮಾಡಿಸಿಕೊಡಲು ಬೇಕಾದವರೊಬ್ಬರ ಮೂಲಕ ವ್ಯವಸ್ಥೆಯನ್ನೂ ಮಾಡಿಕೊಂಡೇ ಶೃಂಗೇರಿಗೆ ಹೋದೆ.

ಶೃಂಗೇರಿಯನ್ನು ಸೇರಿದ ಮರುದಿನ ನನ್ನ ಮಿತ್ರರೊಂದಿಗೆ ಗುರುಗಳ ದರ್ಶನಕ್ಕೆ ಪೂರ್ವಭಾವಿಯಾಗಿ ಶ್ರೀಶಾರದಾದೇವಿಯ ಅರ್ಚನೆ ಮಾಡಿಸಲೆಂದು ದೇವಸ್ಥಾನಕ್ಕೆ ಹೋದೆವು. ಅರ್ಚನೆಗೆ ಚೀಟಿ ಬರೆಸಿದಾಗ ಅದನ್ನು ಬರೆದವರು "ಈ ದಿನ ಶಾರದಮ್ಮನವರ ವರ್ಧಂತಿ. ಗುರುಗಳೇ ಇಲ್ಲಿಗೆ ದಯಮಾಡಿಸಿರುತ್ತಾರೆ. ಆದ್ದರಿಂದ ಈಗಲೇ ಅರ್ಚನೆ ಮಾಡಿಸಬೇಕು ಎಂದರೆ ಅವಸರವಾಗುತ್ತದೆ. ಆಮೇಲೆ ಮಾಡಿಸಿದರೆ ಆಗದೆ ?" ಎಂದು ಕೇಳಿದರು. 'ಹಾಗೆಯೇ ಮಾಡಿ' ಎಂದು ಹೇಳಿ ನಾನು ಅಮ್ಮನವರಿಗೆ ನಮಸ್ಕಾರ ಮಾಡಿ, ಪಕ್ಕದ ವಿದ್ಯಾಶಂಕರ ದೇವಸ್ಥಾನವನ್ನು ನೋಡಿ ಬರಲು ಹೊರಟೆ.

ನಾನು ವಿದ್ಯಾಶಂಕರ ದೇವಾಲಯದ ಹಿಂಭಾಗಕ್ಕೆ ಬರುತ್ತಿದ್ದ ಹಾಗೆ ಅಲ್ಲಿ ನೆರೆದಿದ್ದ ಜನಸಮೂಹ "ಗುರುಗಳು ಬಂದರು, ಗುರುಗಳು ಬಂದರು" ಹೇಳಿ ಅವರನ್ನು ಎದುರುಗೊಳ್ಳಲು ಸಿದ್ಧರಾದರು.

ನಾನು, ನನ್ನ ಮಡದಿ, ಮಿತ್ರರೊಂದಿಗೆ ಸ್ವಲ್ಪ ಹಿಂದೆ ಸರಿದು ನಿಂತೆ. ಎರಡೇ ನಿಮಿಷಗಳಲ್ಲಿ ಶ್ರೀ ಶ್ರೀಗಳವರು ಅತ್ತ ದಯಮಾಡಿಸಿದರು. ಇಬ್ಬದಿಯಲ್ಲೂ

Sri Vidyabharathi Book Centre, Sringeri

CC-O. In Public Domain. Digitized by eGangotri

ನಿಂತಿದ್ದ ಜನ ಅವರಿಗೆ ಪ್ರಣಾಮಮಾಡಿದರು. ನಾನೂ ಅಷ್ಟು ದೂರದಿಂದಲೇ ಪ್ರಣಾಮಮಾಡಿ ನಿಂತುಕೊಂಡೆ ದೇವಾಲಯದ ಕಡೆಗೆ ಹೋಗುತ್ತಿದ್ದ ಶ್ರೀ ಶ್ರೀಗಳವರು ನಮ್ಮ ಮುಂದೆ ಹಾದು ಹೋಗುವಾಗ, ತಟಕ್ಕನೆ ನಿಂತು ನಮ್ಮತ್ತ ತಿರುಗಿನೋಡಿ, ತಮಗೆ ಪರಿಯವಿದ್ದ ನನ್ನ ಮಿತ್ರರನ್ನು ಹತ್ತಿರ ಕರೆದು "ನಿಮ್ಮ ಜೊತೆಯಲ್ಲಿ ಇರುವವರು ಯಾರು ?" ಎಂದು ಕೇಳಿದರು.

ಮಿತ್ರರು ಶ್ರೀ ಶ್ರೀಗಳವರಿಗೆ ನನ್ನ ಹೆಸರಿನ ಪರಿಚಯ ಮಾಡಿಕೊಟ್ಟರು. ನನ್ನ ಹೆಸರನ್ನು ಕೇಳುತ್ತಿದ್ದ ಹಾಗೇ ಶ್ರೀ ಶ್ರೀಗಳವರ ಮುಖದ ಮೇಲೆ ಮೃದು ಮಂದಹಾಸ ಮೂಡಿ "ನೀವು ಕಾದಂಬರಿ ಬರೆಯುವವರಲ್ಲವೇ ? ನಿಮ್ಮನ್ನು ನೋಡಬೇಕು ಎಂದು ನಮಗೂ ಅನಿಸಿತ್ತು. ತುಂಬಾ ಒಳ್ಳೆಯದಾಯಿತು. ನಾಳೆ ಪ್ರಾತಃಕಾಲ ಹನ್ನೊಂದು ಗಂಟೆ ವೇಳೆಗೆ ಬನ್ನಿ. ನಿಧಾನವಾಗಿ ಮಾತಾಡೋಣ" ಎಂದು ಹೇಳಿ ಪ್ರಣಾಮ ಮಾಡಿದ ನನಗೆ ಆಶೀರ್ವಾದ ಮಾಡಿ ಮುಂದೆ ತೆರಳಿದರು.

ಆ ಗಳಿಗೆಯಲ್ಲಿ ಅವರಾಡಿದ ಮಾತನ್ನು ಕೇಳಿ ನನಗೆ ಮಿಂಚು ಮುಟ್ಟಿದಂತಾಯಿತು. ಗುರುಗಳ ಮಾತನ್ನು ಕೇಳಿದ ನನ್ನ ಮಿತ್ರರು ನೋಡಿ, ಗುರುಗಳೇ ನಿಮ್ಮನ್ನು ಇಲ್ಲಿಗೆ ಕರೆಸಿಕೊಂಡಿದ್ದಾರೆ ಎಂದು ಕಾಣುತ್ತದೆ. ಇನ್ನು ನಾನು ಅವರಿಗೆ ನಿಮ್ಮ ಪರಿಚಯ ಮಾಡಿಕೊಡುವ ಅಗತ್ಯವೇ ಉಳಿಯಲಿಲ್ಲ ಎಂದರು.

ನನಗೂ ಹಾಗೇ ಅನಿಸಿತು. ಅವರ "ಸಂಕಲ್ಪವೇ ನನ್ನನ್ನು ಶೃಂಗೇರಿಗೆ ಕರೆತಂದಿರಬೇಕು" ಎಂದು ಹಾಗೆನಿಸಿದಾಗ ನನ್ನ ಮೈ-ಮನಸ್ಸಿಗೆ ಪುಣ್ಯತೀರ್ಥದಲ್ಲಿ ಮಿಂದ ಭಾವನೆ ಮೂಡಿತು. ಆ ಭಾವನೆಯಲ್ಲೇ ಮಾರುದಿನ ಹೇಳಿದ ಹೊತ್ತಿಗೆ ಸರಿಯಾಗಿ ಶ್ರೀ ಶ್ರೀಗಳವರ ದರ್ಶನಕ್ಕೆ ಹೋದೆ. ಆಶೀರ್ವಾದ, ಕುಶಲಪ್ರಶ್ನೆಗಳಾದ ಬಳಿಕ ನನ್ನ ಬರವಣಿಗೆಯ ಬಗ್ಗೆ ಮಾತನಾಡುತಾ ಗುರುಗಳು "ನಿಮ್ಮ ಒಂದೆರಡು ಕಾದಂಬರಿ ಓದಿದ್ದೇವೆ. ನಿಮ್ಮದು ಬಹಳ ಒಳ್ಳೆಯ ಶೈಲಿ. ನಿಮ್ಮಿಂದ ಶ್ರೀಮದಾಚಾರ್ಯರ ಬಗ್ಗೆ ಒಂದು ಕಾದಂಬರಿ ಬರೆಸಬೇಕು ಎಂದು ಬಹಳ ದಿವಸಗಳಿಂದ ನಮ್ಮ ಮನಸ್ಸಿನಲ್ಲೇ ಬಯಕೆಯಿತ್ತು" ಎಂದರು.

ಅವರ ಬಾಯಿಂದ ಬಂದ ಆ ಮಾತನ್ನು ಕೇಳಿ ನನಗೆ ವಿದ್ಯುತ್‌ಸ್ಪರ್ಶವಾದಂತಾಯಿತು ಆ ಕೂಡಲೇ ನಾನು ಅವರಿಗೆ ನನಗಾದ ಸ್ವಪ್ನಾನುಭವದ ವಿಷಯವನ್ನು ಹೇಳಿದೆ. ಶ್ರೀ ಶ್ರೀಗಳವರು ಅವರಿಗೆ ವಿಶಿಷ್ಟವಾದ ಮೋಹಕವಾದ ರೀತಿಯಲ್ಲಿ ಗಟ್ಟಿಯಾಗಿ ನಕ್ಕು "ಆಯಿತು ನಾವು ಹೇಳಬೇಕು ಎಂದುಕೊಂಡಿದ್ದನ್ನು ನಮ್ಮ ಗುರುಗಳೇ ಹೇಳಿದ್ದಾರೆ ಕೆಲಸ ನಡೆಯಲಿ" ಎಂದು ಆಶೀರ್ವಾದ ಮಾಡಿದರು. ನನ್ನ ಆರೋಗ್ಯದ ಬಗ್ಗೆ ಅಭಯವನ್ನು ನೀಡಿದರು.

ಆ ದಿನವೇ ಪರಿಚಯವಾದ ನನ್ನೊಂದಿಗೆ ಮನ ಬಿಚ್ಚಿ ಮಾತಾಡಿದರು. ಆ ಮಾತಿನಲ್ಲಿ ಹೊತ್ತು ಹೋದದ್ದೇ ತಿಳಿಯಲಿಲ್ಲ. ಅವರ ಆಪ್ತ ಕಾರ್ಯದರ್ಶಿಗಳು ಬಂದು 'ಮಾಧ್ಯಾಹ್ನಿಕದ ವೇಳೆ ಮೀರುತ್ತಿದೆ' ಎಂದು ಶ್ರೀ ಶ್ರೀಗಳವರಲ್ಲಿ ವಿನಂತಿ ಮಾಡಿಕೊಂಡಾಗಲೇ ಹೊತ್ತಿನ ಅರಿವು ನಮಗಾದದ್ದು.

ವೇಳೆಯಾದರೂ ಗುರುಗಳು ತಾವೇ ನನಗೆ ನರಸಿಂಹ ವನದ ಕೋಣೆಯನ್ನು ತೋರಿಸಿ ಅದರ ವಿಶಿಷ್ಟತೆಯನ್ನು ವಿವರಿಸಿ ಬರುವಾಗ ನಮ್ಮಿಬ್ಬರನ್ನೂ ಆಶೀರ್ವದಿಸಿ ಅನುಗ್ರಹಿಸಿದರು.

ಶ್ರೀ ಶ್ರೀಗಳವರಿಂದ ಅಪ್ಪಣೆ ಪಡೆದು ಹೊರಗೆ ಬಂದೆ. ಹೊರಗೆ ಬಂದರೂ ನನಗೆ ಬೇರಾವುದೋ ಲೋಕದಲ್ಲಿ ಇದ್ದವನಂತಿದ್ದೆ. ಅಷ್ಟು ದಿನ ಕೇವಲ ಕ್ಷೇತ್ರವಾಗಿದ್ದ ಶೃಂಗೇರಿ ಅಂದಿನಿಂದ ನನ್ನ ಪಾಲಿಗೆ ತಾಯಿ ಮನೆಯಾಯಿತು.

ಶ್ರೀ ಶ್ರೀಗಳವರಿಂದ ಆಶೀರ್ವಾದ ಪಡೆದುಬಂದ ಬಳಿಕ ನನ್ನ ಆರೋಗ್ಯವೂ ಸುಧಾರಿಸಿತು. ಆರ್ಥಿಕ ಪರಿಸ್ಥಿತಿಯೂ ಉತ್ತಮಗೊಂಡಿತು. ಅಂದಿನಿಂದ ನಾನು ಬರೆಯುವ ಮೇಜಿನ ಮೇಲೆ, ಧ್ಯಾನಮಾಡುವ ಪೂಜಾ ಮಂದಿರದಲ್ಲಿರುವ ಶ್ರೀ ಶ್ರೀಗಳವರ ಭಾವಚಿತ್ರ ನನ್ನ ಆರಾಧ್ಯ ದೇವತೆಯಾಗಿ ಸದಾ ಕಾಲವೂ ನನ್ನನ್ನು ಕಾಪಾಡುತ್ತಿದೆ.

ಅಂದಿನಿಂದ ಇಂದಿನವರೆಗೆ ನನಗೆ ಕಷ್ಟಗಳು ಬರುವ ಸಮಯದಲ್ಲಿ ಗುರುಗಳು ಸ್ವಪ್ನದಲ್ಲಿ ಕಾಣಿಸಿಕೊಂಡು

Sri Vidyabharathi Book Centre, Sringeri

CC-O. In Public Domain. Digitized by eGangotri

ಎಚ್ಚರಿಸಿದ್ದಾರೆ. ರಕ್ಷೆ ನೀಡಿದ್ದಾರೆ. ಮನೆಯಲ್ಲಿ ಯಾವ ಶುಭಕಾರ್ಯವಾಗುವಾಗಲೂ ಅತ್ಯಂತ ಅನಿರೀಕ್ಷಿತವಾಗಿ ಅವರಿಂದ ಆಶೀರ್ವಾದಾಕ್ಷತೆ ನನಗೆ ಬರುತ್ತಿದೆ. ಉಳಿದೆಲ್ಲವೂ ಹೇಗಾದರೂ ಇರಲಿ ನಾಸ್ತಿಕನಾಗಿದ್ದ ನನ್ನ ಬಾಳಿಗೆ ನಂಬಿಕೆಯ ಊರೆಗೋಲು ದೊರೆತಿದೆ. ಎಲ್ಲಕ್ಕಿಂತಲೂ ನನಗೆ ಹೆಚ್ಚಾಗಿ ಸದಾಕಾಲವೂ ನನ್ನ ಸುತ್ತಲೂ ನನ್ನನ್ನು ಕಾಪಾಡುವ ರಕ್ಷಾ ಶಕ್ತಿಯೊಂದು ಇದೆ ಎನ್ನುವ ಭರವಸೆ ಮೂಡಿದೆ.

ಎಲ್ಲಕ್ಕಿಂತ ಹೆಚ್ಚಾಗಿ ಮೂರು ನಾಲ್ಕು ತಿಂಗಳಿಗೊಮ್ಮೆ ಶ್ರೀ ಶ್ರೀಗಳವರ ದರ್ಶನ ಮಾಡದಿದ್ದರೆ ನನ್ನ ಬಾಳು ಮರಳುಗಾಡಿನಂತಾಗುತ್ತದೆ. ತಾಯಿ ಬಳಿಗೆ ಓಡುವ ಕರುವಿನಂತೆ ಶೃಂಗೇರಿಗೆ ಓಡುತ್ತೇನೆ. ಮೊದಲು ಶೃಂಗೇರಿಗೆ ಹೋದವನು ಕೇವಲ ಶ್ರೀ ಶಾರದಮ್ಮನವರ ದರ್ಶನ ಮಾಡಿ ಬರುತ್ತಿದ್ದೆ. ಈಗ ಅದಕ್ಕೂ ಮೊದಲು ಶ್ರೀ ಶ್ರೀಗಳವರ ದರ್ಶನ ಮಾಡುತ್ತೇನೆ. ಅವರ ದರ್ಶನ ಮಾಡಿದಾಗ ಅವರನ್ನು ದರ್ಶನದಲ್ಲಿ ಮಾಡಿದ ಹರ್ಷವಷ್ಟೇ ಅಲ್ಲ, ಶ್ರೀಮಾತೆಯನ್ನು ದರ್ಶನಮಾಡಿದ ಸಂತೃಪ್ತಿಯೂ ನನ್ನ ಬಾಳಿಗೆ ಒದಗುತ್ತದೆ.

ಈಗ ಶ್ರೀಗಳವರೇ ನನ್ನ ಪಾಲಿಗೆ ಆ ತಾಯಿಯೂ ಆಗಿದ್ದಾರೆ. ಅಷ್ಟಕ್ಕಿಂತ ಹೆಚ್ಚಿನ ಭಾಗ್ಯ ಬೇರೇನು ಬೇಕು ?

ದೇವರನ್ನು ಒಲಿಸಿಕೊಳ್ಳಲು ತಪಸ್ಸು ಮಾಡಬೇಕು ಎನ್ನುತ್ತಾರೆ. ಅಂತಹ ತಪಸ್ಸಿಗೆ ಬೇಕಾದ ಯಾವ ಶಕ್ತಿಯೂ ಇಲ್ಲದ ನನ್ನಂತಹ ಅಲ್ಪನಿಗೂ ಅತಿ ಸುಲಭವಾಗಿ ಒಲಿದ ದೇವತೆ ಶ್ರೀಶ್ರೀ ಶ್ರೀಮದಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರು.

ಆ ಪ್ರಥಮಾನುಭವವಾದ ಬಳಿಕ ಹತ್ತಾರು ಬಾರಿ ಶ್ರೀ ಶ್ರೀಗಳವರ ದರ್ಶನ ಮಾಡಿದ್ದೇನೆ: ಹಲವಾರು ಬಾರಿ ಅವರೊಂದಿಗೆ ಮಾತಾನಾಡಿದೇನೆ ಹಲವರಿಂದ ಅವರ ಅನುಭವಗಳನ್ನು ಕೇಳಿದ್ದೇನೆ; ಹತ್ತಾರು ಅಲೌಕಿಕ ಅನುಭವಗಳು ನನಗೆ ಆಗಿವೆ. ಇದೆಲ್ಲವೂ ಆಗಿ ಒಂದು ಮಾತು ನನಗೆ ಖಚಿತವಾಗಿದೆ.

"ಜಗದ್ಗುರು" ಎನ್ನುವ ಪದಕ್ಕೆ ಸರ್ವಾರ್ಥದಲ್ಲೂ ತಕ್ಕವರು ಎನ್ನುವವರು ಒಬ್ಬರಿದ್ದರೆ ಅವರು ಶ್ರೀಶ್ರೀ ಶ್ರೀಮದಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳು. ಅವರಿಗಿಂತ ದೊಡ್ಡ ಗುರುಗಳಿಲ್ಲ, ಶೃಂಗೇರಿಗಿಂತ ಪವಿತ್ರವಾದ ಕ್ಷೇತ್ರ ಮತ್ತೊಂದಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮರೆಯಾದ ಮಹಾಯೋಗಿ

ಲೇಖಕರು : ಲ. ನ. ಶಾಸ್ತ್ರಿ

ಬೆಂಗಳೂರು ಅರಳೇಪೇಟೆಯಲ್ಲಿ ಒಂದು ಸಣ್ಣ ಮನೆ. ಅದರೊಡೆಯರು ಒಬ್ಬ ಶಾಲಾ ಉಪಾಧ್ಯಾಯರು. ಅವರು ತಮ್ಮ ಮಗ ಹತ್ತು ವರ್ಷದ ಶ್ರೀನಿವಾಸನಿಗೆ ಯಾವುದೋ ಒಂದು ಕೆಲಸ ಮಾಡಲು ಹೇಳಿದ್ದರು. ಮನೆಯಲ್ಲಿ ತಾಯಿಗೆ ನೆರವಾಗಲು ಕೆಲಸ ಕಾರ್ಯಗಳಲ್ಲಿ ಮಗ್ನನಾಗಿದ್ದ ಶ್ರೀನಿವಾಸನಿಗೆ ತಂದೆ ಹೇಳಿದ್ದ ಕೆಲಸ ಮಾಡಲು ಮರತೇ ಹೋಯಿತು. ಮನೆಗೆ ಹಿಂತಿರುಗಿದ ತಂದೆ ತಮ್ಮ ಮಗನು ತಾವು ಹೇಳಿದ್ದ ಕೆಲಸ ಮಾಡದುದನ್ನು ಗಮನಿಸಿ ಕೋಪದಿಂದ ಕನಲಿ, ಬೆತ್ತದಿಂದ ಬಾಲಕನ ಅಂಗೈಯ ಮೇಲೆ ಛಟೀರನೆ ಏಟುಗಳನ್ನು ಬಿಗಿಯಲಾರಂಭಿಸಿದರು. ಒಂದೆರಡು ಏಟುಗಳು ಬೀಳುವ ವೇಳೆಗೆ, ಮನೆಗೆ ಹಿರಿಯರೊಬ್ಬರು ಬಂದು ಈ ದೃಶ್ಯವನ್ನು ಕಂಡರು. ಕೂಡಲೇ ಬಾಲಕನನ್ನು ತಮ್ಮ ಬಳಿಗೆ ಎಳೆದುಕೊಂಡು, ಅಡ್ಡವಾಗಿ ನಿಂತು "ಶಾಸ್ತ್ರೀ ಸಾಕು ನಿಲ್ಲಿಸಿ" ಎಂದು ಗುಡುಗಿದರು. ಪೆಟ್ಟಿನಿಂದ ಕೆಂಪಗಾಗಿದ್ದ ಬಾಲಕನ ಹಸ್ತವನ್ನು ಮೃದುವಾಗಿ ಸವರಿದರು. ಹಾಗೆಯೇ ಅಂಗೈಯ ರೇಖೆಗಳನ್ನು ಗಮನಿಸಿದರು. ಆಶ್ಚರ್ಯ, ಸಂತೋಷಗಳಿಂದ "ಶಾಸ್ತ್ರಿಗಳೇ, ಇನ್ನು ಮೇಲಿಂದ ನೀವು ಇವನನ್ನು ಎಚ್ಚರಿಕೆಯಿಂದ ನೋಡಿಕೊಳ್ಳಬೇಕು. ನಿಮ್ಮ ಒರಟುತನ, ಕೋಪಗಳನ್ನು ಇವನಲ್ಲಿ ತೋರಬಾರದು ಇವನು ಶೀಘ್ರದಲ್ಲಿಯೇ ಮಹಾತ್ಮರೊಬ್ಬರ ಅನುಗ್ರಹಕ್ಕೆ ಪಾತ್ರನಾಗುತ್ತಾನೆ. ಇವನದು ರಾಜಯೋಗವುಳ್ಳ ಸಂನ್ಯಾಸಿಯ ಹಸ್ತ" ಎಂದರು. ಆ ಬಾಲಕ ಶ್ರೀನಿವಾಸನೇ ಮುಂದೆ ಮಹಾ ತಪಸ್ವಿ ಶ್ರೀ ಶ್ರೀ ಚಂದ್ರಶೇಖರ ಭಾರತಿಯವರ ಕೃಪೆಗೆ ಪಾತ್ರರಾಗಿ, ಶ್ರೀ ಶ್ರೀ ಅಭಿನವ ವಿದ್ಯಾತೀರ್ಥರೆಂದು ಪ್ರಖ್ಯಾತರಾದ ಯತಿಶ್ರೇಷ್ಠ. ತಂದೆ ಶ್ರೀ ರಾಮಾಶಾಸ್ತ್ರೀ. ತಾಯಿ ಮಾ|| ಸೌ|| ವೆಂಕಟಲಕ್ಷಮ್ಮ.

ಶ್ರೀ ವಿದ್ಯಾತೀರ್ಥರ ಜನನ ಪೈಂಗಳ ಸಂವತ್ಸರದ ನರಕಚತುರ್ದಶಿಯಂದು. (13-11-1917) ಮಾತಾಪಿತರಿಗೆ ಮೂರನೆಯ ಮಗು. ಪುತ್ರರಲ್ಲಿ ಮೊದಲನೆಯವರು. ಆರ್ಥಿಕ ಅನುಕೂಲವಿಲ್ಲದ ಬಡತನದಲ್ಲಿಯೇ ಬೆಳೆದರು.

ಶ್ರೀ ಶಂಕರಾಚಾರ್ಯರಿಂದ ಸ್ಥಾಪಿತವಾದ ದಕ್ಷಿಣಾಮ್ನಾಯ ಮಠವಾದ ಶೃಂಗೇರಿಯ ಶ್ರೀ ಶಾರದಾಪೀಠದಲ್ಲಿ ಜಗದ್ಗುರುಗಳಾಗಿದ್ದ ಶ್ರೀ ಶ್ರೀ ಚಂದ್ರಶೇಖರ ಭಾರತೀ ಮಹಾಸ್ವಾಮಿಗಳವರು ಸಂಪೂರ್ಣ ವಿರಕ್ತಿಯನ್ನು ಅಪೇಕ್ಷಿಸಿ, ತಮ್ಮ ಮಠದ ಕೆಲಸ ಕಾರ್ಯಗಳನ್ನು ದಕ್ಷತೆಯಿಂದ ನಿರ್ವಹಿಸಬಲ್ಲ ಶಿಷ್ಯನ ಅಪೇಕ್ಷೆಯಲ್ಲಿ ಇದ್ದರು. ಅದೇ ಸಮಯಕ್ಕೆ ಸರಿಯಾಗಿ (1930ರ ಶ್ರೀ ಶಂಕರ ಜಯಂತೀ ಸಂದರ್ಭ). ರಾಮಾಶಾಸ್ತ್ರಿಗಳು ತಮ್ಮ ಮಗ ಶ್ರೀನಿವಾಸನ ಉಪನಯನಕ್ಕಾಗಿ ಶೃಂಗೇರಿಗೆ ಬಂದರು. ಮುಗ್ಧಬಾಲಕ ಶ್ರೀನಿವಾಸನು ಶ್ರೀ ಗುರುಗಳ ದರ್ಶನದಿಂದ ಪ್ರಭಾವಿತನಾಗಿ "ಇವರೇ ನನ್ನ ಗುರು, ಮಾರ್ಗದರ್ಶಿ, ದೇವರು" ಎಂದು ದೃಢವಾಗಿ ನಂಬಿದನು. ಉಪನಯನವಾಯಿತು. ಬಾಲಕ ಬೆಂಗಳೂರಿಗೆ ಮರಳಿ ಹೋಗಲು ಒಪ್ಪಲಿಲ್ಲ. ತಾನು ಶೃಂಗೇರಿಯಲ್ಲಿಯೇ ಇದ್ದು, ಸಂಸ್ಕೃತ ವಿದ್ಯಾಭ್ಯಾಸ ಮಾಡುವುದಾಗಿ ತಂದೆಗೆ ಬಿನ್ನವಿಸಿದನು.

ಶೃಂಗೇರಿಯ ಸದ್ವಿದ್ಯಾ ಸಂಜೀವಿನೀ ಪಾಠಶಾಲೆಯಲ್ಲಿ ಅಧ್ಯಯನ ಆರಂಭವಾಯಿತು. ಯಜುರ್ವೇದ, ನಾಟಕಾಂತ್ಯ ಸಾಹಿತ್ಯ, ವ್ಯಾಕರಣ, ತರ್ಕ—ಹೀಗೆ ಒಂದೊಂದಾಗಿ ಶಿಕ್ಷಣ ಆರಂಭವಾಯಿತು. ದಿನದಿನಕ್ಕೂ ಈ ಬಾಲಕನಲ್ಲಿ ಶ್ರೀ ಗುರುಗಳಿಗೆ ವಾತ್ಸಲ್ಯ ಅಧಿಕವಾಗುತ್ತಾ ಬಂತು. ಬಾಲಕನಿಗೂ ಅಷ್ಟೇ. ಶ್ರೀ ಗುರುವೇ

Sri Vidyabharathi Book Centre, Sringeri

CC-O. In Public Domain. Digitized by eGangotri

ತನ್ನ ಸರ್ವಸ್ವ ಎಂಬ ಭಾವ ಬಲವಾಗುತ್ತಾ ಬಂದಿತು. ಶ್ರೀ ಗುರುಗಳು ಈತನನ್ನೇ ತಮ್ಮ ಶಿಷ್ಯನನ್ನಾಗಿ ಸ್ವೀಕರಿಸಿ (22-5-1931) ಸಂನ್ಯಾಸವನ್ನಿತ್ತು, ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಎಂಬ ಪಟ್ಟನಾಮವನ್ನು ಇತ್ತರು. (ಶ್ರೀ ವಿದ್ಯಾರಣ್ಯ ಸ್ವಾಮಿಗಳವರ ಗುರುಗಳಾಗಿದ್ದ ಶ್ರೀ ವಿದ್ಯಾತೀರ್ಥರು ಈ ಪರಂಪರೆಯಲ್ಲಿ ಹತ್ತನೆಯವರಾಗಿದ್ದರು.)

ಯತ್ಯಾಶ್ರಮವನ್ನು ಸ್ವೀಕರಿಸಿದ ನಂತರ ಶ್ರೀ ಅಭಿನವ ವಿದ್ಯಾತೀರ್ಥರು ತಮ್ಮ ಗುರುವಿನಿಂದಲೇ ಪರಮಾರ್ಥ ತತ್ವದ ರಹಸ್ಯವನ್ನರಿತು ಸಾಧನೆಗೆ ಉಪಕ್ರಮಿಸಿದರು. ಯೋಗಾಭ್ಯಾಸನಿರತರೂ ಆದರು. ಪಂಡಿತರಾಜ ವಿ. ಎಸ್. ರಾಮಚಂದ್ರ ಶಾಸ್ತ್ರಿಗಳವರಲ್ಲಿ ತರ್ಕ, ವೇದಾಂತಗಳನ್ನು ಅಧ್ಯಯನ ಮಾಡಿದರು. ಆರ್ಷ ವಿದ್ಯೆಯ ಹಲವಾರು ಶಾಖೆಗಳಲ್ಲಿ ಅಧ್ಯಯನ ಮಾಡಿ ವಿದ್ವತ್ತಿನ ಗಣಿಯಾದರು. ಸಂಸ್ಕೃತ, ಕನ್ನಡ, ತೆಲುಗು, ತಮಿಳು, ಹಿಂದೀ ಭಾಷೆಗಳಲ್ಲಿ ಪ್ರಾವೀಣ್ಯತೆ ಪಡೆದರು ಜೈನ, ಬೌದ್ಧ ಶಾಸ್ತ್ರಗಳನ್ನು ಅಧ್ಯಯನ ಮಾಡಿದರು. ಬೈಬಲ್, ಖುರಾನ್‌ಗಳ ತತ್ವಗಳನ್ನು ಮನನ ಮಾಡಿದರು.

ಸುಮಾರು 22 ವರ್ಷಗಳ ಕಾಲ ಹಿರಿಯ ಗುರುಗಳ ಸಾನ್ನಿಧ್ಯದಲ್ಲಿ ಅಧ್ಯಯನ ಅಧ್ಯಾಪನ, ಸಾಧನೆಗಳನ್ನು ನಡೆಸಿದ ಶ್ರೀ ವಿದ್ಯಾತೀರ್ಥರು, ಹಿರಿಯ ಗುರುಗಳು ಅಪೇಕ್ಷಿಸಿದಂತೆಯೇ ಅವರನ್ನು ಸದಾ ಆತ್ಮಾರಾಮರಾಗಿರಲು ಬಿಟ್ಟು, ತಾವು ಮಠದ ಲೌಕಿಕ, ಧಾರ್ಮಿಕ ವ್ಯವಹಾರಗಳನ್ನೆಲ್ಲಾ ಸಮರ್ಥವಾಗಿ ನಿರ್ವಹಿಸಲಾರಂಭಿಸಿದರು.

ಶ್ರೀ ಚಂದ್ರಶೇಖರ ಭಾರತಿಯವರು ಬ್ರಹ್ಮೀಭೂತರಾದ ನಂತರ, ಶ್ರೀ ಶ್ರೀ ಅಭಿನವ ವಿದ್ಯಾತೀರ್ಥರು 16-10-1954 ರಲ್ಲಿ ವಿಧ್ಯುಕ್ತವಾಗಿ ಪಟ್ಟಾಭಿಷಿಕ್ತರಾದರು. ಲಕ್ಷೋಪಲಕ್ಷ ಶಿಷ್ಯರ ಸತತ ಕೋರಿಕೆಯಂತೆ 1956 ರಲ್ಲಿ ತಮ್ಮ ಪ್ರಥಮ ಸಂಚಾರವನ್ನು ಆರಂಭಿಸಿದರು. ಅನಂತರ ಪದೇ ಪದೇ ದಿಗ್ವಿಜಯವನ್ನು ನಡೆಸುತ್ತಾ ಭರತ ಖಂಡವನ್ನು ಮೂರು ಸಲ ತಮ್ಮ ಸಂಚಾರದಿಂದ ಪಾವನಗೊಳಿಸಿದರು. "ತೀರ್ಥೀ ಕುರ್ವಂತಿ ತೀರ್ಥಾನಿ'' ಎಂಬಂತೆ ದೇಶವನ್ನು ಸುತ್ತುವರಿದ ಮೂರು ಸಮುದ್ರಗಳಲ್ಲಿಯೂ, ಎಲ್ಲಾ ನದಿ, ತಟಾಕ, ಸರೋವರಗಳಲ್ಲಿಯೂ ಸ್ನಾನಾನುಷ್ಠಾನ ಮಾಡಿ ಪುನೀತಗೊಳಿಗೊಳಿಸಿದರು.

ಭರತಖಂಡದ ಪ್ರಪ್ರಮುಖ ಮಹಾನಗರಗಳಾದ ನವದೆಹಲಿ, ಕಲ್ಕತ್ತಾ, ಮದರಾಸು ಮತ್ತು ಮುಂಬಯಿಗಳಲ್ಲಿ ಶ್ರೀ ಶಂಕರ ವಿದ್ಯಾ ಕೇಂದ್ರಗಳನ್ನು ಸ್ಥಾಪಿಸಿದ್ದಲ್ಲದೆ, ನೂರಾರು ಸ್ಥಳಗಳಲ್ಲಿ ಶ್ರೀ ಶಂಕರ, ಶ್ರೀ ಶಾರದಾ ಮೂರ್ತಿಗಳನ್ನು ಪ್ರತಿಷ್ಠಿಸಿದರು. ಎಷ್ಟೋ ದೇವಾಲಯಗಳನ್ನು ಪುನರ್ನವೀಕರಿಸಿದರು. ಹತ್ತಾರು ಕಡೆ ಸಂಸ್ಕೃತ ಪಾಠಶಾಲೆಗಳನ್ನು ಸ್ಥಾಪಿಸಿದರು. ವೇದಶಾಸ್ತ್ರ ಪ್ರಚಾರಕ್ಕಾಗಿ ವೇದವಿದ್ಯಾ ಪರಿಷತ್ತನ್ನೂ, ಸಂಸ್ಕೃತ ಭಾಷಾ ಪ್ರಸಾರಕ್ಕಾಗಿ ಶ್ರೀ ಸುರಸರಸ್ವತೀ ಸಭೆಯನ್ನೂ, ಆರಂಭಿಸಿದರು. ಕಾಲಟಿಯ ಶ್ರೀ ಶಂಕರ ಕಾಲೇಜು—ಅದು ಪ್ರಥಮ ದರ್ಜೆಯ ಸಂಸ್ಥೆ—ಶ್ರೀ ಸ್ವಾಮಿಗಳವರ ಆಶ್ರಯದಲ್ಲಿಯೇ ನಡೆಯುತ್ತಿದೆ.

ಶ್ರೀ ಸ್ವಾಮಿಗಳವರು ಪ್ರಕಾಂಡ ಪಂಡಿತರಾಗಿದ್ದರಷ್ಟೇ ಅವರ ಪಾಂಡಿತ್ಯದ ಹೊಳಹು ನಮಗೆ ವಿದ್ವತ್ಸಭೆಗಳಲ್ಲಿ ಮಾತ್ರ ಪ್ರಕಾಶವಾಗುತ್ತಿತ್ತು. ಶ್ರೀ ಗಣಪತಿ ವಿದ್ವತ್ಸಭೆಯು ಭಾದ್ರಪದ ಶುದ್ಧ ಚೌತಿಯಿಂದ ಹತ್ತು ದಿನಗಳ ಕಾಲ ನಡೆದು, ಆ ಸಭೆಯಲ್ಲಿ ಕರ್ನಾಟಕ, ಆಂಧ್ರ, ತಮಿಳುನಾಡು, ಕೇರಳದ ಪಂಡಿತರಷ್ಟೇ ಅಲ್ಲದೆ, ದೂರದ ಬಂಗಾಳ, ಮಧ್ಯಪ್ರದೇಶ, ಉತ್ತರಪ್ರದೇಶ, ಮಹಾರಾಷ್ಟ್ರದ ಪಂಡಿತರೂ ಪಾಲ್ಗೊಳ್ಳುತ್ತಿದ್ದರು. ಈ ಪಂಡಿತರಲ್ಲಿ ಬ್ರಾಹ್ಮಣರಷ್ಟೇ ಅಲ್ಲದೆ, ಬ್ರಾಹ್ಮಣರಲ್ಲದ ವಿದ್ವಾಂಸರೂ ಇರುತ್ತಿದ್ದು, ಸಭೆಯ ಕಾರ್ಯಕಲಾಪವೆಲ್ಲವೂ ಸಂಸ್ಕೃತದಲ್ಲಿಯೇ ನಡೆಯುತ್ತಿತ್ತು. ಶ್ರೀ ಸ್ವಾಮಿಗಳವರು ಈ ಸಭೆಯಲ್ಲಿ ಶ್ರೀ ದಕ್ಷಿಣಾಮೂರ್ತಿಯಂತೆ ಕಂಗೊಳಿಸುತ್ತಾ, ವಾದವಿವಾದಗಳಲ್ಲಿ ಬಿಸಿಯೇರಿದಾಗ ಮಧ್ಯಪ್ರವೇಶಿಸಿ ಸಮನ್ವಯಗೊಳಿಸುತ್ತಿದ್ದರು.

ಶ್ರೀ ಸ್ವಾಮಿಗಳ ಶಿಷ್ಯವರ್ಗ ಅತಿ ಅಪಾರವಾದುದು. ರಾಷ್ಟ್ರದ ಅಧ್ಯಕ್ಷರಿಂದ ಹಿಡಿದು ಅತಿ ಸಾಮಾನ್ಯರವರೆಗೆ ಅವರ ಶಿಷ್ಯ ಸಂಪತ್ತು, ಭರತಖಂಡ

Sri Vidyabharathi Book Centre, Sringeri

CC-O. In Public Domain. Digitized by eGangotri

ದಲ್ಲಿ ಅಷ್ಟೇ ಅಲ್ಲದೆ, ದೂರದ ಅಮೆರಿಕ, ಜರ್ಮನಿ, ಫ್ರಾನ್ಸ್, ದೇಶಗಳಲ್ಲಿಯೂ ಅವರ ಶಿಷ್ಯರು ಇದ್ದಾರೆ. ಭಾರತೀಯರಷ್ಟೇ ಅಲ್ಲದೆ ಪಾಶ್ಚಾತ್ಯರೂ ಅವರ ಮಾರ್ಗದರ್ಶನ, ಉಪದೇಶ ಪಡೆದಿದ್ದಾರೆ. ಅಮೆರಿಕದ ಪೆನ್ಸಿಲ್ವೇನಿಯದಲ್ಲಿ ಸ್ಥಾಪಿತವಾಗಿರುವ ಶ್ರೀ ರಾಜೇಶ್ವರಿ ಪೀಠವು ಇದಕ್ಕೊಂದು ನಿದರ್ಶನ. ಈ ಪೀಠದ ಸ್ಥಾಪಕಿಯಾದ ಮಹಾಮಂಡಲೇಶ್ವರೀ ಸ್ವಾಮಿ ಲಕ್ಷ್ಮೀ ದೇವ್ಯಾಶ್ರಮ್, ಅಮೆರಿಕನ್ ಮಹಿಳೆ ಶ್ರೀ ಶ್ರೀಗಳವರ ಆಜ್ಞೆಯಂತೆ ಸ್ಟ್ರಾಡ್ಸ್‌ಬರ್ಗ್ ಬಳಿ, ಪೊಕ್ಯಾನೋ ಪರ್ವತ ಶಿಖರದಲ್ಲಿ ಶ್ರೀ ಶ್ರೀ ರಾಜ ರಾಜೇಶ್ವರಿ ಪೀಠವನ್ನು ಸ್ಥಾಪಿಸಿದ್ದಾರೆ.

ಶ್ರೀ ಶಂಕರಾಚಾರ್ಯರಿಂದ ಸ್ಥಾಪಿತವಾದ ನಾಲ್ಕು ಆಮ್ನಾಯ ಪೀಠದ (ಆಮ್ನಾಯ ಎಂದರೆ ವೇದ, ಋಗ್, ಯಜುಸ್, ಸಾಮ, ಅಥರ್ವಣಗಳು ನಾಲ್ಕು ಆಮ್ನಾಯಗಳು) ಆಚಾರ್ಯರು ಮೊತ್ತಮೊದಲಿಗೆ ಒಟ್ಟಾಗಿ ಕಲೆತು ಶ್ರೀ ಶಂಕರ ಜಯಂತೀ ಮಹೋತ್ಸವವನ್ನು ಶೃಂಗೇರಿಯಲ್ಲಿ ಆಚರಿಸಿದುದು 1-5-1979 ಶ್ರೀ ಸ್ವಾಮಿಗಳವರ ಮಹತ್ಪ್ರಯತ್ನದಿಂದ.

ತಮ್ಮ ಎಡಬಿಡದ ಕಾರ್ಯಕ್ರಮ ಮತ್ತು ಚಟುವಟಿಕೆಗಳಿಂದ ಬಿಡುಗಡೆ ಹೊಂದಿ, ಆತ್ಮಾರಾಮರಾಗಿರಲು ಇಚ್ಛಿಸಿದ ಶ್ರೀ ಗುರುಗಳು ತಮ್ಮಲ್ಲಿ ಹತ್ತು ವರ್ಷಗಳ ಕಾಲದಿಂದಲೂ ಅಧ್ಯಯನ ಮಾಡಿಕೊಂಡಿದ್ದ ಬ್ರಹ್ಮಚಾರಿ (ಶ್ರೀಗಳವರಲ್ಲಿ ಹೀಗೆ ಇದ್ದವರು ಮೂರು ಜನ. ಆದರ ಕಡೆಗೆ ಗಟ್ಟಿಯಾಗಿ ಉಳಿದವರು ಒಬ್ಬರೇ.) ಶ್ರೀ ಸೀತಾರಾಮ ಆಂಜನೇಯರಿಗೆ ಸಂನ್ಯಾಸಾಶ್ರಮವನ್ನು ಅನುಗ್ರಹಿಸಿ, ಶ್ರೀ ಭಾರತೀತೀರ್ಥ ಎಂಬ ಯೋಗಪಟ್ಟವನ್ನು ಇತ್ತರು. ಶಿಷ್ಯ ಸ್ವೀಕಾರವಾದ (1974) ಮೇಲೂ ಸ್ವಲ್ಪ ಕಾಲ ಸಂಚಾರ ನಡೆಸಿ, ಕ್ರಮಕ್ರಮವಾಗಿ ಮಠದ ಎಲ್ಲ ಭಾರವನ್ನೂ ಈ ಸಮರ್ಥ, ದಕ್ಷ ಶಿಷ್ಯರಿಗೆ ವಹಿಸಿ, ತಾವು ಎಲ್ಲ ಚಟುವಟಿಕೆಗಳಿಂದಲೂ ಹಿಂದಕ್ಕೆ ಸರಿಯುತ್ತಾ ಬಂದರು.

ಶಿಷ್ಯರೇ, ಭಕ್ತರೇ ತಮ್ಮ ಸಂಸಾರ ಎಂದು ಹೇಳುತ್ತಿದ್ದ ಶ್ರೀ ಗುರುಗಳು ಎಷ್ಟೋ ಸಲ ತಮ್ಮ ದೈಹಿಕ ಅನಾರೋಗ್ಯವನ್ನೂ, ಆಯಾಸವನ್ನೂ ನಿರ್ಲಕ್ಷಿಸಿ, ಶಿಷ್ಯರಿಗಾಗಿ ಸಣ್ಣಪುಟ್ಟ ಸಂಚಾರ ಯಾತ್ರೆಗಳನ್ನು ಕೈಗೊಂಡರು. ಶಿಷ್ಯರೂ ಸಹ ತಮ್ಮ ಭಕ್ತಿ, ಶ್ರದ್ಧೆ, ಉತ್ಸಾಹಗಳಲ್ಲಿ ಶ್ರೀ ಸ್ವಾಮಿಗಳವರು ದೈವಾಂಶಸಂಭೂತರಾದರೂ, ಅವರದೂ ನಮ್ಮಂತೆಯೇ ಮಾನವ ಶರೀರ, ಅದಕ್ಕೂ ಕ್ಲುಪ್ತ ಕಾಲಕ್ಕೆ ಆಹಾರ, ವಿಶ್ರಾಂತಿ ಬೇಕು ಎಂಬುದನ್ನೂ ಮರೆತು, ಶ್ರೀ ಗುರುಗಳನ್ನು ಸದಾ ಮುತ್ತುತ್ತ ತಮ್ಮ ಕಷ್ಟಕಾರ್ಪಣ್ಯ, ರೋಗರುಜಿನ ಮುಂತಾದ ಸಮಸ್ಯೆಗಳನ್ನು ಬಿನ್ನವಿಸಿಕೊಳ್ಳುತ್ತಿದ್ದರು.

ಶ್ರೀ ಗುರುಗಳವರಿಂದ ಮಂತ್ರೋಪದೇಶ, ಮಾರ್ಗದರ್ಶನ ಪಡೆದ ಜನ ಲಕ್ಷೋಪಲಕ್ಷ. ಶ್ರೀಗಳವರ ಪ್ರಭಾವಕ್ಕೊಳಗಾಗಿ ತಮ್ಮ ಜೀವನ ಮಾರ್ಗ ತಿದ್ದಿಕೊಂಡವರು ಸಾವಿರಾರು ಜನ, ಅವರಿಂದ ಉಪದೇಶ ಪಡೆದ ಸಂನ್ಯಾಸಿಗಳಾದವರು ನೂರಾರು ಜನ. ಅವರು ನಿತ್ಯವೂ ನಡೆಸುತ್ತಿದ್ದ ಶ್ರೀ ಚಂದ್ರಮೌಳೇಶ್ವರ ಪೂಜೆಯಿಂದ ಪ್ರಭಾವಿತರಾಗಿ, ಧಾರ್ಮಿಕ ಜೀವನಕ್ಕೆ ಮರಳಿದವರು ಬಹಳ ಜನ. ಅವರ ಪ್ರಭಾವ ಅತ್ಯಂತ ಗಾಢವಾದುದು.

ಭವ್ಯವೂ, ಮಹೋನ್ನತವೂ, ವಿಸ್ತಾರವೂ ಆದ ಪರ್ವತದ ಪಕ್ಕದಲ್ಲಿ ನಿಂತಿರುವರಿಗೆ, ಅದರ ಔನ್ನತ್ಯ, ವೈಶಾಲ್ಯಗಳ ಅರಿವು ಆಗಲಾರದು, ಅದರ ಸಾಮೀಪ್ಯ, ಸಾಲಭ್ಯಗಳ ಕಾರಣದಿಂದ. ಬ್ರಹ್ಮೀಭೂತರಾದ (21-9-1989) ಶ್ರೀ ಶ್ರೀ ಅಭಿನವ ವಿದ್ಯಾತೀರ್ಥರು ಮಹೋನ್ನತ ಪರ್ವತದಂತೆಯೇ ಇದ್ದರು. ಆ ಮಹಾತ್ಮರ ಅಂತರಂಗವನ್ನು ಬಲ್ಲ ಕೇವಲ ಸ್ವಲ್ಪ ಮಂದಿಗೆ ಮಾತ್ರ ಅರ್ಥವಾಗಿತ್ತು. ಅವರೆಷ್ಟು ದೊಡ್ಡವರು, ಭವ್ಯರು ಎಂಬುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ವೈದಿಕ ಪರಂಪರೆ: ಇತಿಹಾಸದ ಮೈಲಿಗಲ್ಲುಗಳು

ಲೇಖಕರು : ಪಿ. ಎಸ್. ಶ್ರೀಧರಮೂರ್ತಿ

ಉಪಕಾರ ಹೊಂದಿದವನು ಉಪಕೃತ. ಅಂತೆಯೇ ಸಂಸ್ಕಾರ ಹೊಂದಿದ್ದು ಸಂಸ್ಕೃತ. ಸಂಸ್ಕರಿಸಲ್ಪಟ್ಟ (ರಿಫೈನ್ಡ್) ಭಾಷೆ, ಸಂಸ್ಕೃತ, ಎಂದರೆ ಭಾಷೆಗಳ ಪೈಕಿ ತತ್ವಶಾಸ್ತ್ರಾಧ್ಯಯನಕ್ಕೆ ಬೇಕಾದ ಸಂಸ್ಕಾರವನ್ನು ಸಂಸ್ಕೃತ ಹೊಂದಿದೆ. ಸುಸಂಸ್ಕೃತರಿಂದ ರೂಪಿಸಲ್ಪಟ್ಟ ಮೌಲ್ಯ. ಕಟ್ಟುಪಾಡುಗಳ ವ್ಯವಸ್ಥೆಗೆ ಸಂಸ್ಕೃತಿ (ಕಲ್ಚರ್) ಎನ್ನುತ್ತೇವೆ. ಯಾವುದೇ ಒಂದು ಸಂಸ್ಕೃತಿಯ ಮೇಲೆ ಮತಧರ್ಮ, ಭಾಷೆ, ಪ್ರಾದೇಶಿಕ ವೈಶಿಷ್ಟ್ಯತೆಗಳ ಪ್ರಭಾವ ಬಿದ್ದಿರುತ್ತದೆ ಆದ್ದರಿಂದಲೇ ಕನ್ನಡ ಸಂಸ್ಕೃತಿ, ತಮಿಳು ಸಂಸ್ಕೃತಿ, ದಾಕ್ಷಿಣಾತ್ಯ ಸಂಸ್ಕೃತಿ, ಜೈನ ಸಂಸ್ಕೃತಿ, ಮುಸ್ಲಿಮ್ ಸಂಸ್ಕೃತಿ ಎಂಬ ನುಡಿಗಟ್ಟುಗಳು ಬಳಕೆಯಲ್ಲಿವೆ. ಇಡೀ ಭಾರತದೇಶದಲ್ಲೆಲ್ಲ ಹರಡಿರುವ ಏಕಪ್ರಕಾರವಾದ ಸಂಸ್ಕೃತಿ ಇಲ್ಲ: ಇರಲು ಸಾಧ್ಯವಿಲ್ಲ. ಅಷ್ಟೇ ಅಲ್ಲ. ಇರಬೇಕಾದುದು ಅನಿವಾರ್ಯವೂ ಅಲ್ಲ. ಭಾರತದಲ್ಲಿ ಏಕಪ್ರಕಾರತೆ (ಯೂನಿಫಾರ್ಮಿಟಿ) ಇಲ್ಲ; ವೈವಿಧ್ಯತೆ (ಡೈವರ್ಸಿಟಿ) ಇದೆ. ವಿವಿಧ ಸಂಸ್ಕೃತಿಗಳಲ್ಲಿ ತಿಕ್ಕಾಟಕ್ಕೆ (ಕಾನ್‌ಫ್ಲಿಕ್ಟ್) ಬದಲು ಒಗ್ಗಟ್ಟನ್ನು ರೂಢಿಸಿಕೊಳ್ಳಬೇಕು. ಒಗ್ಗಟ್ಟನ್ನು ಕಾಪಾಡಿಕೊಂಡು ವೈವಿಧ್ಯತೆಯನ್ನು ಉಳಿಸಿಕೊಳ್ಳಬೇಕು. (ಯೂನಿಟಿ ಇನ್ ಡೈವರ್ಸಿಟಿ). ಇಂದಿಗೆ ಇದೇ ಕಾರ್ಯಾನುಕೂಲ (ಪ್ರಾಕ್ಟಿಕಲ್) ಆದರ್ಶ ಮತ್ತು ಅನುಸರಣೆಗೆ ಯೋಗ್ಯಮಾರ್ಗ. ಹಲವು ಸಂಸ್ಕೃತಿಗಳುಳ್ಳ ಭಾರತದಲ್ಲಿ ಕೆಲವು ಸ್ತರಗಳಲ್ಲಿ ಸಮ್ಮಿಶ್ರ ಸಂಸ್ಕೃತಿ ರೂಪುಗೊಂಡಿದ್ದು ಮತ್ತೆ ಕೆಲವು ಸ್ತರಗಳಲ್ಲಿ ಸಂಸ್ಕೃತಿಗಳ ಸಹಚರ್ಯೆಯಿಂದಾಗಿ ಸಂಕೀರ್ಣತೆಗೆ (ಕಾಂಪ್ಲೆಕ್ಸಿಟಿ) ಎಡೆಗೊಟ್ಟಿದೆ.

ಈ ಪ್ರಸ್ತುತ ಪರಿಸ್ಥಿತಿಯ ಹಿನ್ನೆಲೆಯಲ್ಲಿ ವೈದಿಕ ಸಂಸ್ಕೃತಿಯ ಇತಿಹಾಸದ ಅವಲೋಕನದಲ್ಲಿ ಕೆಲವು ಸ್ವಾರಸ್ಯಕರ ಅಂಶಗಳನ್ನು ಗುರ್ತಿಸಬಹುದು ಒಂದೇ ಮೂಲದಿಂದ ಚಿಗುರಿದ ಮರದ ರೆಂಬೆಗಳು ಕವಲಾಗಿ ಒಡೆದು ಬೆಳೆದಂತೆ, ವೈದಿಕತತ್ವ ಜ್ಞಾನ ಹಲವು ಕವಲು ಕವಲುಗಳಾಗಿ ಒಡೆದು ಬೆಳೆದಿದೆ.

ಐವತ್ತು ಶತಮಾನಗಳ ಪ್ರಾಚೀನತೆ

ಕ್ರಿ. ಪೂ. 3000 ವರ್ಷಗಳ ಹಿಂದೆಯೇ ವೇದವೆನಿಸಿದ ಋಗ್ವೇದ ರಚಿಸಲ್ಪಟ್ಟಿತೆಂದು ತಜ್ಞರ ಅಭಿಮತ. ಅನಂತರದ ಒಂದು ಸಹಸ್ರ ವರ್ಷಗಳ ಅವಧಿಯಲ್ಲಿ ಉಳಿದ ಮೂರು ವೇದಗಳ ರಚನೆಯಾಯಿತು. ಹಗಲು ರಾತ್ರಿಗಳ ನಿಯಮ ಬದ್ಧತೆ, ಸೂರ್ಯನ ಪ್ರಕಾಶ, ಇರುಳಿನತಂಪು, ನಕ್ಷತ್ರಗಳ ಸೊಬಗು, ಸಿಡಿಲು ಮಳೆಗಳ ಆರ್ಭಟ, ಇವುಗಳಲ್ಲಿನ ರುದ್ರರಮಣೀಯತೆಯನ್ನು ಗುರ್ತಿಸಿ, ಇವುಗಳೆಲ್ಲದರ ಕಾರಣಕರ್ತನು ರುದ್ರನೆಂದು ಬಗೆದರು. ಮುಂದೆ ಈ ರುದ್ರನೇ ಶಿವಸ್ವರೂಪ ಕಳೆದ. ವಿಷ್ಣು, ಬ್ರಹ್ಮರ ಕಲ್ಪನೆ ಅನಂತರ

Sri Vidyabharathi Book Centre, Sringeri

CC-O. In Public Domain. Digitized by eGangotri

ಮೂಡಿತು. ಸೃಷ್ಟಿ, ಸ್ಥಿತಿ, ಲಯಗಳನ್ನು ನಡೆಸುತ್ತಿರುವ ಶಕ್ತಿಗಳನ್ನು ಧಾತ್ರಿ, ವಿಧಾತ್ರಿ ಎಂಬ ದೇವತೆಗಳೆಂದು ಮೊದಮೊದಲು ಗುರ್ತಿಸಿದರು. ಎಲ್ಲ ಜೀವಗಳ ಒಡೆಯನನ್ನು ಪ್ರಜಾಪತಿ ಎಂದೂ ಸೃಷ್ಟಿ ತತ್ವ ಮತ್ತು ಜಡ ಒಗತ್ತು ಎಲ್ಲದರ ಸೃಷ್ಟಿಕರ್ತನನ್ನು ವಿಶ್ವಕರ್ಮನೆಂದೂ ಕರೆದರು. ಪ್ರಕೃತಿಯ ನಿಯಮ ಪಾಲನೆ, ಸಿಡಿಲು ಮಿಂಚುಗಳು ಇಂದ್ರನಿಂದ ಉಂಟಾಗುತ್ತವೆಂದೂ ನೈತಿಕ ಮೌಲ್ಯಗಳು ವರುಣನಿಗೆ ಸೇರಿದ್ದೆಂತಲೂ, ಕಾಲಕಾಲಕ್ಕೆ ಮಳೆ ತರಿಸುವ ಶಕ್ತಿಯನ್ನು ಪರ್ಜನ್ಯ ದೇವತೆ ಎಂದೂ, ಶಾಖ ನೀಡುವ ಬೆಂಕಿಯನ್ನು ಅಗ್ನಿ ದೇವತೆ ಎಂದೂ, ಜನಾಂಗಕ್ಕೆ ಒಳಿತನ್ನು ಕರುಣಿಸುವ ದೇವತೆ, ವರುಣನ ಸ್ನೇಹಿತನೆಸಿದ ಮಿತ್ರ ಎಂಬ ದೇವತೆ ಎಂದೂ ವೇದಕಾಲದಲ್ಲಿ ತಿಳಿದಿದ್ದರು.

ಉಪನಿಷತ್ತುಗಳು

ಅನಂತರ ಉಪನಿಷತ್ತುಗಳು ಬಂದುವು. ಇವನ್ನು ವೇದಾಂತ ಎಂದು ಕರೆಯುವುದುಂಟು. (ಅ) ವೇದಗಳ ಕೊನೆಯಲ್ಲಿ ಬಂದದ್ದು ಅಥವ ವೇದಗಳ ಕೊನೆಯ ಭಾಗ; ಮತ್ತು (ಆ) ಯಾವುದು ವೇದಗಳ ಗುರಿಯಾಗಿತ್ತೋ ಅದು ಎಂದು ಎರಡು ರೀತಿಯಲ್ಲಿ ಉಪನಿಷತ್ತುಗಳನ್ನು ವೇದಾಂತವೆಂದು ವಿವರಿಸುವುದುಂಟು ವೇದಾಂತವೆಂದು ವಿವರಿಸುವುದುಂಟು. ವೇದಾಂತ ಎಂದರೆ ಜ್ಞಾನದ ತುತ್ತ ತುದಿ ಎಂಬ ಅರ್ಥದಲ್ಲೂ, "ಅಂತ" ಶಬ್ದಕ್ಕೆ ಒಂದು ವಿವರಣೆ ಇದೆ. ಇವುಗಳ ಕಾಲ, ಋಗ್ವೇದದ ಕಾಲಕ್ಕಿಂತ 1500 ವರ್ಷಗಳ ನಂತರದ್ದು ಎಂದು ಒಂದು ಅಂದಾಜು ಎಂದರೆ ಉಪನಿಷತ್ತುಗಳು, ಈಗ್ಗೆ 35 ಶತಮಾನಗಳ ಹಿಂದೆ ರೂಪುಗೊಂಡವು ಎನ್ನಬಹುದು.

ದೇವರು, ಅಥವ ಪರಮಾತ್ಮನ ಬಗ್ಗೆ ಒಂದು ಪ್ರೌಢಕಲ್ಪನೆ ಇಲ್ಲಿ ನಮಗೆ ಸಿಗುತ್ತದೆ. ವೈದಿಕ ಪರಂಪರೆಯ ಅತಿ ಪ್ರಬುದ್ಧ ಕಾಲದಲ್ಲಿ ಇವುಗಳ ರಚನೆಯಾಯಿತೆನ್ನಬಹುದು. "ಅಹಂ ಬ್ರಹ್ಮಾಸ್ಮಿ" "ಪ್ರಜ್ಞಾನಂ ಬ್ರಹ್ಮ", "ತತ್ವಮಸಿ" ಮುಂತಾದ ಅತ್ಯಂತ ಅರ್ಥಗರ್ಭಿತವೂ ಧೀರ್ಘವಾಖ್ಯಾನಗಳಿಗೆ ಸಾಮಗ್ರಿಯನ್ನು ಒದಗಿಸುವಂಥವೂ ಆದ ಪ್ರಮುಖ ಸೂತ್ರಗಳು ಇಲ್ಲಿ ಸಿಗುತ್ತವೆ. ಇವು ಮಹಾ ವಾಕ್ಯಗಳೆಂದು ಪ್ರಖ್ಯಾತವಾಗಿವೆ. ಒಟ್ಟು ನಲವತ್ತು ಉಪನಿಷತ್ತುಗಳಿದ್ದುವೆಂದೂ, ಈಗ ಅವುಗಳ ಪೈಕಿ ಹದಿನಾಲ್ಕು ಉಪನಿಷತ್ತುಗಳು ಮಾತ್ರ ಲಭ್ಯವಿದೆ ಎಂದೂ ವಿದ್ವಾಂಸರ ಮತ.

ಪುರಾಣಗಳು

ವೇದ ವೇದಾಂತಗಳಲ್ಲಿನ ತತ್ವ, ನೀತಿ, ಪ್ರಭೋದನೆಗಳನ್ನು ಜನಸಾಮಾನ್ಯಕ್ಕೆ ವಿವರಿಸಲೆಂದೇ ನಿರ್ಮಿಸಲ್ಪಟ್ಟವು ಎಂಬ ಸಮಜಾಯಿಷಿ ಹೊತ್ತು ಪುರಾಣಗಳು ಸೃಷ್ಟಿಯಾಗುವ ಹೊತ್ತಿಗೆ ಎಲ್ಲ ಉಪನಿಷತ್ತುಗಳ ರಚನೆಯೂ ಮುಗಿದಿತ್ತು. ಬೇರೊಂದು ರೀತಿಯಲ್ಲಿ ಹೇಳಬೇಕೆಂದರೆ, ಪುರಾಣಗಳ ರಚನೆ ಆರಂಭವಾಗುವ ಹೊತ್ತಿಗೆ, ಉಪನಿಷತ್ತುಗಳ ಕಾಲದಲ್ಲಿ ಪ್ರಾಜ್ಞರ ಮೇಧಾಶಕ್ತಿ ಪ್ರಜ್ವಲಿಸಿದಷ್ಟು ಪ್ರಖರವಾಗಿ ಬೆಳಗಲಿಲ್ಲ. ತತ್ವಚಿಂತನೆ, ಧ್ಯಾನ, ತಪಸ್ಸು, ಉಪಾಸನೆಗಳನ್ನು ಅಷ್ಟೇ ಧೃಡತೆಯಿಂದ ನಿರ್ವಹಿಸಲಾರದವರಿಗಾಗಿ ಮತ್ತು ನಿರ್ವಹಿಸಲಾರದ ಮಟ್ಟಕ್ಕೆ ಬುದ್ಧಿಯ ಗ್ರಹಣ ಶಕ್ತಿ (ಗ್ರಾಸ್ಪಿಂಗ್ ಎಬಿಲಿಟಿ) ಕುಸಿತವಾದಲ್ಲಿ ಪುರಾಣಗಳು ರಚಿತವಾದುವು.

ಜಿಜ್ಞಾಸೆಯ ಇಳಿಮುಖ; ಕರ್ಮಕಾಂಡದ ಔನ್ನತ್ಯ

ಚತುರ್ವೇದಗಳಲ್ಲಿ ಕೊನೆಯದೂ ಗೌಣವಾದುದೂ ಆದ ಅಥರ್ವಣವೇದಗಳಲ್ಲಿ ಹವನ, ಹೋಮ, ಯಜ್ಞ, ತಂತ್ರ, ಕರ್ಮ, ಪೂಜೆ, ಇತ್ಯಾದಿ ಸಂಸ್ಕಾರಗಳೂ, ವಿಧಿಗಳೂ, ವಿವರಿಸಲ್ಪಟ್ಟವೆ. ಇವನ್ನೆಲ್ಲ ಸಮಗ್ರವಾಗಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಕರ್ಮಕಾಂಡ ಎಂದು ಕರೆಯುವುದುಂಟು. ಉಪನಿಷತ್ತುಗಳ ಕಾಲದಲ್ಲಿ ಧ್ಯಾನ, ನಿಧಿ ಧ್ಯಾಸನ, ಪ್ರವಚನ, ಮನನ, ಸ್ವಾಧ್ಯಾಯ, ಜಿಜ್ಞಾಸೆಗಳಿಗೆ ಪ್ರಾಧಾನ್ಯತೆಯಿತ್ತು. ಪುರಾಣಗಳ ಕಾಲದಲ್ಲಿ ಈ ಜ್ಞಾನ ಪ್ರಧಾನ ಮನೋಧರ್ಮ ಕ್ಷೀಣಿಸಿ, ಹವನ, ಹೋಮ, ಯಜ್ಞ, ಯಾಗಾದಿಗಳಿಗೆ ಮತ್ತೆ ಪ್ರಾಧಾನ್ಯತೆ ಬಂತು. ಆಧುನಿಕ ಶೈಲಿಯಲ್ಲಿ ಹೇಳಬೇಕೆಂದರೆ ಪುರಾಣಗಳ ಕಾಲದಲ್ಲಿ ವೈಚಾರಿಕತೆ ಕುಗ್ಗಿ ಕರ್ಮಠ ಪ್ರವೃತ್ತಿ ಬೆಳೆಯಿತು. ವಿಷ್ಣುಪುರಾಣ, ಶಿವಪುರಾಣ, ಗರುಡ ಪುರಾಣ, ಹೀಗೆ ಒಟ್ಟು ಹನ್ನೆರಡು ಪುರಾಣಗಳಿವೆ. ರಾಮಾಯಣ ಮಹಾಭಾರತಗಳೂ ಇವುಗಳಲ್ಲಿ ಸೇರಿವೆ. ಇವನ್ನು ಅಷ್ಟಾದಶ ಪುರಾಣಗಳೆಂದು ಕರೆಯುವುದುಂಟು

ಭಗವದ್ಗೀತೆ

ಮಹಾಭಾರತದಲ್ಲಿ ಭಗವದ್ಗೀತೆ ಇಲ್ಲವೆ? ಗೀತೆಯಲ್ಲಿ ತತ್ವಜ್ಞಾನವಿಲ್ಲವೆ? ಎಂಬ ಪ್ರಶ್ನೆಗಳೇಳುತ್ತವೆ. ಉಪನಿಷತ್ತಿನ ಬಹುತೇಕ ಶ್ಲೋಕಗಳನ್ನು ಗೀತೆಯಲ್ಲಿ ಅಳವಡಿಸಲಾಗಿದೆ; ಅಲ್ಲಿಯ ಶ್ಲೋಕಗಳನ್ನೇ ಮತ್ತೆ ಇಲ್ಲಿ ಅನೇಕ ಕಡೆ ಕೃಷ್ಣನ ಬಾಯಿಂದ ಹೇಳಿಸಲಾಗಿದೆ ಎಂಬುದನ್ನು ಉಪನಿಷತ್ತುಗಳನ್ನು ಆಳವಾಗಿ ಅಭ್ಯಸಿಸಿರುವವರೆಲ್ಲರೂ ಬಲ್ಲರು; ಅಂತೆಯೇ ಗೀತೆಯನ್ನು ಕುರಿತು ಪ್ರಕಟವಾಗಿರುವ ಅನೇಕ ವಿಶ್ಲೇಷಕ ಗ್ರಂಥಗಳು, ವ್ಯಾಖ್ಯಾನ, ಭಾಷ್ಯಗಳನ್ನು ಪಠಿಸಿರುವವರೆಲ್ಲರೂ ಬಲ್ಲರು.

ಅಧೋಗತಿಯ ಕಾಲ; ಬಂಡಾಯಗಳು

ಈಗಿನಿಂದ 35 ಶತಮಾನಗಳ ಹಿಂದಿನ ಕಾಲಕ್ಕೂ, 25 ಶತಮಾನಗಳ ಕಾಲಕ್ಕೂ ನಡುವಣ ಸಹಸ್ರ ವರ್ಷಗಳವರೆಗಿನ ಕಾಲದಲ್ಲಿ ಈ ಹಿಂದೆಯೇ ಹೇಳಿದಂತೆ ವೈಚಾರಿಕತೆ, ಉಪನಿಷತ್ಕಾಲದಲ್ಲಿನ ಜ್ಞಾನ ಚಿಂತನಗಳ ಪ್ರಾಧಾನ್ಯತೆ ನಶಿಸುತ್ತಹೋಗಿ ಕ್ರಿ.ಪೂ. 6ನೇ ಶತಮಾನದ ಹೊತ್ತಿಗೆ ಕರ್ಮಠತೆ ಚೆನ್ನಾಗಿ ನೆಲೆಯೂರಿತು. ಉಪನಿಷತ್ಕಾಲದ ಬ್ರಹ್ಮ ಜಿಜ್ಞಾಸೆ, ತತ್ವ ಚಿಂತನ, ಧ್ಯಾನಪರತೆ, ಜೀವೋತ್ಕರ್ಷ, ಅಧ್ಯಯನ ಶೀಲತೆಗಳು ಮಾಯವಾಗಿ, ಪಶುಬಲಿ, ನರಬಲಿ, ಮಂತ್ರ ತಂತ್ರಗಳು ನೆಲೆಯೂರಿ, ಮಂತ್ರವಾದಿಗಳು ತಾಂತ್ರಿಕರು, ಶಾಕ್ತರು, ಕಾಪಾಲಿಕರು, ಹಠಯೋಗಿಗಳು ಚಂಡಿಪೂಜಕರು, ಮುಂತಾದವರ ಪ್ರಾಬಲ್ಯ ಹೆಚ್ಚಾಯಿತು. ವೈದಿಕಧರ್ಮದ ಅತ್ಯಂತ ವಿಕೃತರೂಪ ಮೆರೆಯಿತು. ಜ್ಞಾನಕ್ಕೆ ಗ್ರಹಣ ಹಿಡಿಯಿತು ಮೌಢ್ಯ ಮೆರೆದಾಡಿತು. ಸಾತ್ವಿಕ ತೇಜಸ್ಸಿನ ಯತಿಗಳಿಂದ ಸಮಾಜಕ್ಕೆ ಸಾಂತ್ವನಸಿಗುವ ಬದಲು ರುಂಡಮಾಲೆ, ಧರಿಸಿ, ಖಡ್ಗ, ತ್ರಿಶೂಲಗಳನ್ನು ಹಿಡಿದು ರಕ್ತನಾಲಿಗೆ ವಿಸ್ತರಿಸುವ ಕ್ಷುದ್ರ ದೇವತೆಗಳ ಆರಾಧಕರೂ ಪೂಜಕರೂ ಸಮಾಜವನ್ನು ಪೀಡಿಸತೊಡಗಿದರು. ಇಂಥ ನಿರರ್ಥಕ ನಿಧಿಗಳಿಂದ, ಸಾತ್ವಿಕತೆಯನ್ನು ಕಳೆದುಕೊಂಡ ಬ್ರಾಹ್ಮಣ್ಯದ ಕ್ರೌರ್ಯದಿಂದ ಪಾರಾಗಲು ಜನ ಹಾತೊರೆಯುವುದರಲ್ಲಿ ಆಶ್ಚರ್ಯವಿಲ್ಲ.

ಈ ಸಂದರ್ಭದಲ್ಲಿ, ಈ ಹಿನ್ನೆಲೆಯಲ್ಲಿ ಮತ್ತು ಈ ಕಾರಣಗಳಿಂದಾಗಿ, ಭಗವಾನ್ ಬುದ್ಧರು ಈ ವಿಕೃತ ವೈದಿಕ ಧರ್ಮದ ವಿರುದ್ಧ ಬಂಡಾಯವೆದ್ದು ತಮ್ಮ ಸರಳವೂ, ವ್ಯಾವಹಾರಿಕವೂ, ಅನುಕರಣೀಯವೂ, ಆದ ಅಹಿಂಸೆ, ಸತ್ಯ, ಪ್ರೀತಿ, ಕರುಣೆ ಮತ್ತು ಸದಾಚಾರಗಳು ಮುಖ್ಯವೇ ಹೊರತು, ಕರ್ಮಕಾಂಡವಲ್ಲವೆಂದು ಬೋಧಿಸಿ ಬೌದ್ಧ ಮತವನ್ನು ಸ್ಥಾಪಿಸಿದರು. ಅದೇ ಕಾಲದಲ್ಲಿ ಮಹಾವೀರರು ಅಹಿಂಸೆ ತತ್ವಕ್ಕೆ ಸ್ವಲ್ಪ ಹೆಚ್ಚಿನ ಒತ್ತು ಕೊಟ್ಟು ಜೈನ ಮತಗಳು ತಲೆ ಎತ್ತಿದ ನಂತರ ಕರ್ಮಕಾಂಡದಲ್ಲಿ ಮುಳುಗಿದ್ದ ವೈದಿಕ-ಮತ ನಿಸ್ತೇಜವಾದುದರಲ್ಲಿ ಆಶ್ಚರ್ಯವಿಲ್ಲ. ಅಂತೆಯೇ ಜನಸಾಮಾನ್ಯರು ಹೊಸ ಮತಗಳಿಗೆ ಗೌರವಾದರ ನೀಡಿ ಅವುಗಳನ್ನು ಸ್ವೀಕರಿಸಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಶಂಕರಾಚಾರ್ಯರು; ವೈದಿಕ ಧರ್ಮಕ್ಕೆ ಹೊಸ ಜೀವ

ಮುಂದಿನ ಹದಿನಾಲ್ಕು ಶತಮಾನಗಳ ದೀರ್ಘ ಕಾಲ ಎಂದರೆ ಕ್ರಿ. ಶ. 8ನೇ ಶತಮಾನದರೆಗೆ ತತ್ವ ಶಾಸ್ತ್ರ, ವೇದಾಂತಗಳು ತಲೆ ಎತ್ತಲು ಅವಕಾಶವಿಲ್ಲದೆ, ಧಾರ್ಮಿಕ ಕ್ಷೇತ್ರದಲ್ಲಿ ಯಾವ ಬದಲಾವಣೆಯೂ ಆಗಲಿಲ್ಲ. ಕ್ರಿ. ಶ. 8ನೇ ಶತಮಾನದಲ್ಲಿ ಆದಿಶಂಕರಾಚಾರ್ಯರು, ನಶಿಸಿಹೋಗಿದ್ದ ವೈದಿಕ ಧರ್ಮವನ್ನು ಪುನರುಜೀವನಗೊಳಿಸಿದರು. ಉಪನಿಷತ್ತು, ಗೀತೆ ಮತ್ತು ಬ್ರಹ್ಮಸೂತ್ರಗಳಿಗೆ ವಿವರಣೆ ನೀಡಿ, ಪ್ರಚಾರಗೊಳಿಸಿ, ಬಾಷ್ಯಗಳನ್ನು ಬರೆದು, ಅದ್ವೈತನ್ನು ಪ್ರತಿಪಾದಿಸಿದರು. ಅದ್ವೈತ ಪ್ರತಿಪಾದನೆ ಶಂಕರಾಚಾರ್ಯರ ಮಾರ್ಗ; ವೈದಿಕ ಧರ್ಮದ ಪುನರುಜ್ಜೀವನ ಅವರ ಗುರಿ. ಮುವ್ವತ್ತೆರಡು ವರ್ಷಗಳ ಸಂಕ್ಷಿಪ್ತ ಜೀವನ ಶಂಕರಾಚಾರ್ಯರು ಅತ್ಯಲ್ಪ ಅವಧಿಯಲ್ಲಿ ಈ ಗುರಿಯನ್ನು ಸಾಧಿಸಿದರು. ಮುಂದೆ ಶ್ರೀ ರಾಮಾನುಜರು 1ನೇ ಶತಮಾನದಲ್ಲಿ ವಿಶಿಷ್ಟಾದ್ವೈತವನ್ನೂ, ಶ್ರೀಮದ್ವಾಚಾರ್ಯರು, 13ನೇ ಶತಮಾನದಲ್ಲಿ ದ್ವೈತವನ್ನೂ ಪ್ರತಿಪಾದಿಸಿದರು. ಆದರೆ ಮೊದಲಿಗೆ ನಿಸ್ತೇಜವಾಗಿ ಹೋಗಿದ್ದ ವೈದಿಕ ಮತಕ್ಕೆ ಜೀವ ಕೊಟ್ಟು ನಿಲ್ಲಿಸಿದ್ದು ಶಂಕರರು ಎಂಬುದನ್ನು ತತ್ವಶಾಸ್ತ್ರಾಧ್ಯಯನಕ್ಕೆ ತೊಡಗುವವರೆಲ್ಲರೂ ನೆನಪಿಡಬೇಕಾದುದಗತ್ಯ.

ಯಾವ ವೇದ, ಉಪನಿಷತ್ತು, ಗೀತೆ, ಬ್ರಹ್ಮಸೂತ್ರಗಳನ್ನು ಜನ ಮರೆತೇ ಹೋಗಿದ್ದರೋ, ಅವನ್ನು ತಮ್ಮ ತತ್ವಪ್ರತಿಸಾಧನೆಗೆ ಆಧಾರವೆಂದು ಶಂಕರರು ಸಾರಿದ್ದರಿಂದ ಅವು ಮತ್ತೆ ಚಾಲ್ತಿಗೆ ಬರುವಂತಾಯಿತು. ಆಚಾರ್ಯತ್ರಯರ ಪ್ರತಿಪಾದನೆಗಳನ್ನು ಸುಚಯಿಸಲು ಒಂದು ಗ್ರಂಥವೇ ಬೇಕಾಗುತ್ತದೆ. ಅತ್ಯಂತ ಸಂಕ್ಷಿಪ್ತವಾಗಿ ಸೂತ್ರರೂಪದಲ್ಲಿ ಆ ಮೂರು ಪಾದಗಳನ್ನೂ ಈ ಲೇಖನದಲ್ಲಿ ತಿಳಿಸಲು ಪ್ರಯತ್ನಿಸಿದ್ದೇನೆ.

ಅದ್ವೈತ ಮತ್ತು ದ್ವೈತ

"ಬ್ರಹ್ಮ ಸತ್ಯಂ ಜಗನ್ಮಿಥ್ಯೇ" ಇದು ಶಂಕರಾಚಾರ್ಯರ ವಿವೇಕ ಚೂಡಾಮಣಿ ಎಂಬ ಕೃತಿಯಲ್ಲಿನ ಒಂದು ಸೂತ್ರ. ದೇಹ, ಬುದ್ಧಿ, ಮನಸ್ಸುಗಳ ಸಂಪರ್ಕ ಮತ್ತು ಅನುಭವಕ್ಕೆ ಬರುವುದೆಲ್ಲವೂ ಮಿಥ್ಯೆ; ಇವೆಲ್ಲವನ್ನೂ "ಜಗತ್" ಎಂಬ ಶಬ್ದದಲ್ಲಿ ಅಳವಡಿಸಬಹುದು. "ಜ" ಎಂದರೆ ಹುಟ್ಟು. "ಗತ್" ಎಂದರೆ ಗತಿಸುವುದು. ಇದು ಶಾಶ್ವತವಲ್ಲ; ಆದ್ದರಿಂದಲೇ ಸತ್ಯವಲ್ಲ; ಎಂದರೆ ಮಿಥ್ಯೆ; ಹಾಗಾದರೆ ನಾವು ಅನುಭವಿಸುವ ಸಾವು, ನೋವು, ನಲಿವು ಕಾರ್ಪಣ್ಯವೆಲ್ಲವೂ ಬರೀ ಸುಳ್ಳೆಂದು ಕೂಡುವುದು ಒಂದು ತತ್ವವೆನಿಸೀತ? ಹಾಗಲ್ಲ. ಬ್ರಹ್ಮ ಸತ್ಯತ್ವದ ಸಾಕ್ಷಾತ್ಕಾರವಾದವನಿಗೆ ಜಗತ್ತು ಮಿಥ್ಯೆಯೇ ಹೊರತು, ಜಗತ್ತಿಗೆ ಅಂಟಿಕೊಂಡು ಬ್ರಹ್ಮವೇ ಮಿಥ್ಯೆ ಇರಬಹುದೇನೋ ಎನ್ನುವ ಸ್ಥಿತಿಯಲ್ಲೇ ಇದ್ದುಕೊಂಡು ಜಗನ್ಮಿಥ್ಯೆ ಎಂಬುದರಲ್ಲಿ ಅರ್ಥವಿಲ್ಲ. ಕನಸು ಕಾಣುವಾಗ ಕನಸಿನ ಸಂಗತಿಗಳು ವಾಸ್ತವವೆಂದು ತೋರುವಂತೆ, ಸಾತ್ಕಾರವಾಗದಿರುವ ಈ ಸ್ಥಿತಿಯಲ್ಲಿ ಜಗತ್ತು ಸತ್ಯವೆಂದು ಕಾಣುತ್ತದೆ. ಇದು ಮಾಯೆಯ ಚಮತ್ಕಾರ. ಹೀಗೆ ಅದ್ವೈತಕ್ಕೆ ಮಾಯವಾದ ಪೂರಕ. ಜೀವಿಗಳು ಜೀವನ್ಮುಕ್ತರಾಗಲು ಗೆಲ್ಲಬೇಕಾದುದು ಈ ಮಾಯೆಯನ್ನೇ. ಜೀವಬ್ರಹ್ಮಗಳು ಬೇರೆ ಬೇರೆ ಅಲ್ಲವೆಂಬುದೇ ಅದ್ವೈತ.

ಛಾಂದೋಗ್ಯೋಪನಿಷತ್ತಿನಲ್ಲಿ ಉದ್ದಾಲಕನು, ತನ್ನ ಮಗ ಶ್ವೇತಕೇತುವಿಗೆ "ಸ ಆತ್ಮಾ ತತ್ವಮಸಿ" ಎಂದು ಬೋಧಿಸುತ್ತಾನೆ. ಶಂಕರರ ಪದ್ಧತಿಯಲ್ಲಿ ಇದರ ಪದವಿಭಾಗವನ್ನು ಸಃ + ಆತ್ಮಾ + ತತ್ + ತ್ವಂ + ಅಸಿ, ಎಂದೂ ವಿಂಗಡಿಸಿದ್ದಾರೆ. ಆ ಸರ್ವೋತ್ತಮ ಆತ್ಮ ತತ್ವವೇ ನೀನು ಎಂದು ಮೊದಲನೇ ಬಗೆಯ ಅರ್ಥ. ಆ ಸರ್ವೋತ್ತಮ ತತ್ವವು ಆತ್ಮ; ನೀನು ಅದಲ್ಲ ಎಂದು ಎಂದು ಎರಡನೆ ಬಗೆಯ ಅರ್ಥ.

Sri Vidyabharathi Book Centre, Sringeri

CC-O. In Public Domain. Digitized by eGangotri

"ಅಹಂ ಬ್ರಹ್ಮಾಸ್ಮಿ" ಎಂಬುದೂ ಒಂದು ಉಪನಿಷತ್ತಿನ ಮಹಾವಾಕ್ಯ. ನಾನು ಬ್ರಹ್ಮವೇ ಹೊರತು, ದೇಹ ಮನಸ್ಸು ಬುದ್ಧಿಗಳ ಗಂಟು ಅಲ್ಲ ಎಂಬ ಈ ಮಾತನ್ನು ಶಂಕರರು ಒತ್ತಿ ಹೇಳಿದ್ದಾರೆ. ಮಧ್ವರು ಅತತ್+ತ್ವಂ+ಅಸಿ ಎಂಬ ಆಧಾರದ ಮೇಲೆ ಜೀವನೇ ಬ್ರಹ್ಮನಲ್ಲ; ಬ್ರಹ್ಮನ ಅಂಶವೂ ಅಲ್ಲ; ಏಕೆಂದರೆ ಬ್ರಹ್ಮನ ಅಂಶವೂ ಬ್ರಹ್ಮವೇ ಆಗಿರಬೇಕು. ಜೀವನು ಬ್ರಹ್ಮದ ಅಂಶದ ಪ್ರತಿಬಿಂಬವಷ್ಟೇ. ಜೀವನ್ಮುಕ್ತಿಪಡೆದಾಗಲೂ ಜೀವವೇ "ಬ್ರಹ್ಮ"ವಾಗದು. ಹೀಗೆ ಅದ್ವೈತದ ಬ್ರಹ್ಮ ಕಲ್ಪನೆ, ಬ್ರಹ್ಮನ ಸರ್ವೋತ್ತಮತ್ವಕ್ಕೆ ಬಾಧಕವೆಂದು ಸಂಕ್ಷಿಪ್ತವಾಗಿ ದ್ವೈತ ಸಿದ್ಧಾಂತ. ಇವೆರಡರ ಪರವಾಗಿಯೂ ತರ್ಕಿಸಲು, ವಾದಿಸಲು, ಬೇಕಾದಷ್ಟು ಸಾಮಗ್ರಿಯಿದೆ. ಇದು ಮುಗಿಯುವ ನಮೂನೆಯ ತರ್ಕವಲ್ಲ.

ಶ್ರೀ ರಾಮಾನುಜರ ವಿಶಿಷ್ಟಾದ್ವೈತ

ಶಂಕರರ ಪ್ರಕಾರ ಬ್ರಹ್ಮನು ನಿರ್ಗುಣಿ ಅಥವಾ ಗುಣಾತೀತ. ಮಧ್ವರ ಪ್ರಕಾರ ಬ್ರಹ್ಮನು ಗುಣಪೂರ್ಣ, ಅಥವ ಇಂಗ್ಲಿಷಿನ "ಆಲ್ ಮೈಟಿ". ರಾಮಾನುಜರ ವಿಶಿಷ್ಟಾದ್ವೈತದಲ್ಲಿ ಬ್ರಹ್ಮನಿಗೆ ಹಲವು ವಿಶಿಷ್ಟ ಗುಣಗಳುಂಟು. ಈ ಬ್ರಹ್ಮ ಜಗತ್ಕಾರಣನು ಎಂದು ಇಲ್ಲಿಯು ವಾದ. ಬ್ರಹ್ಮನು ಸಗುಣಿ ಎಂದರೆ ಬ್ರಹ್ಮನ ನಿರ್ವಿಕಾರತ್ವಕ್ಕೆ ಬಾಧಕವಲ್ಲವೆ? ಈ ಆಕ್ಷೇಪಣೆಗೆ ವಿಶಿಷ್ಟಾದ್ವೈತದ ಸಮಾಧಾನ ಹೀಗಿದೆ :

"ಸತ್ಯಂ, ಜ್ಞಾನಂ, ಅನಂತಂ, ಬ್ರಹ್ಮ" ಸತ್ಯ, ಜ್ಞಾನ, ಅನಂತತೆಗಳೆಂಬ ಗುಣಗಳನ್ನು ಬ್ರಹ್ಮನು ಹೊಂದಿದ್ದಾನೆ. ಈ ದೇಹ ನನ್ನದಾಗಿರುವಂತೆ ಈ ಗುಣಗಳು ಬ್ರಹ್ಮನವು. ದೇಹವೇ ನಾನಾಗಿರಲು ಹೇಗೆ ಸಾಧ್ಯವಿಲ್ಲವೋ. ಹಾಗೆಯೇ ಈ ಗುಣಗಳೇ ಬ್ರಹ್ಮವಲ್ಲ. ಸಾಗರದಲ್ಲಿ ಮೀನುಗಳಿದ್ದಂತೆ ಈ ಗುಣಗಳು ಬ್ರಹ್ಮನಲ್ಲಿವೆ. ಮೀನುಗಳೇ ಹೇಗೆ ನೀರು ಅಥವಾ ಸಾಗರವಾಗಲಾರದೋ ಅಂತೆಯೇ ಈ ಗುಣಗಳೇ ಬ್ರಹ್ಮ ಆಗದು. ಇದು ವಿಶಿಷ್ಟಾದ್ವೈತ ರೀತಿಯ ಬ್ರಹ್ಮ ವ್ಯಾಖ್ಯಾನ.

"ದೈವಾಧೀನಂ ಜಗತ್ಸರ್ವಂ" ಸಕಲ ಜಗತ್ತೂ ಬ್ರಹ್ಮನ ಅಧೀನ, ಎಂದಮೇಲೆ, "ಸರ್ವಂ ಖಲ್ವಿದಂ ಬ್ರಹ್ಮ" ಎಲ್ಲವೂ ಬ್ರಹ್ಮ ಮಯವೇ ಆಗಿದೆ ಎಂಬುದು ಹೇಗೆ? ಹೀಗೆ ರಾಮಾನುಜರು ತಮ್ಮ ಮೊದಲ ಗುರು ಯಾದವಪ್ರಕಾಶರೊಡನೆ ತರ್ಕಿಸಿ ಭಿನ್ನಾಭಿಪ್ರಾಯ ಹೊಂದಿದರು.

ಉಪನಿಷತ್ಕಾಲದ ಜ್ಞಾನ ಪ್ರಾಧಾನ್ಯತೆಯನ್ನು ಎತ್ತಿ ಹಿಡಿದ ಶಂಕರರು ಪುರಾಣಗಳಿಗೆ ಪ್ರಾಮುಖ್ಯತೆ ನೀಡಲಿಲ್ಲ. ಪುರಾಣಗಳಿಗೆ ಮಧ್ವರು ಪ್ರಮಾಣಗಳ ಸ್ಥಾನ ನೀಡಿದಂತೆ ರಾಮಾನುಜರು ತಮಿಳಿನ ದ್ರಾವಿಡ ಪ್ರಬಂಧಗಳನ್ನು ಪ್ರಮಾಣಗಳೆಂದು ಸ್ವೀಕರಿಸಿ ಅವನು. ವೇದದ ಮಟ್ಟಕ್ಕೆ ಏರಿಸಿದರು. ಅವರ ಭಾಷ್ಯ ವ್ಯಾಖ್ಯಾನಗಳಲ್ಲೂ ಭಕ್ತಿ ಪ್ರಪತ್ತಿಗಳಿಗೆ ಪ್ರಾಧಾನ್ಯ ಹೆಚ್ಚು, ಮಧ್ವಾಚಾರ್ಯರು ಕನ್ನಡವನ್ನು ಸಂಸ್ಕೃತಕ್ಕೆ ಹತ್ತಿರ ತಂದು ಪಂಚದ್ರಾವಿಡ ಭಾಷೆಗಳಲ್ಲೊಂದಾದ ಕನ್ನಡದ ದ್ರಾವಿಡತ್ವವನ್ನು ಕುಗ್ಗಿಸಿ ಕನ್ನಡಕ್ಕೆ ಸಂಸ್ಕೃತದ ಛಾಯೆಯನ್ನು ಕೊಟ್ಟರು. ಆದರೆ ರಾಮಾನುಜರು. ಬುದ್ಧರು ತಮ್ಮ ಕಾಲದ ಜನ ಸಾಮಾನ್ಯರ ಭಾಷೆಯಾದ ಪಾಳಿಯಲ್ಲಿ ಧರ್ಮ ಬೋಧನೆ ಮಾಡಿದಂತೆ ತಮ್ಮ ದೇಶ ಭಾಷೆಯಾದ ತಮಿಳಿನಲ್ಲಿ ತಮ್ಮ ತತ್ವ ಪ್ರಚಾರ ಮಾಡಿ ವೈದಿಕ ಜ್ಞಾನವನ್ನು ತಮಿಳಿನಲ್ಲಿ ಇಳಿಸಿದರು. ರಾಮಾನುಜರ ಕಾಲವಾದ ಹತ್ತನೇ ಶತಮಾನದಲ್ಲಿ ಸಂಸ್ಕೃತಕ್ಕೆ ಇಂದಿನಂತೆ ಸ್ವತಂತ್ರ ಲಿಪಿ ಇಲ್ಲದೆ ಆಯಾ ಪ್ರದೇಶದಲ್ಲಿ ರೂಢಿಯಲ್ಲಿದ್ದ ಲಿಪಿಯನ್ನೇ ಸಂಸ್ಕೃತಕ್ಕೂ ಉಪಯೋಗಿಸಲಾಗುತ್ತಿತ್ತು. ದಕ್ಷಿಣ ಭಾರತದಲ್ಲಿ ಸಂಸ್ಕೃತವನ್ನು ತಮಿಳನ್ನು ಹೋಲುವ ಲಿಪಿಯಲ್ಲಿ ಬರೆಯುತ್ತಿದ್ದರೆಂಬುದಕ್ಕೆ ಸಹಾಯಕವಾದ ಶಿಲಾಶಾಸನಗಳಿವೆ. ವಿಶಿಷ್ಟಾದ್ವೈತ ಸಂಪ್ರದಾಯಕೂ ತಮಿಳಿಗೂ ಇರುವ ಬಾಂಧವ್ಯಕ್ಕೂ ರಾಮಾನುಜರ ಆಧ್ಯಾತ್ಮ ಕಾರ್ಯವೆಲ್ಲ ತಮಿಳಿನಲ್ಲೇ ಪ್ರಸಾರವಾದದ್ದಕ್ಕೂ ಇದೂ ಒಂದು ಕಾರಣ.

ವಜ್ರವು ಒಂದೊಂದು ಪಾರ್ಶ್ವದಿಂದ ಒಂದೊಂದು ಹೊಳಪನ್ನು ಹೊಮ್ಮಿಸುವಂತೆ ವೇದ, ಉಪನಿಷತ್ತುಗಳು ಒಬ್ಬೊಬ್ಬ ಭಾಷ್ಯಕಾರನಿಗೆ ಒಂದೊಂದು ರೀತಿ ಕಂಡಿದೆ ಶಂಕರ, ಮಧ್ವ ರಾಮಾನುಜರು, ಆಚಾರ್ಯತ್ರಯರೆಂದು ಪ್ರಖ್ಯಾತರಾಗಿದ್ದಾಗ್ಯೂ ಇನ್ನೂ ಅನೇಕ ಭಾಷ್ಯಗಳಂಟು

Sri Vidyabharathi Book Centre, Sringeri

CC-O. In Public Domain. Digitized by eGangotri

ದ್ವೈತ ಸಿದ್ದಾಂತಕ್ಕೆ ಮೊದಲೇ ಇಪ್ಪತ್ತೊಂದು ಭಾಷ್ಯಗಳು ರಚಿತವಾಗಿದ್ದುವು. ಅದ್ವೈತ, ದ್ವೈತ, ವಿಶಿಷ್ಟಾದ್ವೈತ ಎಂದು ಒಂದು ಬಗೆಯ ಪಂಥಗಳು. ನ್ಯಾಯ, ವೈಶೇಷಿಕ, ಸಾಂಖ್ಯ, ಪೂರ್ವ ಮೀಮಾಂಸ ಉತ್ತರ ಮೀಮಾಂಸ ಎಂಬುದು ಬೇರೊಂದು ಬಗೆಯ ಪಂಥಗಳು. ಬ್ರಹ್ಮದ ಮಾತಿರಲಿ ಚೇತನವಸ್ತು ಎಂಬುದೇ ಇಲ್ಲವೆಂಬ ಚಾರ್ವಕ ಸಿದ್ಧಾಂತವೂ ಇದೆ.

ಈ ಜಿಜ್ಞಾಸೆಯಲ್ಲಿ ನಮ್ಮ ಪೂರ್ವಿಕರು ಎಷ್ಟು ಕಾಳಜಿ ವಹಿಸಿದ್ದರೆಂದರೆ ವಿದ್ವತ್ತನ್ನು ವಿಶದೀಕರಿಸಲು ಅನೇಕ ಸೂತ್ರಗಳನ್ನೂ ಭಾಷ್ಯಗಳನ್ನೂ ಟೀಕೆಗಳನ್ನೂ ಮತ್ತೆ ಭಾಷ್ಯ ಟೀಕೆಗಳಿಗೆ ವ್ಯಾಖ್ಯಾನಗಳನ್ನೂ ಅನುವ್ಯಾಖ್ಯಾನಗಳನ್ನೂ ಬರೆದು ಬೆಳೆಸಿದ್ದಾರೆ.

ಈ ಜಿಜ್ಞಾಸುಗಳಿಗೆ ವಿಶೇಷ ಜ್ಞಾನ ದಾಹವೂ, ತತ್ವ ಪ್ರತಿಪಾದನೆಯಲ್ಲಿ ಅತೀವ ಆವೇಶವೂ ಇತ್ತೆನ್ನಲು 'ತರ್ಕಕಾಂಡವ' 'ತತ್ವ ಪ್ರಕಾಶಿಕಾ' ಎಂಬ ಗ್ರಂಥಗಳ ಮತ್ತು ಅನುಮಾನ ತೀರ್ಥರೆಂಬ ಗ್ರಂಥಕರ್ತರೊಬ್ಬರ ಹೆಸರುಗಳೇ ಸಾಕ್ಷಿ. ಹಾಗಾದರೆ ಸತ್ಯವಾವುದು ? ಅದನ್ನು ತಿಳಿಯಲು ವೇದೋಪನಿಷತ್ತುಗಳನ್ನು ವಸ್ತುನಿಷ್ಠವಾಗಿ ಪುನಃ ಪುನಃ ಪಠಿಸಿ ಅಧ್ಯಯನ ಮಾಡುವುದೊಂದೇ ಮಾರ್ಗ.

Sri Vidyabharathi Book Centre, Sringeri

CC-O. In Public Domain. Digitized by eGangotri

SRI. SRI. SRI. ABHINAVA VIDYA THIRTHA MAHASWAMIGAL

A brief Article by, Gurubhakta Choodarathnam,
M.L. Vasudeva Murtoy, Ex. MLC.
Chikmagalur-577 101.

SRI. SRI. SRI. ABHINAVA VIDYA THIRTHA MAHASWAMIGAL who attained 'Brahma Nirvana' recently, was the 35th in tne parampara commecing from Shri. Shri. Shri. Sureshwaracharya, known as Mandana Mishra before taking up Sanyas at the hands of the great SRI. ADI SHANKARACHARYA, to adore the SHRI, SHARADA PEETHA at Sringeri. This peetha has the distinction of having many erudite Scholars, few among them being SRI. VIDYARANYA, who was also the founder of the famous Vijayanagar Empire, besides being the author of many great books on Sri. Adi Shankara's Adwaita Siddhanta. Also, on the same Peetha Shri, Narasimha Bharathi Mahaswamigal dispensed spirItual Solace and also located the original birth place at Kalady of the great ADI SHANKARACHARYA and built monastry there. His immediate successor on the peetha was the renowned Shri. CHANDRASHEKARA BHARATHI SWAMIGAL, who was popularly known as the "LIVING GOD". It was Shri. Shri. Shri. CHANDRASHEKARA BHARATHI SWAMIGAL who consecrated the PRASANNA GANAPATHY TEMPLE in the heart of Chikmagalur Town, built by late SRI. M. LACHIASETTY, the father of the writer of this article. Shri, Shri, Shri, VIDYATHIRTHA MAHASWAMIGAL was the successor Peethadhipathi to Sri. Sri. Sri. Chandrashekara Bharathi Mahaswamigal.

It was a previlege and an honour to this writer to clsely sit at the revered feet of Shri Shri, Shri. Vidyathirtha Mahaswamigal and bask in the sunshine of His holy grace. Shri, Shri, Shri, Mahaswamigal waa not only a profound Schochar of Vedic lore but also a comforting refuge for mundane afflictions. To hale the glorious memory of the great Adwaita Kesari SHRI. ADI SHANKARACHARYA, He started a Sanskrit College at the holy birth place of the great Acharya—Kalady. He caused for starting numerous "SHANKARA MUTTS all over the country to propagate Adwaita Philosophy as enunciated by the great Acharya, and also Sanskrit Schools for promoting sanskrit learning and Vedas. Often, He was arranging for holding discussions and lectures on different themes of Vedanta knowledge by inviting Scholars from far and wide and rewarding them with sacred momentos, Even many foreigners used to visit Sringeri to drink at this fountain

Sri Vidyabharathi Book Centre, Sringeri

CC-O. In Public Domain. Digitized by eGangotri

of Vedanta philosophy. HE also evinced interest in the mundane welbeirg of HIS deciples by starting a First Grade College and a well equiped modern Hospital at Sringeri.

Shri, Shri, Shri. VIDYATHIRTHA SWAMIJIS SPIRITUAL rule was a golden era in the annuals of Sringeri Peetha, After the great Adi, Shankaracharya, it was only Sri. Sri. Sri. Vidyathirtha Swamigal that travelled over the whole length and breadth of this country more than once to propagate ADWAITA SIDDANTA, It was given only to Sringeri Peetha to remain totally aloof from the Country's political life during this Holy Seer's rule, and it was thus obvious that country's political leaders looked of HIM for guidance in times of political Strife and confusion. The late Prime Minister Smt. Indira Gandhiji had a high regard to this Peetha and looked up at Sri. Vidyathirtha Swamigal for guidance and blessings in many a trying circumstances in her political career.

HIS successor, Sri. Sri. Sri. Bharathi Teertha Mahaswamigal is also a very learned Peetadhipathi.

JAYATHU JAYATHU SHASVAD
DAKSHINAMNYAYA PEETHAM
OM SHANTI SHANTI SHANTI
HARI OM

OO

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಶೃಂಗೇರಿ ಶ್ರೀ ಶ್ರೀ ಶ್ರೀಗಳವರ ಸಮ್ಮುಖದಲ್ಲಿ ಕೆಲವು ರಸನಿಮಿಷಗಳು

★

ಲೇಖಕರು : ಶ್ರೀ ಎಂ. ಜಿ. ನಾಗರಾಜರಾವ್ ಎಂ.ಎ. ಬಿ.ಎಸ್ಸಿ., ಬಿ.ಎಡ್., (ನಾ.ಮು.ಗಂ.)

ಭಾವಚಿತ್ರದೆದುರು

'ಭೃತಸ್ಯ ಭೃತಸ್ಯ ಭೃತ್ಯ' 'ದಾಸರದಾಸರದಾಸರ ಸೇವಕನು ನಾನು' ಮುಂತಾದ ಉದ್ಗಾರಗಳಲ್ಲಿ ನೇರವಾಗಿ ದೇವರ ಸದ್ಗುರುವಿನ ದಾಸನಾಗಲು ಸಾಧ್ಯವಾಗದಿದ್ದರೆ, ಅವರ ದಾಸರ ದಾಸರ ದಾಸನಾದರೂ ಪುಣ್ಯವೇ ಎನ್ನುವ ಭಾವ ಅಡಗಿದೆ. ಅಂತೆಯೇ ಸದ್ಗುರುವಿನ ನೇರ ದರ್ಶನ ಆಗುವುದು ಮಹಾ ಪುಣ್ಯವೇ ; ಅದು ಸಾಧ್ಯವಿಲ್ಲದಿರುವಾಗ ಅವರ ದರ್ಶನ ಭಾವ ಚಿತ್ರದಲ್ಲೋ ದೂರದರ್ಶನದಲ್ಲೋ ಪತ್ರಿಕೆಯಲ್ಲೋ ಆದರೂ ಅದು ಪುಣ್ಯವೇ. ಅವರ ಅಪ್ರತ್ಯಕ್ಷ ದರ್ಶನವೂ ಮುಂದಿನ ಪ್ರತ್ಯಕ್ಷ ದರ್ಶನಕ್ಕೆ ನಾಂದಿಯಾಗಿ, ಪ್ರಚೋದಕವಾಗಿ ನಿಲ್ಲುತ್ತದೆ.

ಅಂದು ಬೆಳಿಗ್ಗೆ ಎದ್ದವನೇ ಹೊಸದಾಗಿ ಬಂದಿದ್ದ ಪ್ರಜಾಮತ' ವಾರಪತ್ರಿಕೆಯ ಮುಖಪುಟವನ್ನು ಕಂಡೆ. ಪೂರ್ಣಪ್ರಮಾಣದ ಗಾತ್ರದಲ್ಲಿ ಶ್ರೀ ಶ್ರೀ ಚಂದ್ರಶೇಖರ ಭಾರತೀ ಮಹಾಸ್ವಾಮಿಗಳವರ ಭಾವಚಿತ್ರವನ್ನು ಕಂಡು ಭಯಭಕ್ತಿಗಳಿಂದ ವಂದಿಸಿದೆ. ಆ ಮುಖಪುಟದ ಮುಖಭಾವ ಎಂಥವರನ್ನೂ ಭಾವಮುಗ್ಧರನ್ನಾಗಿ ಮಾಡುವಂತಿತ್ತು. ಆ ಮುಖದಲ್ಲಿ ಏನೋ ವಿಶೇಷವಾದ ಆಕರ್ಷಣೆ, ದೈವೀವರ್ಚಸ್ಸು ತುಂಬಿ ತುಳುಕಾಡುತ್ತಿತ್ತು. ನನಗೆ ಬಹಳಕಾಲದ ಆಸೆ ಒಂದಿತ್ತು : ಶ್ರೀ ಶ್ರೀಗಳವರನ್ನು ಹಾಗೂ ತುಂಗಾ ತೀರದ ಶೃಂಗೇರೀ ಮಠವನ್ನೂ ಕಂಡು ಪುನೀತನಾಗಬೇಕೆಂದು. ನಮ್ಮ ತೀ|| ತಂದೆಯವರು ಮತ್ತು ಮಾತೃಶ್ರೀಯವರೂ ಬಾಲಕರಿಗಾಗಿ ಶ್ರೀ ಶಂಕರವಿಜಯವನ್ನು ಬರೆದು, ಅದನ್ನು ಪೂಜ್ಯ ಶ್ರೀ ಶ್ರೀಗಳ ಅವಗಾಹನೆಗೆ ತಂದು ಆಶೀರ್ವಾದ ಪಡೆಯುವ ಸಲುವಾಗಿ ಶೃಂಗೇರಿ ಸಂಸ್ಥಾನಕ್ಕೆ ಹೋಗಿ ಬಂದು ಅಲ್ಲಿನ ಪ್ರಕೃತಿ ಸೌಂದರ್ಯವನ್ನೂ, ಸಾತ್ವಿಕ ಪರಿಸರವನ್ನೂ ವಿವರಿಸಿ ವಿವರಿಸಿ ಹೇಳಿದ ಮೇಲೆ ಆ ಆಸೆ ಇನ್ನಷ್ಟು ಬಲಗೊಂಡಿತ್ತು. ಆ ಆಸೆ ಈಡೇರಲೇ ಇಲ್ಲ. ಪೂಜ್ಯಪಾದರು ಜಲಸಮಾಧಿಯಾದ ಹಾಗೂ ಅವರ ಕರಕಮಲಸಂಜಾತರಾದ ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಸ್ವಾಮಿಗಳು ಪೀಠಾರೋಹಣ ಮಾಡಿದ ಭಾವಚಿತ್ರಗಳನ್ನು ಪತ್ರಿಕೆಗಳಲ್ಲಿ ನೋಡಿ ತೃಪ್ತಿಪಟ್ಟುಕೊಳ್ಳಬೇಕಾಯಿತು. ಅದೇ ಪತ್ರಿಕೆಯ ಒಳಪುಟಗಳನ್ನು ತೆರೆದು ನೋಡಿದಾಗ ನನ್ನ ಗೀತಕವನ ಅಕ್ಷರ ರಾಮಾಯಣವು ಅಚ್ಚಾಗಿತ್ತು. ನನ್ನ ಸಾಹಿತ್ಯ ಕೃಷಿಗೆ ಶ್ರೀಗಳವರ ಆಶೀರ್ವಾದ, ರಕ್ಷೆ ಇದೆ ಎಂದು ಭಾವಿಸಿ ಭಾವುಕನಾದೆ. ಬೆಂಗಳೂರಿನ ಶ್ರೀ ಶಂಕರಮಠಕ್ಕೆ ಹೋದಾಗ ಅಲ್ಲಿನ ಯತಿವರ್ಯರುಗಳ ತೈಲವರ್ಣಚಿತ್ರಗಳನ್ನು ಕಂಡಾಗ ಆಗುತ್ತಿದ್ದ ಅನುಭವವನ್ನು ಮೀರಿದ ಭಾವಾವೇಶವುಂಟಾಯಿತು. ನೇರವಾಗಿ ಹತ್ತಿರದಲ್ಲಿಯೇ ಇದ್ದ ಶಿವದೇವಾಲಕ್ಕೆ ಹೋಗಿ ಭಾವಾವೇಶದಿಂದ ಶಿವಲಿಂಗವನ್ನು ತಬ್ಬಿಕೊಂಡು ವಿಶಿಷ್ಟವಾದ ಆನಂದವನ್ನು ಅನುಭವಿಸಿದೆ. ಅದರ ನೆನಪು ಈಗಲೂ ನನ್ನನ್ನು ಆನಂದಗೊಳಿಸುತ್ತದೆ. ಭಾವಚಿತ್ರ ದರ್ಶನದಿಂದಲೇ ಇಂಥ ಪುಲಕ ಉಂಟಾಗುವುದಾದರೆ ಇನ್ನು ಸಾಕ್ಷಾತ್ ದರ್ಶನವಾದರೆ ! ಎಂದುಕೊಂಡೆ, ಆ ಸುದಿನಕ್ಕಾಗಿ ಕಾಯುತ್ತ ಕುಳಿತೆ.

ಅನುಭಾವ ಚಿತ್ತದಲ್ಲಿ

ಶೃಂಗೇರಿ ಬೆಂಗಳೂರಿಗೆ ಬಹಳ ದೂರವೇನಲ್ಲ. ಆದರೂ ವರ್ಷಗಳೇ ಕಳೆದರೂ ಶೃಂಗೇರಿಯ ದರ್ಶನದ ಲಾಭ ದೊರೆಯಲಿಲ್ಲ. ಎಲ್ಲಕ್ಕೂ ಕಾಲಯೋಗ ಉಂಟಲ್ಲ ! ಕನಸಿನಲ್ಲೇ ನನ್ನ ಕಲ್ಪನೆಯ ಶೃಂಗೇರಿಯನ್ನು ಅನೇಕ ಸಲ ಕಂಡೆ. ಅವರಿವರು ಹೇಳುವ ವರ್ಣನೆಗಳನ್ನು,

Sri Vidyabharathi Book Centre, Sringeri

CC-O. In Public Domain. Digitized by eGangotri

ಬ್ರಹ್ಮ ಜಿಜ್ಞಾಸೆ ಮಾಡತಕ್ಕದ್ದೇ ಅಲ್ಲವೇ ಎಂಬ ಸಂಶಯ ಬಂದಾಗ, "ಜಿಜ್ಞಾಸೆಗೆ ವಿಷಯವಾಗಿರುವ ಬ್ರಹ್ಮ ಜಿಜ್ಞಾಸುವಿನ ಆತ್ಮವೇ ಆಗಿರುವುದರಿಂದ ನಿಸ್ಸಂದಿಗ್ಧವಾಗಿದೆ. ಬ್ರಹ್ಮ ನಿತ್ಯಪ್ರಾಪ್ತವಾದ್ದರಿಂದ ಅದನ್ನು ತಿಳಿದುಕೊಳ್ಳುವುದರಿಂದ ಹೊಸದಾಗಿ ಆಗಬೇಕಾದ ಪ್ರಯೋಜನವೇನೂ ಇಲ್ಲ. ನಿಷ್ಪ್ರಯೋಜನವಾದ ಜಿಜ್ಞಾಸೆಯನ್ನು ಮಾಡಬೇಕೆನ್ನುವ ಅಧಿಕಾರಿಯೂ ಇರುವುದಿಲ್ಲ" ಎಂದು ಪೂರ್ವಪಕ್ಷ ಹೇಳುತ್ತದೆ. ಅದಕ್ಕೆ ಸಿದ್ಧಾಂತ ಹೀಗಿದೆ: "ಬ್ರಹ್ಮ ಆತ್ಮರೂಪದಿಂದ ಪ್ರಸಿದ್ಧನಾಗಿದ್ದರೂ ಆತ್ಮನು ದೇಹೇಂದ್ರಿಯ ರೂಪನೋ ಅದಕ್ಕಿಂತ ಬೇರೆಯಾಗಿ ಕರ್ತೃತ್ವ ಭೋಕ್ತೃತ್ವ ಉಳ್ಳವನೊ ಎಂಬ ಬಗ್ಗೆ ಮತಭೇದವಿದೆ. ಅದು ನಿತ್ಯಪ್ರಾಪ್ತವಾಗಿದ್ದರೂ ಅಜ್ಞಾನದಿಂದ ಅಪ್ರಾಪ್ತವಾದಂತೆ ಇದೆ. ಅದನ್ನು ಅರಿತರೆ ಮುಕ್ತಿ ದೊರಕುವುದೆಂದು ಶ್ರುತಿಯಲ್ಲಿ ಹೇಳಿದೆ. ಆದ್ದರಿಂದ ನಿತ್ಯಾನಿತ್ಯವಿವೇಕ. ಕರ್ಮ ಫಲದಲ್ಲಿ ವೈರಾಗ್ಯ, ಶಮಾದಿ ಷಟ್ಕ ಸಂಪತ್ತಿ ಇವುಗಳಿಂದೊಡಗೂಡಿದ ನಿತ್ಯವಾದ ಮುಕ್ತಿಯನ್ನು ಪಡೆಯಬೇಕೆಂದು ಅಪೇಕ್ಷಿಸುವವರು ಈ ಜಿಜ್ಞಾಸೆಗೆ ಅಧಿಕಾರಿಗಳು".

"ಜಗತ್ಕಾರಣ ವಾಕ್ಯದಲ್ಲಿ ಬ್ರಹ್ಮಲಕ್ಷಣವಿಲ್ಲ. ಏಕೆಂದರೆ ಪ್ರಧಾನ ಪರಮಾಣುಗಳು, ಅಥವಾ ಯಾವನಾದರೊಬ್ಬ ಜೀವ, ಜಗತ್ತಿಗೆ ಕಾರಣವಾಗಿರಬಹುದು. ಅಥವಾ ಸ್ವಭಾವದಿಂದಲೇ ಜಗತ್ತು ಹೀಗೆಯೇ ಇದ್ದುಕೊಂಡಿರಬಹುದು, ಅಲ್ಲದೆ ಜಗತ್ಕಾರಣತ್ವದಿಂದ ಬ್ರಹ್ಮಸ್ವರೂಪ ಗೊತ್ತುಪಡಿಸಿದಂತಾಗುವುಲ್ಲ" ಎಂದು ಪೂರ್ವಪಕ್ಷ. ಅದಕ್ಕೆ ಸಿದ್ಧಾಂತ ; ಅನೇಕ ಕರ್ತೃಭೋಕ್ತೃಗಳಿಂದ ಕೂಡಿರುವ ಈ ಜಗತ್ತಿಗೆ ಅಚೇತನವಾದ ಪ್ರಧಾನ ಮತ್ತು ಪರಮಾಣುಗಳಾಗಲೀ ಜೀವನಾಗಲಿ ಕಾರಣವೆಂದು ಕಲ್ಪಿಸುವುದು ಸರಿಯಲ್ಲ. ಗೊತ್ತಾದ ದೇಶ-ಕಾಲ-ನಿಮಿತ್ತಗಳನ್ನನುಸರಿಸಿ ಉಂಟಾಗುತ್ತಿರುವ ಕ್ರಿಯಾಫಲಗಳಿಗೆ ಆಶ್ರಯವಾದ ಈ ಜಗತ್ತು ಸ್ವಭಾವದಿಂದಲೇ ಹೀಗಿರುವುದೆಂದು ಊಹಿಸಲೂ ಆಗುವುದಿಲ್ಲ. ಜಗತ್ಕಾರಣತ್ವ ತಿಳಿಸುವ ಶ್ರುತಿಯಲ್ಲಿ, ಬ್ರಹ್ಮ ಆನಂದ ಸ್ವರೂಪ, ಸರ್ವಜ್ಞ, ಸರ್ವಶಕ್ತಿಯುತ, ನಿತ್ಯ ಶುದ್ಧ ಬುದ್ಧ ಮುಕ್ತ ಸ್ವಭಾವವಾಗಿದೆ ಎಂದು ಹೇಳಿರುವುದರಿಂದ ಬ್ರಹ್ಮಸ್ವರೂಪವೂ ವಾಕ್ಯದಿಂದ ನಿರ್ಣಯವಾಗುತ್ತದೆ."

ಬ್ರಹ್ಮಕ್ಕೆ ವೇದಕಾರಣತ್ವವನ್ನು ತಿಳಿಸಿ, ಅದರ ಸರ್ವಜ್ಞತ್ವವನ್ನು ಸ್ಥಿರಪಡಿಸಿದೆ ಬ್ರಹ್ಮವು ಇಂದ್ರಿಯ ಗೋಚರವಲ್ಲದ್ದರಿಂದ ಅದಕ್ಕೆ ಪ್ರತ್ಯಕ್ಷಾದಿಗಳು ಪ್ರಮಾಣವಲ್ಲ, ಶಾಸ್ತ್ರವೊಂದೇ ಪ್ರಮಾಣ ಎಂದು ಸಿದ್ಧಪಡಿಸಿದೆ.

ಶಾಸ್ತ್ರವು ಪ್ರವೃತ್ತಿ ನಿವೃತ್ತಿಗಳನ್ನೇ ಅಲ್ಲದೆ ಕೇವಲ ವಸ್ತುವನ್ನೂ ಹೇಳಬಹುದು. ವಸ್ತುವಿನ ಉಪದೇಶದಿಂದ ಪ್ರಯೋಜನವಿರಬೇಕೆಂಬ ನಿಯಮವಿದೆಯೇ ಹೊರತು, ವಸ್ತು ಕ್ರಿಯೆಗೆ ಅಂಗವಾಗಿರಬೇಕೆಂಬ ನಿಯಮವೇನಿಲ್ಲ, ಬ್ರಹ್ಮಜ್ಞಾನದಿಂದ ಅಜ್ಞಾನ ನಿವೃತ್ತಿಯಾಗಿ ಸದ್ಯೋಮುಕ್ತಿಯಾಗುವುದೆಂಬ ಮಹಾಪ್ರಯೋಜನವಿದೆ. ಶ್ರವಣದ ಜತೆಗೆ ಮನನ, ನಿಧಿಧ್ಯಾಸನಗಳನ್ನು ಉಪದೇಶಿಸಿದ್ದರೂ ಅವು ಬ್ರಹ್ಮಜ್ಞಾನಕ್ಕಾಗಿಯೇ ವಿಹಿತವಾಗಿವೆ. ಜ್ಞಾನ ಬಂದ ಮೇಲೆ ಸಂಸಾರವು ಇರುವುದೇ ಇಲ್ಲವಾದ್ದರಿಂದ ಜ್ಞಾನವು ನಿಷ್ಪ್ರಯೋಜನವೆಂದು ಹೇಳುವುದಕ್ಕಾಗುವುದಿಲ್ಲ.

ಶಾಸ್ತ್ರ ವಿಹಿತ ಕ್ರಿಯೆಗಳು ಪುರುಷವ್ಯಾಪಾರ ತಂತ್ರ. ಆದರೆ ಜ್ಞಾನ ಕ್ರಿಯೆಯಲ್ಲ. ಏಕೆಂದರೆ ಅದು ವಸ್ತುತಂತ್ರ.

ಶ್ರುತಿಯಲ್ಲಿ ಸಚ್ಛಬ್ದವಾಚ್ಯವಾಗಿರುವುದು ಚೇತನವಾದ ಬ್ರಹ್ಮವೇ, ಗುಣಗಳಿಂದ ಕೂಡಿರುವ ಜಡವಾದ ಪ್ರಧಾನವಲ್ಲ.

ಆದಿ ಶಂಕರರ ಪೂರ್ವದಲ್ಲಿ ಈ ಮೊದಲು ತಿಳಿಸಿದ ಆಚಾರ್ಯಪ್ರಮುಖರಲ್ಲದೆ, ಇತರ ಕೆಲವು ಅದ್ವೈತಾಚಾರ್ಯರುಗಳು ಇದ್ದರೆಂಬುದು ಭಗವತ್ಪಾದರ ಭಾಷ್ಯದಲ್ಲಿ ಸೂಚಿತವಾಗಿದೆ. ಅವರುಗಳ ಗ್ರಂಥಗಳು ಉಪಲಬ್ಧವಿಲ್ಲದ್ದರಿಂದ, ದೊರೆತಿರುವ ಈ ಸೂಚನೆಗಳಿಂದಲೇ ಅವರು ಪ್ರತಿಪಾದಿಸುತ್ತಿದ್ದ ಅದ್ವೈತದ ಸ್ವರೂಪವನ್ನು ಗ್ರಹಿಸಬೇಕಾಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅವರುಗಳಲ್ಲಿ ದ್ರವಿಡಾಚಾರ್ಯರೆಂಬುವರನ್ನು ಆಗಮವಿದರೆಂದೂ ಸಂಪ್ರದಾಯಬಲ್ಲವರೆಂದೂ ಭಾಷ್ಯದಲ್ಲಿ ಹೊಗಳಿದೆ. ಅವರು "ಆತ್ಮನಲ್ಲಿ ಅಧ್ಯಾರೋಪಿತವಾಗಿರುವ ಧರ್ಮಗಳನ್ನು ನಿವೃತ್ತಿ ಮಾಡುವುದರಿಂದಲೇ ಶಾಸ್ತ್ರಕ್ಕೆ ಪ್ರಾಮಾಣ್ಯ" ಎಂದೂ "ಸೃಷ್ಟಿಯನ್ನು ಹೇಳುವುದು ಆತ್ಮೈಕತ್ವವನ್ನು ತಿಳಿಸುವುದಕ್ಕೆ" ಎಂದೂ ತಿಳಿಸಿದ್ದಾರೆ.

ಬ್ರಹ್ಮನಂದಿ ಎಂಬ ವಾಕ್ಯಕಾರರು ವಿವರ್ತವಾದಿ ಎಂದು ಮಧುಸೂದನ ಸರಸ್ವತಿಗಳ ವಚನವಿದೆ.

"ಭಗವಾನ್ ಉಪವರ್ಷಃ" ಎಂದು ಶಬರ ಸ್ವಾಮಿಗಳಿಂದ ಕರೆಯಲ್ಪಟ್ಟ ಆಚಾರ್ಯ ಉಪವರ್ಷರು ಪೂರ್ವೋತ್ತರ ಮೀಮಾಂಸಗಳೆರಡಕ್ಕೂ ವಿವರಣೆಯನ್ನು ಬರೆದ ಅದ್ವೈತ ಸಂಪ್ರದಾಯದ ವೃತ್ತಿಕಾರರೆಂದು ಸೂತ್ರಭಾಷ್ಯದ "ಅತ ಏವ ಭಗವತಾ ಉಪವರ್ಷೇಣ ಪ್ರಥಮೇ ತನ್ತ್ರೇ ಆತ್ಮಾಸ್ತಿತ್ವಾಭಿಧಾನ ಪ್ರಸಕ್ತೌ ಶಾರೀರಕೇ ವಕ್ಷ್ಯಾಮಃ ಇತಿ ಉದ್ಧಾರಃಕೃತಃ" ಎಂಬ ವಚನದಿಂದ ತಿಳಿದುಬರುತ್ತದೆ.

ಇವರಲ್ಲದೆ ಹೆಸರು ತಿಳಿಸದೆ, ಅನೇಕ ವೃತ್ತಿಕಾರರಾದ ಅದ್ವೈತಿಗಳ ತಪ್ಪು ವಾದವನ್ನು ಸೂತ್ರಭಾಷ್ಯದಲ್ಲಿ ಖಂಡಿಸಲಾಗಿದೆ. ಅವುಗಳು : 1) ಉಪಾಸನಾವಿಧಿಗೆ ಶೇಷವಾಗಿರುವ ಬ್ರಹ್ಮವನ್ನು ಶಾಸ್ತ್ರಪ್ರಮಾಣ ತಿಳಿಸಿಕೊಡುತ್ತದೆ. 2) ಆನಂದಮಯನು ಪರಮಾತ್ಮನೇ. 3) ಒಂದು ಸಲ ಮಾಡಿದ ಶಾಸ್ತ್ರಶ್ರವಣಮಾತ್ರದಿಂದ ಬ್ರಹ್ಮಾತ್ಮ ಜ್ಞಾನವಾಗಲಾರವಾದ್ದರಿಂದ ಶಾಸ್ತ್ರಯುಕ್ತಿಗಳ ಅಭ್ಯಾಸವನ್ನು ಮಾಡಬೇಕೆಂದು ವಾದಿಸುತ್ತಿದ್ದ ಪ್ರಸಂಖ್ಯಾನವಾದ. 4) ದೇವಯಾನಮಾರ್ಗದಿಂದ ಹೋಗುವವರನ್ನು ಅಮಾನವ ಪುರುಷನು ಪರಬ್ರಹ್ಮದ ಬಳಿಗೆ ಕರೆದುಕೊಂಡು ಹೋಗುತ್ತಾನೆ ಎಂಬವರ ಪಕ್ಷ. 5) ಭೇದಾಭೇದವಾದಿಗಳ ಮತ.

ಈ ಮೇಲೆ ತಿಳಿಸಿದ ವೃತ್ತಿಕಾರರೆಲ್ಲರೂ ಮೋಕ್ಷದಲ್ಲಿ ಅದ್ವೈತಬ್ರಹ್ಮವನ್ನೇ ಜೀವನು ಪಡೆಯುತ್ತಾನೆ ಎನ್ನುವವರಾಗಿದ್ದರು.

ಭರ್ತೃಪ್ರಪಂಚ ಎಂಬವರು ದ್ವೈತಾದ್ವೈತಿಗಳು. ಮೋಕ್ಷದಲ್ಲಿ ಅದ್ವೈತವನ್ನೇ ಒಪ್ಪಿದವರು. "ಶರೀರವಿರುವಾಗ ಬ್ರಹ್ಮಸಾಕ್ಷಾತ್ಕಾರ ಪಡೆದುಕೊಳ್ಳುವುದು; ಸತ್ತ ಬಳಿಕ ಬ್ರಹ್ಮದಲ್ಲಿ ಲಯವಾಗುವುದು" ಎಂಬ ಎರಡು ಬಗೆಯ ಮೋಕ್ಷವನ್ನು ನಂಬಿದ್ದವರು.

ಆಶ್ಮರಥ್ಯ ಎಂಬುವರು ಜೀವಾತ್ಮನಿಗೂ ಪರಮಾತ್ಮನಿಗೂ ಅಭೇದವಿರುವಂತೆ ಭೇದವೂ ಇದೆ ಎಂದು ಹೇಳುತ್ತಿದ್ದರು. ಔಡುಲೋಮಿ ಎಂಬುವರು "ಜೀವನು ಈಗ ಪರಮಾತ್ಮನಿಗಿಂತ ಬೇರೆ; ಜ್ಞಾನಧ್ಯಾನಾದಿಗಳಿಂದ ಪರಮಾತ್ಮನಲ್ಲಿ ಅಭೇದವನ್ನು ಪಡೆಯುತ್ತಾನೆ" [ಅಮುಕ್ತೇ ಭೇದ ಏವ ಸ್ಯಾತ್ ಜೀವಸ್ಯ ಚ ಪರಸ್ಯ ಚ ವಿಮುಕ್ತೇತು ನ ಭೇದೋಽಸ್ತಿ ಭೇದಹೇತೋರಭಾವತಃ] ಎನ್ನುತ್ತಿದ್ದರು.

"ಪರಮಾತ್ಮನೇ ಜೀವರೂಪದಿಂದ ತೋರಿಕೊಳ್ಳುತ್ತಿದ್ದಾನಾದ್ದರಿಂದ ಜೀವಪರಮಾತ್ಮರಿಗೆ ಯಾವಾಗಲೂ ಅಭೇದವೇ ಇರುವುದು" ಎಂದು ಹೇಳುತ್ತಿದ್ದ ಕಾಶಕೃತ್ಸ್ನರ ಮತವೇ ಬಾದರಾಯಣರಿಗೆ ಸಮ್ಮತವೆಂದು ಭಗವತ್ಪಾದರ ಭಾಷ್ಯ ತಿಳಿಸುತ್ತದೆ.

ಹೀಗೆ ಕೆಲವು ಪೂರ್ವಾಚಾರ್ಯರುಗಳಿಂದ ಉಪದಿಷ್ಟವಾಗುತ್ತಿದ್ದ ಅದ್ವೈತದಲ್ಲಿದ್ದ ತಪ್ಪು ಸೂಚನೆಗಳನ್ನು ಪರಿಹರಿಸಿ, ತತ್ತ್ವವನ್ನು ಪ್ರಸ್ಥಾನತ್ರಯದ ಬಲವಾದ ಅಡಿಪಾಯದ ಮೇಲೆ ಸ್ಥಿರವಾಗಿ ನಿಲ್ಲಿಸಿ, ಸ್ಪಷ್ಟಪಡಿಸಿದ ಹಿರಿಮೆ ಭಗವತ್ಪಾದರಿಗೇ ಸಲ್ಲತಕ್ಕದ್ದು.

ಯೈರಿಮೇ ಗುರುಭಿಃ ಪೂರ್ವಂ ಪದವಾಕ್ಯ
ಪ್ರಮಾಣತಃ ।

ವ್ಯಾಖ್ಯಾತಾ ಸರ್ವವೇದಾನ್ತಾಸ್ತಾನ್ನಿತ್ಯಂ
ಪ್ರಣತೋಽಸ್ಮ್ಯಹಂ ॥

Sri Vidyabharathi Book Centre, Sringeri

CC-O. In Public Domain. Digitized by eGangotri

SRINGERI . . . Peep into the distant past

The forest hermitage is the cradle of spiritual thought and perfection in India. It was the home of sages, who with sense faculties introverted, realised the great truths of the Upanishadic teachings, which they passed on to their disciples In the dim past of history one such hermitage was on the banks of the Tunga in the midst of the plateau of the Western Ghats, now known as the Mysore Malnad, where lived the sage Vibhandaka, whose resting place a holy linga now marks His son was Rshyasrnga whose innocence of character is charmingly portrayed by Valmiki. Returning to his hermitage with his wife, Rshyasrnga spent his life in contemplation until his death. A curiously shaped linga. enshrined in the village of Kigga, a few miles from Sringeri, is now worshipped as the symbol of the perfection which Reshyasrnga attained after years of deep meditation.

Sringeri or Rshyasrngagiri, to give its full name, nestles amidst the enclosing hills on the banks of the meandering Tunga which, rising from the Varaha hill. flows towards the east to meet her sister stream Bhadra. Its situation in the doab of the Tunga and Bhadra justifies the title Tungabhadra-tira-vasi which the Acharyas of the Saradapitha have adopted.

When Sri Samkara Bhagavatpada reached this place in the course of his tours, a strange phenomenon met his eyes. A serpent with its outspread hood was protecting a frog from the scorching rays of the sun This place, Sri Samkara thought, was really a haven of peace. And he chose it to establish the first and the most renowned of his pithas, which has been and continues to be the seat of an unbroken line of apostolic suuccession.

SRI SAMKARA : THE VYAKHYANA PITHA

The age which witnessed the advent of Sri Samkara Bhagavatpada was one of spiritual and moral chaos. What the times needed was an integration of all thought so an to arrest the waning of the eternal principles of dharma, a message that would elevate life from its degrading dependence on sensory perceptions and the enjoyments they might bring. For this task the Essence (Aisvarya) of the Jnana aspect (the aspect of Sri Dakshinamurthi) of the Lord manifested on earth in the person of Sri Samkara.

DATE OF SRI SAMKARA

Sri Samkara's date has baffled scholars. Different dates ranging from 509 B.C. to the close of the eight or the beginning of the ninth century A. D. have been suggested.

The astronomical details given in Sri Samkara's horoscope would suggest A D.

Sri Vidyabharathi Book Centre, Sringeri

CC-O. In Public Domain. Digitized by eGangotri

805, in which year alone in the eight-ninth century the given combination of planenters is possible. An inscription from Cambodge belonging to the reign of Jayavarman II (A.D 878-887) mentions the royal guru Sivasoma 'who had learned all the sastras from Bhagavat Samkara'. Taking into consideration all the suggestion of scholars R. G. Bhandarkar, T. R. Chintamani, Rice J. F. Fleet, W. Logan, D. R. Bhandarkar, Max Muller A. A. Macdonald Buhler, Pathak and M, Barath, the period 788-820 A.D. seems to be the most acceptable.

There are several Samkara vijayas, and some of them are unreliable, having been composed to support partisan interests. Madhaviya Samkara vijaya is perhaps the most widely read. (This has been recently published by Ramakrishna with an exhaustive introduction by Swami Tapasyananda-Ed).

Sri Samkara and his disciples travelled all over the land, refuting false doctrines and purifying objectionable practices in the name of religion. He established maths in four places-in Sringeri in the South, in Badari in the north, in Dwaraka in the west and in Puri or Jagannatha in the east. He placed Sri Suresvaracharya at the head of the matha in Singeri. Sri Padmapada in Dwaraka, Sri to take Badri and Sri Hastamalaka in Puri. The establishment of these mathas indicates Sri Samkara's relisation of the physical and spiritual unity of India, and he wrote in Samskrit, the lingua franca of cultured India, which alone could appeal to all the intellectuals all over the land.

Sri Samkara has reconciled (samanvaya) the seemingly contradictory conclusions of the Upanishads. and in the integrated view that he has presented, the eternal, impersonal, Consciousness-Absolutue is the Brahman, the One without a second, without any of the three kinds of differences. By His power which is inscrutable (antrvachaniya) and called Maya or Avidya. He appears as the universe conditioned by time and space. ever changing and subject to causality. The Jiva is not different from the Absolute Brahman. but due to upadhis. appears to be different and subject to limitations. Once nescience goes. the conditioning factors-the upadhisvanish. and the Jiva is seen as one with the Brahman as taught in the Mahavakyas of the Upanishads. The knowledge of this oneness is moksha or liberation : Karma and bhakti help in the attainment of janana. and by themselves, cannot lead to final illumination : they must not, however be neglected.

It is not all that can realise the Formless Absolute. To them Sri Samkara says that the Supreme is both formless and with form ; formless when viewed in itself and not in relation to the universe, and with form when thought of in relation to the world as its creator, sustainer and indweller. Sri Samkara purified the rituals of worship of Siva, Devi, Vishnu, Surya, Ganapati and Kumara. and composed devotional hymns on each of these divine forms to help the devotees. Because of his acceptance of the worship of the six divine forms, then in vogue, he is known as the Shanmatasthapaka.

In Sri Vidya are integrated jnana, bhakti, yoga and kerma, and this mode of worshipping the Devi constitutes the pra-

Sri Vidyabharathi Book Centre, Sringeri

CC-O. In Public Domain. Digitized by eGangotri

ctical sadhana of Advaita. It is but another form of Brahma Vidya, and because of its excellence, Sri Samkara introduced in the mathas the external worship of Sri Chakra together with the meditation on the mystic truth that it symbolies.

In the pitha in Sringeri. Sri Samkara installed Sarada. who is of the form of Brahma Vidya, over a Sri Chakra engraved on a rock on the left bank of the Tunga. He also gave to Sri Suresvaracharya, who was placed in charge of the pitha, a sphatika or crystal linga of Chandramaulisvara, and murti (idol) of Ganapati carved out of a small block of crystal with a patch of ruby in the middle [Ratnagarbha]. The table in the appendix gives particulars of the four mathas that Sri Samkara established in the cardinal points of the country.

Sri Vidyabharathi Book Centre, Sringeri

CC-O. In Public Domain. Digitized by eGangotri

SHANKARA THE GREATEST

By Sri M. SHIVA SHANKARA

The greatest of the Greats, although the pioneer of the Advaita philosophy, the unique Acharya Shankara has consented the upasana of the multiple Gods in the Material World. The upasana of Saguna Brahma alone is capable for our realisation of Nirguna Brahma. Hence, he has composed the most delightul stotras about the different gods such as Vishnu, Siva, Ganapati, Sakti, Lakshmi and the like. Plenty of Stotras are found in his name which are said to be more than six hundred in number. The Kavyas of Shankara are of great eminence. They are of nature of the sweet fruits of the inspiration and talent of inner-heart. His poetry undoubtedly, endowed with Rasa Bhavax, is an inexhaustible river, the treasurer of the gems of the resplendent meaning, and possible inauguration of access., There is a melody of music captivating the hearts of the listeners. Bhaja Govindam or Moha Mudrara is an example of this. Shankara giving the real pictu e of the life at every stage, a dvocated that the world is full of Maya and one should enter the abode of Brahma relinquishing everything. Shankara has stated that one can have the Salvation when he alive that is Jivamukti by having the contact of the pious which lessens the lust for the sensuous pleasures, leading to the removal of ignorance and utimately with the advent of determination of Mind ends in the state of Brahma. Thus, this is the immortal message Shankara has given in the verse, Satsangatve Nissangatvam''.... Jivanmukthi. Thus, the Swaralahari of this Stotra starts showering the essence of nectar on our ears and one can experience by being in the Ananda of a divine world marching very far from this duel world.

To discern the beauty of Shankara's poetry, one should make a thorough study of Samdaryalahari which contains hundred Slokas descrbing the beauty of the goddess Tripura Sundari. Even if studied from the view point of language, sentiment, Rasa, Alankara, Literature and Tantra, there is its unusual beauty in evey sloka. Both from the view point of literary beauty and Tantric Science this Stotra is Second to none. Here, Shankara prays as a kid would do to its mother, the Goddess Adisakti, Shankara Calls this very Sakti behind the Cosmos to be mother, the Goddess Adisakti. Shankara Calls this very Sakti behind the Cosmos to be mother, for anything can be achieved by kind only with its mother eversince it cames to this World from its mother eversince it comes to this World from her womb The First Sloka narrates Brahma, Vishnu and Siva have in their possession her Sakti., She herself is a beauty of morality, a beauty or Dharma, of Yoga, and as well the beauty of the Realisation of Truthfulness. Shankara, enhancing the

Sri Vidyabharathi Book Centre, Sringeri

CC-O. In Public Domain. Digitized by eGangotri

beauty to the climax has attached the very title Brahmatva to it From the first sloka to forth Sloka of Poorvabhaga from forty—second to hundreadth sloka is called Soundaryalahari., In Sevetny-fifth sloka, Shankara calling himself a dravida Sisu has distinctly stated that by relishing her breast-milk he earned his poetic potentiality.

Viewing from another point, Saundaryalahari, is also a small Mahakavya, possessed of poectic-qualities., Every sloka can also be quoted as an Instance of Kavya Mimamsa. Every Sloka is adorned with Alankara. Everywhere, Utpreksha, Vyatireka, Ananvaya, Atisayokti, Ullekha, Kavyalinga, Sandeha, Virodha Alankaras and the like could be seen.

Once, Shankara being a celibate in consonance with the Brahmacharyashrama rule went to a poor Brahmin's house to beg alms. In the absence of her husband who had been to earn, she not finding anything to give to that celibate forcibly told negatively. But being insisted by him to search and give anything, she searched and gave him a dried myrobalan fruit. Then as Shankara, Sang this Stotra, with appearance of Lakhmi, the conversation between the Two took place and as per Shankara's prayer this Stotra, when Mahalakshmi showered the Golden myrobalan fruits in that poor-brahmin's house came to be called "Kanakadhara Stotra".

The modesty, humility of an exacted personality like that of Shankara are distinctly seen in Bhavanyashtakam, rendered by himself in lucid-sanskrit. According to him, nothing in this cosmos is a resort for him except the Goodess Bhavani. This is clear from the last time of each verse 'Gatistvam, Gatistvam, Tramika Bhavam".

In his Guruvashtaka Shankara brings out the significance of a Guru. The quintessence of the whole sloka is that whoever he may be, of any order, any rank with any education should mind the lotus-feet of a teacher or Guru, contrary to this, the other things are good for nothing. Thus, Shankara's stotra literature is very wide and extensive one.

Primarily Shankara was born with the intention of rejuvenating the Sanatana Dharma in decline. Had he not born, Sanatana Dharma would have been in peril. To teach Vedantic philosophy to people in Simple Language, only he Wrote Slokas. To describe his achievements, his works is beyond our reach, but yet, atleast. recalling, remembering such towering personalities, we may feel being liberated from our daily sins and pray for our health like that of Shankara's physical and Mental Stability.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಪೂರ್ವ ಗುರು-ಶಿಷ್ಯರು

ಲ. ನ. ಶಾಸ್ತ್ರೀ

ವರ್ಷ 1973 ಎಂದು ನೆನಪು. ಮೈಸೂರು ವಿಶ್ವ ವಿದ್ಯಾಲಯದ ಆಶ್ರಯದಲ್ಲಿ ನಡೆದ ಪ್ರಚಾರೋಪನ್ಯಾಸ ಮಾಲೆಯಲ್ಲಿ ಭಾಷಣ ಮಾಡಲು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಅಂಬುತೀರ್ಥಕ್ಕೆ ಹೋಗಿದ್ದೆ. ಇದು ನಿಸರ್ಗ ರಮಣೀಯವಾದ ಸ್ಥಳ, ಶರಾವತಿಯ ಉಗಮ ಸ್ಥಾನ, ಶ್ರೀ ರಾಮೇಶ್ವರ ಸನ್ನಿಧಿಯಿಂದ ಪವಿತ್ರವಾದ ಕ್ಷೇತ್ರ. ಋಷ್ಯಾಶ್ರಮದಂತೆಯೇ ಇದ್ದು, ಶಾಂತಿ ಸಮಾಧಿಗಳ ಆಗರವಾಗಿದೆ

ಅಲ್ಲಿಂದ ಶೃಂಗೇರಿ ಮಹಾಕ್ಷೇತ್ರವೂ ಸಮೀಪ ದಲ್ಲಿಯೇ ಇದೆಯೆಂದು ವ್ಯವಸ್ಥಾಪಕರು ಹೇಳಿದರು. ಅಂಬುತೀರ್ಥದಿಂದ ತೀರ್ಥಹಳ್ಳಿ, ಕೊಪ್ಪ ಮೂಲಕವಾಗಿ ನೇರವಾದ ಬಸ್ಸು ಇತ್ತು. ಶೃಂಗೇರಿಗೆ ಬಂದೆ. ಆಗ ಶೃಂಗೇರಿ ಹಬ್ಬದ ವಾತಾವರಣದಿಂದ ಕೂಡಿತ್ತು. ಅದೇನೂ ಉತ್ಸವಗಳ ಸಮಯವಾಗಿರಲಿಲ್ಲ.

ವಿಚಾರಿಸಿದಾಗ, ಮೈಸೂರಿನ ಮಹಾರಾಜ ಶ್ರೀ ಜಯಚಾಮರಾಜ ಒಡೆಯರು, ತಮ್ಮ ಪರಿವಾರ ಸಮೇ ತರಾಗಿ ಶೃಂಗೇರಿಗೆ ಬಂದು, ಶ್ರೀ ಶಾರದಾ ಗುರು ಸನ್ನಿಧಿ ಯಲ್ಲಿ, ಅತಿರುದ್ರ ಸ್ವಾಹಾಕಾರ, ಸಹಸ್ರಚಂಡೀ ಹೋಮ ಮತ್ತು ಶ್ರೀ ಶಾರದಾ ಕೋಟಿ ನಾಮಾರ್ಚನೆ ಇವುಗ ಳನ್ನು ಕೈಗೊಂಡಿದ್ದಾರೆ, ಎಂದು ತಿಳಿಯಿತು. ಸಾಧಾರಣ ವಾಗಿ ಶೃಂಗೇರಿಯಲ್ಲಿ ಭಕ್ತರ ಮತ್ತು ಪ್ರವಾಸಿಗಳ ಪ್ರವಾಹ ಹೆಚ್ಚು. ಇಂತಹ ದಿನಗಳಲ್ಲಿ ಅದು ಇನ್ನೂ ವಿಪರೀತ.

ಶೃಂಗೇರಿಗೆ ಬಂದ ದಿನ ರಾತ್ರಿ ಶ್ರೀ ಶಾರದಾಂಬಾ ಮತ್ತು ಇತರ ಸನ್ನಿಧಿಗಳಲ್ಲಿ ದರ್ಶನ ಮಾಡಿಕೊಂಡು, ಮಾರನೆಯ ಪ್ರಾತಃಕಾಲ ಶ್ರೀ ಗುರು ದರ್ಶನಕ್ಕಾಗಿ ನರಸಿಂಹವನದ ಸಚ್ಚಿದಾನಂದ ವಿಲಾಸಕ್ಕೆ ಹೋದೆ. ಸುಮಾರು ಜನ ಹೊರಗೆ ತೀರ್ಥಕ್ಕಾಗಿ ಕಾದಿದ್ದರು. ಅವರೊಡನೆ ನಾನೂ ಸೇರಿಕೊಂಡು "ಈ ಜನ ಜಂಗುಳಿ ಯಲ್ಲಿ ಶ್ರೀ ಗುರುಗಳ ದರ್ಶನ ಸಿಕ್ಕುವುದುಂಟೇ? ಅವರು ನನ್ನೊಡನೆ ಮಾತನಾಡುವುದುಂಟೇ?" ಎಂದು ಅನು ಮಾನಿಸುತ್ತಾ ಕುಳಿತೆ.

ಸ್ವಲ್ಪ ಹೊತ್ತಿಗೆಲ್ಲಾ ಶ್ರೀ ಗುರುಗಳು ಹೊರಕ್ಕೆ ದಯಮಾಡಿಸಿದರು. ಅವರ ಪ್ರಸನ್ನ ಮುಖ, ಒಸರು ತ್ತಿದ್ದ ತೇಜಸ್ಸು, ಇವು ನನ್ನನ್ನು ಹರ್ಷಗೊಳಿಸಿದವು. ಅವರು ಮಾತಾಡಲೀ ಬಿಡಲಿ, ಈ ದರ್ಶನವೊಂದೇ ಸಾಕಾಗಿತ್ತು, ನನ್ನನ್ನೂ, ನನ್ನ ಮನಸ್ಸನ್ನೂ ಶಾಂತವಾ ಗಿಡಲು ತೀರ್ಥವನ್ನು ಅನುಗ್ರಹಿಸುತ್ತಾ, ಬಂದವರೊ ಡನೆ ಒಂದೋ ಎರಡೋ ಮಾತನ್ನಾಡುತ್ತಾ ಶ್ರೀ ಗುರು ಗಳವರು ನನ್ನನ್ನು "ಯಾವಾಗ ಬಂದಿರಿ?" ಎಂದರು. ನನಗಷ್ಟೇ ಸಾಕಾಗಿತ್ತು. ನನ್ನ ಪ್ರಯಾಣದ ಕಾರಣ ವನ್ನು ಚುಟುಕಾಗಿ ಬಿನ್ನವಿಸಿ, ತೀರ್ಥ ಸ್ವೀಕರಿಸಿ ಪಕ್ಕಕ್ಕೆ ಬಂದೆ ತೃಪ್ತನಾಗಿ.

ಎಲ್ಲರಿಗೂ ತೀರ್ಥವನ್ನಿತ್ತು ಶ್ರೀ ಗುರುಗಳು ಒಳಕ್ಕೆ ಹೋಗುತ್ತಾ, ನನ್ನನ್ನು ಬರುವಂತೆ ಸಂಜ್ಞೆ ಮಾಡಿದರು. ಅವರನ್ನು ಅನುಸರಿಸಿದೆ. ಸಚ್ಚಿದಾನಂದ ವಿಲಾಸದ ಪೂರ್ವ ದಿಕ್ಕಿನ ಕೊಠಡಿಯಲ್ಲಿ ಕುಳಿತರು. ನನ್ನನ್ನು ಕುಳಿತುಕೊಳ್ಳುವಂತೆ ಹೇಳಿದರು. ನಮಸ್ಕರಿಸಿ ಕುಳಿತೆ. ನನ್ನ, ನನ್ನ ಸಂಸಾರದ ಯೋಗಕ್ಷೇಮ, ಮಕ್ಕಳ ವಿದ್ಯಾ ಭ್ಯಾಸ, ನನ್ನ ಸಾಹಿತ್ಯ ಪರಿಚರ್ಯೆ ಇವನ್ನೆಲ್ಲಾ ಕೇಳಿ ದರು. ಅವರ ಪ್ರಶ್ನೆಗಳಿಗೆಲ್ಲಾ ಉತ್ತರಿಸುತ್ತಿದ್ದ ನನ್ನ ದೃಷ್ಟಿಗೆ, ಅವರ ಪಕ್ಕದಲ್ಲಿ ಒಂದು ಜಾಕಾಯಿ ಪೆಟ್ಟಿಗೆ ಅದರ ಮೇಲೊಂದು ಜಿಂಕೆಯ ಚರ್ಮ ಇವು ಕಂಡವು. ಅದು ಸರಿಯಾದ ಪೆಟ್ಟಿಗೆಯೂ ಅಲ್ಲ. PACKING CASE ಪದಾರ್ಥಗಳನ್ನು ತುಂಬಿಡುವ ಒರಟು ಮರದ

Sri Vidyabharathi Book Centre, Sringeri

CC-O. In Public Domain. Digitized by eGangotri

ಪೆಟ್ಟಿಗೆ. ನನ್ನ ದೃಷ್ಟಿ ಪಲ್ಲಟವಾದುದನ್ನು ಗಮನಿಸಿದ ಶ್ರೀ ಗುರುಗಳು "ಆ ಪೆಟ್ಟಿಗೆಯನ್ನು ನೋಡುತ್ತಿದ್ದೀರಾ? ಅದು ನನ್ನ ಆಸನ ತಾತ್ಕಾಲಿಕವಾಗಿ ನಿಮ್ಮ ಪಕ್ಕದಲ್ಲಿ ರುವ ಕುರ್ಚಿಯಿದೆಯಲ್ಲಾ ಅದನ್ನು ನೋಡಿ. ಅದು ಮಹಾರಾಜರಿಗಾಗಿ ತರಿಸಿದ್ದು. ಅವರು ಕೆಳಗೆ ಕುಳಿತು ಕೊಳ್ಳಲಾರರು, ದೈಹಿಕ ಅನಾನುಕೂಲದಿಂದ. ನಾನು ಹೀಗೆ ನಿಮ್ಮೆದುರಿನ ಪೀಠದಲ್ಲಿ ಕುಳಿತಿದ್ದರೆ, ಅವರು ಸಂಕೋಚಪಟ್ಟುಕೊಳ್ಳುತ್ತಾರೆ. ಕುರ್ಚಿಯಲ್ಲಿ ಮಂಡಿ ಸಲು, ನಿಂತೇ ಇರುತ್ತಾರೆ. ಅದಕ್ಕಾಗಿ ಹಿಂದೆ ಸಾಮಾನು ಕೊಠಡಿಯಲ್ಲಿ ಬಿದ್ದಿದ್ದ ಈ ಪೆಟ್ಟಿಗೆಯನ್ನು ತರಿಸಿದೆ. ಅದರ ಮೇಲೆ ಅಜಿನವನ್ನು ಹಾಸಿದೆ. ಮಹಾರಾಜರು ಬಂದಾಗ ನಾನು ಅದರ ಮೇಲೆ ಪದ್ಮಾಸನ ಹಾಕಿಕೊಂಡು ಕೂರುತ್ತೇನೆ, ಆಗ ಅವರು ಈ ಕುರ್ಚಿಯಲ್ಲಿ ಕುಳಿತು ಕೊಳ್ಳುತ್ತಾರೆ" ಎಂದರು ಶ್ರೀ ಗುರುಗಳು. ಇದು ನನಗೆ ತುಂಬಾ ಮೋಜೆನಿಸಿತು ಮಹಾರಾಜರ ವಿನಯ, ಶ್ರೀ ಗುರುಗಳು ಮಹಾರಾಜರಲ್ಲಿ ಇಟ್ಟಿದ್ದ ಅವ್ಯಾಜವಾದ ವಾತ್ಸಲ್ಯ ಇವು ನನ್ನ ಪುಲಕಿತಗೊಳಿಸಿದವು.

ಆಗ ಬ್ರಹ್ಮಚಾರಿಯೊಬ್ಬಾತ ಬಂದು, "ಮಹಾ ರಾಜರು ದರ್ಶನಕ್ಕಾಗಿ ಬರುತ್ತಿದ್ದಾರೆ'' ಎಂದು ಬಿನ್ನಪಿ ಸಿದ. ನಾನು ನಮಸ್ಕರಿಸಿ ಎದ್ದು, ಬಾಗಿಲತ್ತ ಹೊರಡು ವುದರಲ್ಲಿದ್ದೆ. ಶ್ರೀ ಗುರುಗಳು "ಏಕೆ ಹೊರಟಿರಿ ? ಇರಿ" ಎಂದರು. "ಮಹಾರಾಜರು ಬರುತ್ತಿದ್ದಾರಂತೆ ತಮ್ಮ ದರ್ಶನಕ್ಕೆ ಆದ್ದರಿಂದ ಹೊರಟೆ'' ಎಂದು ಬಿನ್ನವಿಸಿದೆ "ಮಹಾರಾಜರು ಬರಲಿ, ನಿಮ್ಮನ್ನು ಅವರಿಗೆ ಪರಿಚಯ ಮಾಡಿ ಕೊಡುತ್ತೇನೆ ಇರಿ" ಎಂದರು. ಪಕ್ಕದಲ್ಲಿ ಕುತೂ ಹಲದಿಂದ ನಿಂತೆ.

ಶ್ರೀ ಜಯಚಾಮರಾಜ ಒಡೆಯರು ಗಂಭೀರವಾದ ಹೆಜ್ಜೆಯನ್ನಿಡುತ್ತಾ ಒಳಕ್ಕೆ ಬಂದರು. ರೇಷಿಮೆಯ ದುಕೂಲವನ್ನು ಧರಿಸಿ, ಕೈ ಮುಗಿದುಕೊಂಡೇ ಒಳಕ್ಕೆ ಬಂದ ರಾಜರು ಶ್ರೀ ಗುರುಗಳಿಗೆ ದೀರ್ಘದಂಡ ಪ್ರಣಾಮ ಮಾಡಿ ಕೈ ಮುಗಿದೇ ನಿಂತರು. ಶ್ರೀ ಗುರುಗಳು ಅವ ರನ್ನು ಹಸನ್ಮುಖದಿಂದ ಸ್ವಾಗತಿಸಿ, ಬನ್ನಿ ಮಹಾರಾಜರೇ, ದೇವರ ದರ್ಶನವಾಯಿತೇ ? ಯಜ್ಞ ಶಾಲೆಯನ್ನು ದರ್ಶನ ಮಾಡಿದಿರಾ ? ತಮ್ಮ ಜಪವು ಚೆನ್ನಾಗಿ ಬೆಳೆ ಯಿತೆ ?'' ಎಂದೆಲ್ಲಾ ಕೇಳಿದರು. ಮಹಾರಾಜರು ವಿನಯದಿಂದ ಕೈ ಮುಗಿದು, "ತಮ್ಮ ಆಶೀರ್ವಾದ ಅನುಗ್ರಹಗಳಿಂದ ದೇವರ ದರ್ಶನ ಚೆನ್ನಾಗಿ ಆಯಿತು. ಜಪಾನುಷ್ಠಾನಗಳನ್ನು ಕೈಲಾದಷ್ಟು ಮಾಡುತ್ತಿದ್ದೇನೆ. ಮನಸ್ಸು ತೃಪ್ತವೂ ಸಮಾಧಾನವೂ ಆಗಿದೆ" ಎಂದರು.

ಶ್ರೀ ಗುರುಗಳು ಮಹಾರಾಜರನ್ನು ಕುರಿತು, ನನ್ನನ್ನು ಪರಿಚಯಿಸುತ್ತಾ, "ಮಹಾರಾಜರೆ, ಇವರು ನಮ್ಮ ಆಪ್ತ ಶಿಷ್ಯರು. ಹುರಗಲವಾಡಿ ಲಕ್ಷ್ಮೀನರಸಿಂಹ ಶಾಸ್ತ್ರಿಗಳು. ನಮ್ಮ ಗುರುಗಳಲ್ಲಿ ಇವರ ಭಕ್ತಿ ಶ್ರದ್ಧೆ ತುಂಬಾ ಇದ್ದು, ಇವರು ನನ್ನಲ್ಲಿಯೂ ಅದೇ ರೀತಿ ಭಕ್ತಿ ಗೌರವ ಇಟ್ಟಿದ್ದಾರೆ. ಒಳ್ಳೆಯ ಲೇಖಕರು, ನಮ್ಮ ಮಠವನ್ನು ಕುರಿತು, ವಿಶೇಷವಾಗಿ ನಮ್ಮ ಗುರುಗಳವ ರನ್ನು ಕುರಿತು ಚೆನ್ನಾದ ಪುಸ್ತಕಗಳನ್ನು ಬರೆದಿದ್ದಾರೆ" ಎಂದು ಹೇಳಿದರು.

ಮಹಾರಾಜರು ಹಸನ್ಮುಖದಿಂದ, ನನ್ನ ಸ್ಥಳ, ವೃತ್ತಿ ಸಾಹಿತ್ಯ, ವ್ಯವಸಾಯ ಇವನ್ನೆಲ್ಲಾ ಕುರಿತು ಕೇಳಿದರು. ಶ್ರೀ ಗುರುಗಳು "ನೀವಿಬ್ಬರೂ ಮಾತನಾಡು ತ್ತಿರಿ, ಈಗಲೇ ಬರುತ್ತೇನೆ" ಎಂದು ನುಡಿದು ಒಳಕ್ಕೆ ದಯಮಾಡಿದರು. ಮಹಾರಾಜರ ಮಾತಿನಿಂದ ಅವರು ನನ್ನ ಒಂದೆರಡು ಪುಸ್ತಕಗಳನ್ನು ಓದಿದಂತೆ ಕಂಡಿತು.

ಸುಮಾರು ಹತ್ತು ನಿಮಿಷಗಳ ಕಾಲ ನಮ್ಮ ಸಂಭಾಷಣೆ ಜರುಗಿತು. ಇಬ್ಬರೂ ನಿಂತೇ ಮಾತ ನಾಡುತ್ತಿದ್ದೆವು. ಶ್ರೀ ಗುರುಗಳು ಆಗಮಿಸಿ ಇದೋ ಶಾಸ್ತ್ರಿಗಳೇ ಇದು ನಿಮ್ಮ ಪುಸ್ತಕ ನಮ್ಮ ಗುರು ಗಳನ್ನು ಕುರಿತದು ಇದನ್ನು ನೀವೇ ಮಹಾರಾಜರಿಗೆ ಕೊಡಿ ಎಂದು ಹೇಳಿ ಒಂದು ಪುಸ್ತಕವನ್ನು ಕೈಗಿತ್ತರು. ಅದು "ತುಂಗೆಯ ಮಡಿಲ ತಪಸ್ವಿ'' ಶ್ರೀ ಚಂದ್ರಶೇಖರ ಭಾರತೀ ಮಹಾಸ್ವಾಮಿಗಳನ್ನು ಕುರಿತು ನಾನು ಬರೆದ ಎರಡನೆಯ ಪುಸ್ತಕ (ಮೊದಲ ಪುಸ್ತಕ ಮಹಾತಪಸ್ವಿ ಶ್ರೀ ಚಂದ್ರಶೇಖರ ಭಾರತೀ) ನಾನು ಪುಳಕಗಾತ್ರನಾಗಿ ಆ ಪುಸ್ತಕವನ್ನು ತೆಗೆದುಕೊಂಡು ಮಹಾರಾಜರ ಕೈಗಿತ್ತೆ ಮಹಾರಾಜರು ಎರಡು ಕೈಗಳಿಂದಲೂ ಆ ಪುಸ್ತಕವನ್ನು ತೆಗೆದುಕೊಂಡು ಕಣ್ಣಿಗೊತ್ತಿಕೊಂಡರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಗುರುಗಳು ನನ್ನ ಬಗ್ಗೆ ನನ್ನ ಪುಸ್ತಕದ ಬಗ್ಗೆ ಹಲವು ಮಾತುಗಳನ್ನು ಮಹಾರಾಜರಿಗೆ ಹೇಳಿದರು ಆ ಮಾತುಗಳಲ್ಲಿ ಅವರು ನನ್ನಲ್ಲಿ ಇಟ್ಟಿದ್ದ ಅವ್ಯಾಜ್ಯ ವಾತ್ಸಲ್ಯ ಎದ್ದು ಕಂಡಿತು. ರಾಜರು ನನ್ನನ್ನು ತುಂಬಾ ಸಂತೋಷ ,ಶ್ರೀ ಗುರುಗಳ ಸಮ್ಮುಖದಲ್ಲಿ ನಿಮ್ಮ ಪರಿಚಯವಾಯಿತು. ಮೈಸೂರಿನಲ್ಲಿ, ಯಾವಾಗ ಬೇಕಾದರೂ ಬಂದು ನನ್ನನ್ನು ಕಾಣಬಹುದು ಎಂದರು ನಾನು 'ಆಗಲಿ' ಎಂಬಂತೆ ತಲೆಯಾಡಿಸಿ ಶ್ರೀ ಗುರುಗಳಿಗೆ ಪ್ರಣಾಮ ಸಲ್ಲಿಸಿ ರಾಜರಿಗೆ ವಂದನೆ ಹೇಳಿ ಹೊರಕ್ಕೆ ಬಂದೆ.

2

ಶೃಂಗೇರಿಯ ಗುರುಪೀಠಕ್ಕೂ ಮೈಸೂರು ರಾಜ ಮನೆತನಕ್ಕೂ ಇರುವ ಗುರುಶಿಷ್ಯ ಬಾಂಧವ್ಯ 250 ವರ್ಷಗಳಿಗೂ ಹಿಂದಿನದು ಇಮ್ಮಡಿ ರಾಜ ಒಡೆಯರು (1735–66) ಶ್ರೀ ಅಭಿನವ ಸಚ್ಚಿದಾನಂದ ಭಾರತೀ ಸ್ವಾಮಿಗಳನ್ನು (1741–67) ತಮ್ಮ ರಾಜಧಾನಿಗೆ ಆಹ್ವಾನಿಸಿದ್ದರು. ಬೆಳವಾಡಿ ಗ್ರಾಮವನ್ನು ಶ್ರೀ ಗುರುಗಳಿಗೆ ಸರ್ವಮಾನ್ಯವಾಗಿ ದಾನ ಮಾಡಿದರು ಶ್ರೀ ಗುರುಗಳು ರಾಮೇಶ್ವರ ಯಾತ್ರೆಯ ಕಾಲದಲ್ಲಿ ಅವರಿಗೆ ಪಹರೆಯನ್ನು ಒದಗಿಸಿದ್ದರು.

ಮುಂದೆ ಮೈಸೂರು ರಾಜ್ಯವು ಹೈದರ್ ಮತ್ತು ಟಿಪ್ಪುವಿನ ವಶವಾದರೂ ಶ್ರೀ ಗುರುಗಳ ವಿಚಾರದಲ್ಲಿ ಅವರಿಬ್ಬರೂ ಭಯ ಗೌರವದಿಂದಲೇ ನಡೆದುಕೊಂಡರು.

ಶ್ರೀ ವೃದ್ಧ ನರಸಿಂಹ ಭಾರತೀ ಸ್ವಾಮಿಗಳವರ ಕಾಲದಲ್ಲಿ (1817–1879) ಮುಮ್ಮಡೀ ಕೃಷ್ಣರಾಜ ಒಡೆಯರು ಮೈಸೂರಿನ ದೊರೆ ಅವರ ಗುರುಭಕ್ತಿ ಅನುಪಮವಾಗಿತ್ತು. ಶ್ರೀ ಸ್ವಾಮಿಗಳವರ ಶಿಷ್ಯ ಸ್ವೀಕಾರ ಕಾರ್ಯಕ್ಕೆ ಮಹಾರಾಜರ ನೆರವು ತುಂಬಾ ಸ್ಮರಣೀಯ ಅವರೇ ಶ್ರೀ ಕುಣಿಗಲ್ ರಾಮಶಾಸ್ತ್ರಿಗಳ ತೃತೀಯ ಪುತ್ರರಾಗಿದ್ದ ಶ್ರೀ ಶಿವಸ್ವಾಮಿಯವರು ಶ್ರೀ ಸ್ವಾಮಿಗಳ ಅಪೇಕ್ಷೆಯಂತೆ ಶೃಂಗೇರೀಪೀಠಕ್ಕೆ ಬರಲು ಕಾರಣ ಅವರ ಕಾಲದಲ್ಲಿ ಬಹಳಷ್ಟು ಸೇವಾ ಕಾರ್ಯವು ನಡೆದು, ಮಠದ ಪುರೋಭಿವೃದ್ಧಿಗೆ ಅವರ ನೆರವು ಶ್ರೇಷ್ಠವಾಗಿತ್ತು. ಅವರು ಶ್ರೀ ಸ್ವಾಮಿಗಳಿಗೆ ಬರೆಯುತ್ತಿದ್ದ ಬಿನ್ನಹ ಪತ್ರಗಳಲ್ಲಿ ತಮ್ಮನ್ನು ತಮ್ಮ ಬಾಲಕ ಎಂದು ಹೇಳಿಕೊಳ್ಳುತ್ತಿದ್ದರು ರಾಜರು ಶ್ರೀ ಸ್ವಾಮಿಗಳವರನ್ನು ಕುರಿತು ಅಷ್ಟೋತ್ತರ ಶತನಾಮಾ ವಳಿಯನ್ನು ರಚಿಸಿದ್ದರು. ಶ್ರೀ ಸ್ವಾಮಿಗಳವರನ್ನು ರಚಿಸಿದ್ದರು. ಶ್ರೀ ಗುರುಗಳ ವರ್ಣ ಚಿತ್ರವನ್ನು ಬರೆಸಿದ್ದರು.

ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀ ಸ್ವಾಮಿಗಳವರ ಕಾಲದಲ್ಲಿ (1879–1912) ಶ್ರೀ ಚಾಮರಾಜ ಒಡೆಯರು ಮೈಸೂರು ದೊರೆಗಳಾಗಿದ್ದರು ಈ ದೊರೆಯೂ ಶ್ರೀ ಗುರುಗಳನ್ನು ಸತ್ಕರಿಸಿ, ಸೇವೆ ಸಲ್ಲಿಸಿ ಮಂತ್ರ ದೀಕ್ಷೆಯನ್ನು ಪಡೆದಿದ್ದರು. ಶ್ರೀ ಗುರುಗಳು ಮಹಾರಾಜರಿಗೆ ಸ್ವರ್ಣಕಿರೀಟವನ್ನು ಉಡುಗೊರೆಯಾಗಿ ಇತ್ತಿದ್ದರು. ಶ್ರೀ ಗುರುಗಳು ಮೈಸೂರಿನ ರೀಜಂಟ್‌ರಾಗಿದ್ದ ಶ್ರೀ ಲಕ್ಷ್ಮೀವಿಲಾಸ ಸನ್ನಿಧಾನ ಮತ್ತು ಬಾಲಕರಾದ ಇಬ್ಬರು ರಾಜಕುಮಾರರನ್ನು ಹರಸಿದ್ದರು.

ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳವರ ಕಾಲದಲ್ಲಿ (1912–1954) ಶ್ರೀ ನಾಲ್ವಡೀ ಕೃಷ್ಣ ರಾಜ ಒಡೆಯರೂ ಅನಂತರ 1940 ರಿಂದ ಶ್ರೀ ಜಯ ಚಾಮರಾಜ ಒಡೆಯರೂ ಮೈಸೂರು ರಾಜ್ಯದ ದೊರೆಗಳಾಗಿದ್ದರು. ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ ಗುರುಭಕ್ತಿ ಅತ್ಯುಚ್ಚ ಮಟ್ಟದ್ದಾಗಿದ್ದು ಅವರು ಗುರುಗಳಾದ ಮಂತ್ರೋಪದೇಶ ಪಡೆದುದಷ್ಟೇ ಅಲ್ಲದೆ ಶ್ರೀ ಗುರುಗಳ ಪಾದಕೆಗಳನ್ನು ಪಡೆದು ತಮ್ಮ ಖಾಸಾ ಪೂಜೆಗಿಟ್ಟುಕೊಂಡಿದ್ದರು.

ಶ್ರೀ ಅಭಿನವ ವಿದ್ಯಾತೀರ್ಥರು ಪಟ್ಟಾಭಿಷಿಕ್ತರಾದಾಗ (1954) ದೇಶದಲ್ಲಿ ರಾಜಕೀಯ ಅಲ್ಲೋಲ ಕಲ್ಲೋಲವಾಗಿತ್ತು. ಹಿಂದಿನ ಗುರುಗಳ ಕಾಲದಲ್ಲಿ ದೇಶವು ರಾಜರಿಂದ ಆಳಲ್ಪಡುತ್ತಿದ್ದು ಅವರ ರಕ್ಷಣೆ ಪೋಷಣೆ ಮಠಕ್ಕೆ ಸಿಕ್ಕುತ್ತಿದ್ದವು. ಶ್ರೀ ವಿದ್ಯಾತೀರ್ಥರ ಕಾಲದಲ್ಲಿ ಮಠದ ಜಹಗೀರಿ ರದ್ದಾಯಿತು. ಹಾಗೆಯೇ ರಾಜ್ಯಗಳೂ ರದ್ದಾಗಿ, ರಾಜರ ಅಧಿಕಾರವೂ ರದ್ದಾಯಿತು. ಈ ಹಿನ್ನೆಲೆಯಲ್ಲಿ ಶ್ರೀ ವಿದ್ಯಾತೀರ್ಥರ ಮತ್ತು ಶ್ರೀ ಜಯಚಾಮರಾಜರ ಗುರುಶಿಷ್ಯ ಬಾಂಧವ್ಯವನ್ನು ನೋಡಿ

Sri Vidyabharathi Book Centre, Sringeri

CC-O. In Public Domain. Digitized by eGangotri

ದಾಗ ಒಂದು ಅಂಶ ಸ್ಪಷ್ಟಪಡುತ್ತದೆ. ಅದೇ ಶ್ರೀ ಗುರುಗಳಾಗಲಿ, ಮಹಾರಾಜರಾಗಲೀ ಈ ಪರಿವರ್ತನೆ ಯಿಂದಾದ ಅಪಾರ ನಷ್ಟ. ತೊಂದರೆಗಳನ್ನು ಅಷ್ಟಾಗಿ ಪರಿಗಣಿಸಲಿಲ್ಲ ಎಂಬುದು.

ಶ್ರೀ ಜಯಚಾಮರಾಜಒಡೆಯರು ಪಟ್ಟಕ್ಕೆ ಬಂದಾಗಿನಿಂದ ಶೃಂಗೇರಿಗೆ ಒಂದು ಸಲವೂ ಭೇಟಿ ಕೊಟ್ಟಿರಲಿಲ್ಲ. ಶ್ರೀ ಚಂದ್ರಶೇಖರ ಭಾರತೀಯವರ ದರ್ಶನ ಅವರಿಗೆ ಎರಡು ಸಲ ಮಾತ್ರ ಆಗಿತ್ತು ಶ್ರೀ ಗುರುಗಳು ತಮ್ಮ ಮೊದಲ ಮತ್ತು ಎರಡನೇ ಸಂಚಾರದಲ್ಲಿ ಮೈಸೂರಿಗೆ ಬಂದಿದ್ದಾಗ ಅದೂ ಸಹ ತಮ್ಮ ತಂದೆ ಮತ್ತು ದೊಡ್ಡಪ್ಪನವ ರೊಡನೆ ಮಾಡಿದ್ದ ದರ್ಶನ ಶ್ರೀ ವಿದ್ಯಾತೀರ್ಥರ ದರ್ಶನ ವನ್ನು ಮಾಡಿರಲೇ ಇಲ್ಲ.

ಮಹಾರಾಜರು ಮೊತ್ತ ಮೊದಲಿಗೆ ಶ್ರೀ ಗುರು ಗಳ ದರ್ಶನ ಮಾಡಿದ್ದು ಉದಕಮಂಡಲದಲ್ಲಿ ಆಗ ಅವರಿಗೆ ಇಂತಹ ಶ್ರೇಷ್ಠ ಗುರುವನ್ನು ನಾನು ಈ ಮೊದಲೇ ದರ್ಶಿಸಲಿಲ್ಲ ಎಲ್ಲಾ ಎಂದು ತುಂಬಾ ಖೇದ ವಾಯಿತು. ಅನಂತರ ಅವರು ಗುರುಗಳನ್ನು ಪದೇ ಪದೇ ದರ್ಶನಮಾಡುತ್ತ, ಅನೇಕ ಶಾಸ್ತ್ರ ವಿಷಯಗಳನ್ನು ಅವರಲ್ಲಿ ಚರ್ಚಿಸುತ್ತಿದ್ದರು. ಅವರಿಂದ ಮಂತ್ರೋಪ ದೇಶವನ್ನು ಪಡೆದುದಲ್ಲದೆ ಸಾಧನೆಯ ಕ್ರಮವನ್ನು ಅರಿತರು. ತಮ್ಮ ಸಂದೇಹ ಸಂಶಯಗಳನ್ನು ಪತ್ರಗಳ ಮೂಲಕ ಬಿನ್ನವಿಸಿ ಪರಿಹಾರವನ್ನು ಪಡೆಯುತ್ತಿದ್ದರು.

ಪ್ರತಿ ಸಲ ಶೃಂಗೇರಿಗೆ ಬಂದಾಗಲೂ ರಾಜರು ಶ್ರೀ ಗುರುಗಳಿಗೆ ಒಂದು ಜತೆ ಶಾಲು, ಧೋತ್ರ, ರೂ. 200 ಕಾಣಿಕೆ ಮತ್ತು ಹಣ್ಣುಹಂಪಲನ್ನು ಒಪ್ಪಿ ಸುತ್ತಿದ್ದರು. ಮೈಸೂರಿಗೆ ಶ್ರೀ ಗುರುಗಳ ಆಗಮನವಾ ದಾಗ ಅವರನ್ನು ಅರಮನೆಯ ಮಹಾ ದ್ವಾರದಲ್ಲಿಯೇ ಸ್ವಾಗತಿಸಿ, ಒಳಕ್ಕೆ ಬಿಜಯ ಮಾಡಿಸಿ ಪಾದಪೂಜಾದಿ ಗಳನ್ನು ಸಲ್ಲಿಸುತ್ತಿದ್ದರು. ಪ್ರತಿ ಭೇಟಿಯಲ್ಲಿಯೂ ಗುರುಗಳೇ ನನ್ನಿಂದ ತಾವು ಯಾವುದಾದರೂ ಸೇವೆ ಯನ್ನು ಒಪ್ಪಿಸಿಕೊಳ್ಳಬೇಕು ಎಂದು ಕೋರುತ್ತಿದ್ದರು. ಶ್ರೀ ಗುರುಗಳು ಆಗಲಿ ಶ್ರೀ ಶಾರದಾಂಬಾರವರಿಗೆ ಅಗತ್ಯವಾದಾಗ ಅವರೇ ಪ್ರೇರಿಸುತ್ತಾರೆ. ಆಗ ನಾನೇ ಕೇಳುತ್ತೇನೆ ಎಂದು ಹೇಳಿಬಿಡುತ್ತಿದ್ದರು ಶ್ರೀ ಗುರುಗಳು ರಾಜರಿಂದ ಏನನ್ನು ಅಪೇಕ್ಷಿಸಲಿಲ್ಲ. ಒಮ್ಮೆಯಂತೂ ಮಹಾರಾಜರು ತೀರಾ ಬಲವಂತ ಮಾಡಿದರು ಗುರುಗಳೇ ಎಷ್ಟೋಜನ ನನ್ನಿಂದ ಯಥೇಚ್ಛವಾಗಿ ಪಡೆದಿದ್ದಾರೆ. ಆದರೂ ಅವರಿಗೆ ತೃಪ್ತಿಯಿಲ್ಲ. ಇನ್ನು ಇನ್ನು ಕೇಳು ತ್ತಲೇ ಇದ್ದಾರೆ. ನಾನು ಕೊಡುತ್ತಲೂ ಇದ್ದೇನೆ. ತಾವು ಮಾತ್ರ ನಾನಾಗಿ ಏನನ್ನಾದರೂ ಅಪ್ಪಣೆಮಾಡಿ ಒಪ್ಪಿಸುತ್ತೇನೆ, ಎಂದರೆ ನಿರಾಕರಿಸಿ ಬಿಡುತ್ತೀರಿ ನನ್ನಿಂದ ಯಾವ ಸೇವೆಯೂ ಬೇಡವೇ ? ಎಂದು ಕೋರಿದರು. ಶ್ರೀ ಗುರುಗಳು ಮಹಾರಾಜರೇ ಶ್ರೀ ಶಾರದಾಂಬಾರವರಿಗೆ ಏನು ಕಡಿಮೆಯಾಗಿದೆ ಆ ತಾಯಿ ಏನನ್ನು ತಾನೇ ಭಕ್ತರಿಂದ ಅಪೇಕ್ಷಿಸುವುದು. ಮತ್ತೇ ನಾದರೂ ಬೇಕಾದಲ್ಲಿ ಆಕೆಯೇ ನನ್ನನ್ನು ಪ್ರೇರಿಸುತ್ತಾಳೆ. ನಾನು ನಿಮಗೆ ತಿಳಿಸುತ್ತೇನೆ ಎಂದು ಸ್ಪಷ್ಟವಾಗಿ ಆದರೆ ವಾತ್ಸಲ್ಯ ಪೂರ್ಣರಾಗಿ ನುಡಿದರು.

3

ಮಹಾಜರು ಉದ್ದೇಶಿಸಿ ಆರಂಭ ಮಾಡಿಸಿದ್ದ ಯಾಗಗಳು ತುಂಬಾ ಸುಸೂತ್ರವಾಗಿ ಚೆನ್ನಾಗಿ ಬೆಳೆ ದವು. ಮಹಾರಾಜರು ತುಂಬಾ ಸಂತೋಷಪಟ್ಟರು. ಮೈಸೂರಿಗೂ ಹಿಂದಿರುಗಿದರು.

ಸ್ವಲ್ಪ ದಿನಗಳ ನಂತರ ಗುರುಗಳ ಕಾರ್ಯದರ್ಶಿ ಶ್ರೀ ಪದ್ಮನಾಭ ಉಪಾಧ್ಯಾಯರು, ಮಹಾರಾಜರನ್ನು ಕಾಣಲು ಶೃಂಗೇರಿಗೆ ಬಂದರು. ಶ್ರೀ ಗುರುಗಳು ತನ್ನಿಂದ ಯಾವುದಾದರೂ ಸೇವೆಯನ್ನು ಅಪೇಕ್ಷಿಸಿರಬಹುದು ಎಂಬ ಕುತೂಹಲದಿಂದ ಮಹಾರಾಜರು ಕಾರ್ಯಭಾರಿ ಯನ್ನು ಬರಮಾಡಿಕೊಂಡರು. ಆತ ರಾಜರಿಗೆ ಶ್ರೀ ಶಾರದಾ ಪ್ರಸಾದವನ್ನೂ ಶ್ರೀ ಗುರಗಳಿಂದ ಅನುಗ್ರ ಹೀತವಾಗಿದ್ದ ಮಂತ್ರಾಕ್ಷತೆಯನ್ನು ಇತ್ತರು ಮಹಾ ರಾಜರು ಅದನ್ನು ಭಕ್ತಿಶ್ರದ್ಧೆಯಿಂದ ಸ್ವೀಕರಿಸಿದರು. ಅನಂತರ ಆತ ರಾಜರ ಕೈಗೆ ಒಂದು ಲಕ್ಕೋಟೆಯ ನ್ನಿತ್ತರು. ರಾಜರು ಅದನ್ನು ಕೌತುಕದಿಂದ ತೆರೆದಾಗ ಅದರಲ್ಲಿದ್ದುದು, ಶೃಂಗೇರಿಯಲ್ಲಿ ನಡೆದ ಯಜ್ಞ ಯಾಗಗಳ ಲೆಕ್ಕಪತ್ರ ! ಮತ್ತು ಖರ್ಚಾಗಿ ಉಳಿದ ಹಣಕ್ಕೆ ಒಂದು ಬ್ಯಾಂಕ್ ಡ್ರಾಫ್ಟ್ ! ರಾಜರ ಕಣ್ಣಲ್ಲಿ ನೀರಾಡಿತು. ಉಪಾಧ್ಯಾಯರೇ ನನ್ನಿಂದ ಈ ಅಲ್ಪ

Sri Vidyabharathi Book Centre, Sringeri

ಸೇವೆಯೂ ಗುರುಗಳಿಗೆ ಬೇಡವಾಯಿತೇ? ಈ ಲೆಕ್ಕಪತ್ರವನ್ನು ನಾನು ಕೇಳಿದೆನೆ? ಉಳಿದ ಹಣವನ್ನು ಕೇಳಿದೆನೆ? ಎಂದು ನೊಂದು ನುಡಿದರು.

ಉಪಾಧ್ಯಾಯರು "ಸ್ವಾಮಿ, ತಾವು ನೊಂದುಕೊಳ್ಳಬಾರದು ತಮ್ಮಿಂದ ಸಂದಾಯವಾದ ಹಣಕ್ಕೆ ಲೆಕ್ಕಪತ್ರವಿಡಬೇಕಾದದ್ದು ಮಠದ ಅಧಿಕಾರಿಗಳ ಕರ್ತವ್ಯ. ಅದನ್ನು ತೆಗೆದುಕೊಳ್ಳಲಿಲ್ಲ. ಅದನ್ನು ಶ್ರೀ ಮಠಕ್ಕೆ ಕಾಣಿಕೆಯಾಗಿ ಒಪ್ಪಿಸಿಬಿಟ್ಟರು.

ಉಪಾಧ್ಯಾಯರು ಶೃಂಗೇರಿಗೆ ಹಿಂದಿರುಗಿ ಎಲ್ಲವನ್ನು ಶ್ರೀ ಗುರುಗಳಿಗೆ ಬಿನ್ನವಿಸಿದರು.

ಶೃಂಗೇರಿಗೆ ಬರುತ್ತಿದ್ದ ಭಕ್ತರಿಗೆ ವಸತಿ ಸೌಕರ್ಯ ಸಾಲದಾಗಿತ್ತು. ಹಳೇ ಗೆಸ್ಟ್‌ಹೌಸು, ಶಂಕರ ಕೃಪಾ ನಿಲಯ ಮತ್ತು ಹೊಸದಾದ ಶಂಕರ ನಿಕೇತನ ಅತಿಥಿ ಗೃಹ ಇವುಗಳಿದ್ದರೂ, ಉತ್ಸವ ಕಾಲದಲ್ಲಿ ಜನಸಂಮರ್ದ ಹೆಚ್ಚಾದಾಗ ಇವೆಲ್ಲಾ ತುಂಬಿಹೋಗಿ ಬಹಳ ಜನಕ್ಕೆ ಜಾಗ ಸಿಗದೆ ಉಳಿದುಕೊಳ್ಳಲು ತುಂಬಾ ತೊಂದರೆಯಾಗುತ್ತಿತ್ತು. ಶ್ರೀ ಗುರುಗಳು ಮತ್ತೊಂದು ಅತಿಥಿಗೃಹವನ್ನು ನಿರ್ಮಿಸಲು ನಿರ್ಧರಿಸಿದರು ಮಹಾರಾಜರು ಹಿಂದಿರುಗಿಸಿದ್ದ ಹಣವನ್ನು ಇದಕ್ಕೆ ವಿನಿಯೋಗಿಸಲು ಯೋಚಿಸಿದರು.

ಮಹಾರಾಜರೇ ಬಂದು ನೂತನ ಅತಿಥಿಗೃಹಕ್ಕೆ ಶಿಲಾನ್ಯಾಸ ಮಾಡಿದರು ಶ್ರೀ ಗುರುಗಳು ಈ ಅತಿಥಿ ಗೃಹಕ್ಕೆ ಮಹಾರಾಜರ ಹೆಸರಿಡಬೇಕೆಂದು ಸೂಚಿಸಿದರು ಮಹಾರಾಜರು ಒಪ್ಪದೇ ಗುರುಗಳ ಹೆಸರೇ ಇಡಬೇಕೆಂದು ಹೇಳಿದರು ಸ್ವಲ್ಪ ಕಾಲ ಜಿಜ್ಞಾಸೆಯಾಗಿ ನೂತನ ಅತಿಥಿಗೃಹಕ್ಕೆ ಶಿಷ್ಯ ಗುರುಗಳಿಬ್ಬರ ಸ್ಮರಣೆಯಿಂದ ಆಗುವಂತೆ ಜಯಶಂಕರ ನಿಕೇತನ ಎಂಬ ಹೆಸರನ್ನಿಡಲಾಯಿತು.

ರಾಜ್ಯಕೋಶಗಳನ್ನು ಕಳೆದುಕೊಂಡಿದ್ದರೂ ಅದನ್ನು ಅಷ್ಟಾಗಿ ಹಚ್ಚಿಕೊಳ್ಳದಿದ್ದ ಮಹಾರಾಜರು, ತಮ್ಮ ಕೊನೆಯ ದಿನಗಳಲ್ಲಿ ಪದೇ ಪದೇ ಶೃಂಗೇರಿಗೆ ಬರುತ್ತಿದ್ದರು, ಶಾಂತಿ, ಸಾಂತ್ವನಗಳಿಗಾಗಿ ಅವರ ಕಡೆ ಬಳಲಿಗಾಲದಲ್ಲಿ ಅವರು ಮಾನಸಿಕವಾಗಿ ತುಂಬಾ ನೊಂದಿದ್ದು, ಖತಿಗೊಂಡಿದ್ದರು ಕಡೆಯ ಸಲ ಬಂದಾಗ ಶೃಂಗೇರಿಯಲ್ಲಿಯೇ ಇದ್ದುಬಿಡುವ ಬಯಕೆಯನ್ನು ತೋರಿದ್ದರು. ಶ್ರೀ ಗುರುಗಳು ಅವರಿಗೆ ಸಮಾಧಾನವನ್ನು ನೀಡಿ ನೀವು ವೇದಾಂತ ಶಾಸ್ತ್ರವನ್ನು ಓದಿದ್ದೀರಿ ಹಲವಾರು ಗ್ರಂಥಗಳನ್ನು ಬರೆದಿದ್ದೀರಿ ನೀವು ಎಲ್ಲವನ್ನು ಸಮಚಿತ್ತರಾಗಿ ಸ್ವೀಕರಿಸಬೇಕು. ಪ್ರಾರಬ್ಧ ಎಂಬುದು ಯಾರನ್ನು ಬಿಡುವುದಿಲ್ಲ. ಜೀವನ್ಮುಕ್ತನಾದ ಯತಿಗೂ ಶರೀರವಿರುವವರೆಗೆ ಪ್ರಾರಬ್ಧದ ಕಾಟವಿದ್ದೇ ಇರುತ್ತದೆ ಧೃತಿಗುಂದಬೇಡಿ ಸಮಾಧಾನ ಚಿತ್ತರಾಗಿರಿ ಎಂದು ಬೋಧಿಸಿದರು.

ಶ್ರೀ ಗುರುಗವರಲ್ಲಿ ಮಹಾರಾಜರ ಭಕ್ತಿ ಅತ್ಯುನ್ನತಮಟ್ಟದ್ದಾಗಿತ್ತು. ಎಲ್ಲೇ ಇರಲಿ ಗುರುಗಳ ಪ್ರಥಮ ದರ್ಶನವಾದಾಗ ಅಡ್ಡಬಿದ್ದು ನಮಸ್ಕರಿಸುತ್ತಿದ್ದರು ಒಮ್ಮೆ ಮಹಾರಾಜರು ಮೈಸೂರಿನಿಂದ ಬೆಂಗಳೂರಿಗೆ ಕಾರಿನಲ್ಲಿ ಪ್ರಯಾಣ ಮಾಡುತ್ತಿದ್ದರು. ಮಂಡ್ಯದಲ್ಲಿ ಸಂಭ್ರಮದ ಉತ್ಸವವೊಂದರ ವಿಪರೀತ ಜನಸಂದಣಿಯಿದ್ದು, ಕಾರು ವೇಗವಾಗಿ ಮುಂದೆ ಹೋಗಲಾಗಲಿಲ್ಲ

ಡ್ರೈವರನ್ನು ಕುರಿತು, "ನೀನು ಕೆಳಗಿಳಿದು ಹೋಗಿ ಅದೇನು ಉತ್ಸವ ಕೇಳಿ ಬಾ" ಎಂದರು. ಆತ ಹೋಗಿ ಬಂದು "ಮಹಾಸ್ವಾಮಿ, ಶೃಂಗೇರಿ ಗುರುಗಳು ಉತ್ಸವದಲ್ಲಿ ನಗರಕ್ಕೆ ಬರುತ್ತಿದ್ದಾರಂತೆ" ಎಂದ ರಾಜರು ಕೂಡಲೇ ಕಾರಿನಿಂದಿಳಿದು ಬರಿಗಾಲಿನಲ್ಲಿ ಜನಗಳ ಮಧ್ಯೆ ನಡೆದು ಹೊರಟರು. ಪಲ್ಲಕ್ಕಿಯನ್ನು ಸಮೀಪಿಸಿ ರಸ್ತೆಯಲ್ಲಿಯೇ ಶ್ರೀ ಗುರುಗಳಿಗೆ ಅಡ್ಡಬಿದ್ದು ನಮಸ್ಕಾರ ಮಾಡಿದರು. ಜನದ ಜಯಘೋಷ ನಾಲ್ಕು ದಿಕ್ಕುಗಳಲ್ಲಿಯೂ ಪ್ರತಿಧ್ವನಿಸಿತು. ಶ್ರೀ ಗುರುಗಳು ಮಹಾರಾಜರ ಯೋಗಕ್ಷೇಮವನ್ನು ವಿಚಾರಿಸಿದರು. ಫಲಮಂತ್ರಾಕ್ಷತೆಯನ್ನಿತ್ತರು ನಿಧಾನವಾಗಿ ಸ್ವಲ್ಪ ದೂರ ಸಾಗಿ, ಶ್ರೀ ಗುರುಗಳ ಅಪ್ಪಣೆ ಪಡೆದು, ತಮ್ಮ ಕಾರಿನತ್ತ ಬಂದರು.

ಈ ಗುರುಶಿಷ್ಯ ಸಂಬಂಧ ಅತ್ಯಂತ ಅಪೂರ್ವವೂ ಶ್ರೇಷ್ಠವೂ ಆಗಿತ್ತು. ಗುರುಭಕ್ತಿ ಶಿಷ್ಯವಾತ್ಸಲ್ಯಗಳ ಶ್ರೇಷ್ಠ ನಿದರ್ಶನವಾಗಿತ್ತು. ಈ ಸಂಬಂಧ ಜನಕ ಯಾಜ್ಞವಲ್ಕ್ಯರು ಸ್ವೀಕರಿಸಿದರು. ಇಲ್ಲಿ ಈ ಜನಕ ಕೊಡಲು ಹಾತೊರೆಯುತ್ತಿದ್ದ ಈ ಯಾಜ್ಞವಲ್ಕ್ಯರು ಸ್ವೀಕರಿಸಲಿಲ್ಲ.

CC-O. In Public Domain. Digitized by eGangotri

ಜಗದ್ಗುರು ಆದಿ ಶಂಕರಾಚಾರ್ಯರು ಮತ್ತು ಶಾಸ್ತ್ರೀಯ ಸಂಗೀತ

ಲೇಖಕರು : ಸಂಗೀತ ವಿದ್ಯಾನಿಧಿ, ಲಯಜ್ಞಾನ ಪ್ರವೀಣ, ಬೆಂಗಳೂರು ಕೆ. ವೆಂಕಟರಾಂ

ಅದ್ವೈತ ಮತ ಪ್ರವರ್ತಕರು, ಪೂಜ್ಯರೂ ಆದ "ಶ್ರೀ ಶಂಕರ ಭಗವತ್ಪಾದರು" ರಚಿಸಿರುವ ಸಂಸ್ಕೃತ ರಚನೆಗಳು ಸರ್ವೋತ್ಕೃಷ್ಟವಾಗಿದ್ದು, ಸ್ವತಂತ್ರ ಮತ್ತು ಗೋಷ್ಠಿಗಾಯನಕ್ಕೂ ಸಮರ್ಪಕವಾಗಿದೆ. ಇವರ ರಚನೆಗಳಲ್ಲಿ ತಾನೇ ತಾನಾಗಿ ಹರಿದು ಬಂದಿರುವ ಸಹಜ ಲಯ ಪಾಮರರನ್ನೂ ಪಂಡಿತರನ್ನೂ ಸಮ್ಮೋಹನಗೊಳಿಸಬಲ್ಲುದಾಗಿದೆ. ಸಂಸ್ಕೃತ ಭಾಷೆಯೇ ಆದರೂ ಆದರಲ್ಲಿನ ಲಯದ ಬಳಕೆಯ ವೈವಿಧ್ಯತೆಯಿಂದ, ಸುಲಭವಾಗಿ ಕಂಠಸ್ಥಪಡಿಸಿಕೊಳ್ಳಲು, ಶಕ್ಯವಾಗಿವೆ. ಅವರ ಶ್ಲೋಕಗಳನ್ನು ಪಠಿಸುವುದರಲ್ಲಿಯೇ ಆದರಲ್ಲಿನ ಲಯದ ಗಾಂಭೀರ್ಯ ತಾನೇತಾನಾಗಿ ನಮ್ಮನ್ನು ಆಕರ್ಷಿಸುತ್ತದೆ.

ಶಂಕರರ ಅನೇಕ ಕೃತಿಗಳು ಸಾಂಪ್ರದಾಯಿಕವಾಗಿ ಪರಂಪರೆಯ ಭಜನೆಗಳಲ್ಲಿ ಉಳಿದು ಬಂದಿದೆ. ಕೆಲವು ಕೃತಿಗಳಿಗೆ ಸಂಗೀತ ವಿದ್ವಾಂಸರು ರಾಗ ತಾಳ ಸಂಯೋಜನೆಯನ್ನೂ ಮಾಡಿದ್ದಾರೆ. ಇತ್ತೀಚೆಗೆ ಶಂಕರರ ಅನೇಕ ಕೃತಿಗಳು ಧ್ವನಿಸುರುಳಿಯಲ್ಲಿಯೂ ಮುದ್ರಿತವಾಗಿದೆ. ಉದಾ: ಚಿನ್ಮಯಾ ಮಿಷನ ಹಾಗೂ ಭಾರತೀಯ ವಿದ್ಯಾಭವನ ಮುಂತಾದುವು. ರಾಮಕೃಷ್ಣಾಶ್ರಮ, ಚಿನ್ಮಯ ಮಿಷಿನ್, ಶಂಕರ ಮಠ, ಆಧ್ಯಾತ್ಮ ಪ್ರಕಾಶನಾಲಯ ಮುಂತಾದ ಹಿರಿಯ ಸಂಸ್ಥೆಗಳಲ್ಲಿ ಭಜನ ಕಾರ್ಯಕ್ರಮಗಳಲ್ಲಿ ಶಂಕರರ ಅನೇಕ ರಚನೆಗಳನ್ನು (ಕೃತಿಗಳು) ಭಜಿಸುವ ಸಂಪ್ರದಾಯ, ಇದೆ. ಯಾವುದೇ ಕೃತಿ ಸಾಮಾನ್ಯನಿಗೆ ತಲುಪಬೇಕಾದಲ್ಲಿ ಗಾಯನ ಸರಳ ಸುಲಭೋಪಾಯ. ಗ್ರಂಥದಲ್ಲಿರುವ ಶಂಕರರ ಅನೇಕ ಕೃತಿಗಳಿಗೆ ಸಂಗೀತ ವಿದ್ವಾಂಸರು ಸಂಯೋಜಿಸಿರುವ, ಸಂಯೋಜಿಸಲು ಶಕ್ಯವಿರುವ, ಸಂಗೀತವನ್ನು ಕುರಿತು ಯೋಚಿಸಬಹುದು.

ಈ ಲೇಖನದಲ್ಲಿ ಶಂಕರರಿಂದ ರಚಿತವಾಗಿರುವ ಕೃತಿಗಳ ಹಾಗೂ ಶಂಕರರ ಪರವಾಗಿ ರಚಿಸಲಾಗಿರುವ ಕೃತಿಗಳನ್ನು ಸ್ಥೂಲವಾಗಿ ಅವಲೋಕಿಸಿದೆ. ಶಂಕರರ ಕೃತಿಗಳನ್ನು ಸಂಗೀತ ಲಯಕ್ಕನುಗುಣವಾಗಿ ತ್ರಿಮಾತ್ರಾ, ಚತುರ್ಮಾತ್ರಾ, ಪಂಚಮಾತ್ರಾ ಲಯಗಳ ವಿಭಾಗಕ್ಕೂ ಅಪರೂಪಕ್ಕೆ ಸಿಗಬಹುದಾದ ಮಿಶ್ರ, ಸಂಕೀರ್ಣ ಲಯದ ವಿಭಾಗಕ್ಕೂ ವಿಂಗಡಿಸುವ ಪ್ರಯತ್ನ ಮಾಡಬಹುದು.

ಶಂಕರರ ರಚನೆಗಳಲ್ಲಿ ಲಯ :– 1) "ಖಂಡ ಗತಿ" ಅಥವಾ "ಪಂಚ ಮಾತ್ರಾಲಯ" "ಪಂಚ ಮಾತ್ರಾಲಯವು" ಗೇಯ ಪ್ರಾಕಾರಗಳಲ್ಲಿ ಅತಿ ಪ್ರಾಚೀನವೂ, ಪ್ರಾಮುಖ್ಯವೂ ಆದ ಲಯ. ಗೇಯ ಪ್ರಾಕಾರಗಳಲ್ಲಿ ಪಂಚಮಾತ್ರಾಲಯದ ಸ್ಥಾನ ಅತಿ ಹಿರಿದು ಹಾಗೂ ಅದನ್ನು ಪ್ರಥಮವಾಗಿ ತೆಗೆದುಕೊಳ್ಳಬಹುದು. ಈ ವಿಭಾಗದಲ್ಲಿ ಹೇರಳವಾಗಿ ರಚನೆಗಳು ಕಂಡು ಬರುವುದು. ಮಂಗಳವಾದ್ಯ ನಾಗಸ್ವರಗಳು, ಮಲ್ಲಾರಿಗಳೂ (ಅಂದರೆ ಪ್ರಾರಂಭವೂ) ಖಂಡದಲ್ಲಿಯೇ.

ಶ್ರೀ ಆಚಾರ್ಯರು ಶ್ರೀ ಗಣೇಶನಿಂದ ಮೊದಲು ಮಾಡಿ ಹರಿ, ಹರ, ಶಕ್ತಿಪರ ಸ್ತೋತ್ರಗಳ ರಚನೆಯನ್ನು ಮಾಡಿದ್ದಾರೆ. "ಭುಜಂಗ ಪ್ರಯಾತ" ಪ್ರಾಕಾರದಲ್ಲಿ ಬರುವ ಎಲ್ಲ ಸ್ತೋತ್ರಗಳೂ ಸಾಮಾನ್ಯವಾಗಿ ಖಂಡ ಗತಿಗೆ ನಿಲ್ಲುವುದು. ಆಚಾರ್ಯರ ಭಕ್ತಿಯ ಸ್ತೋತ್ರಗಳನ್ನು ನಾವು ಲಕ್ಷ್ಯಗೊಟ್ಟು ಓದುವಾಗ್ಗೆ ಕಂಡು ಬರುವ ಅವರ ಅನನ್ಯ ಭಕ್ತಿ ಆತ್ಯಾಶ್ಚರ್ಯಕರವಾದ ಕವಿತಾಶಕ್ತಿ, ಕವಿತ್ವದ ಪ್ರತಿಭೆ ಇವುಗಳು ವರ್ಣಿಸಲಸದಳವಾದುವು.

Sri Vidyabharathi Book Centre, Sringeri

CC-O. In Public Domain. Digitized by eGangotri

ಮೊದಲಿಗೆ

1) ಏಕ ಶ್ಲೋಕೀ ಗಣಪತಿ ಸ್ತೋತ್ರಮ್

ತ | ದೀಂತತ್ತ | ದೀಂತತ್ತ | ದೀಂತತ್ತ |
ದೀಂತತ್ತ |

ಗ | ಲದ್ದಾನ | ಗಂಡಂಮಿ | ಲದ್ಭ್ಯಂಗ | ಖಂಡಂ
ಜ | ಗಚ್ಚಾರು | ಶುಂಡಂಜ | ಗತ್ರಾಣ |
ಶಾಂಡಿಮ್

ಲ | ಸದ್ದಂತ | ಕಾಂಡಂವಿ | ಪದ್ಬಂಗ | ಚಂಡಂ
ಶಿ | ವಪ್ರೇಮ | ಪಿಂಡಂಭ ಜೇವಕ್ರ | ತುಂಡಂ

2) ಶ್ರೀ ಗಣೇಶ ಭುಜಂಗ ಸ್ತೋತ್ರಮ್

ರ | ಣತ ಕ್ಷುದ್ರ | ಘಂಟಾಸಿ | ನಾದಾಭಿ |
ರಾಮಂ

ಚ | ಲತ್ತಾಂಡ | ಪೋದ್ದಂಡ | ವತ್ಪದ್ಮ |
ತಾಲಮಂ

ಲ | ಸುತ್ತುಂದಿ | ಲಾಂಗೋಪ | ರಿವ್ಯಾಲ |
ಹಾರಂ

ಗ | ಣಾಧೀಶ | ಮೀಶಾನ | ಸೂನುಂ ತ ಮಾಡೆ |
ಧ್ವ | ನಿ ಧ್ವಂಸ | ವೀಣಾಲ | ಯೋಲ್ಲಾಸಿ |
ವಕ್ತ್ರಂ

ಸ್ಫು | ರ ಚ್ಛುಂಡ | ದಂಡೋಲ್ಲ | ಸದ್ಬೀಜ |
ಪೂರಮ್

ಗ | ಲದ್ದರ್ಪ | ಸೌಗಂಧ್ಯ | ಲೋಲಾಲಿ |
ಮಾಲಂ

ಗ | ಣಾಧೀಶ | ಮಾಶಾನ | ಸೂನುಂತ | ಮಾಡೆ
(ಇಲ್ಲಿ "ವೀಣಾ ಲಯೋಲ್ಲಾಸಿ" ಎಂದು ವೀಣೆ ಹಾಗೂ ಲಯದ ಪ್ರಸ್ತಾಪ ಮಾಡಿರುವುದು ಗಮನಾರ್ಹವಾದುದು)

3) ಭವನ್ಯಾಷ್ಟಕ

ನ ತಾತೋನ ಮಾತಾ ನ ಬಂಧುಃನ ದಾತಾ
ನ ಪುತ್ರೋ ನಪುತ್ರೀ ನ ಭೃತ್ಯೋ ನಭರ್ತಾ
ನಚಾಯಾನ ವಿದ್ಯಾನ ವೃತ್ತಿರ್ಮ ಮೈವ
ಗತಿಸ್ತ್ವಂ ಗತಿಸ್ತ್ವಂ ತ್ವಮೇ ಕಾಭವಾನಿ
(ತಧೀಂತಾ ತಧೀಂತಾ)

ಎಂದು ಸಹಜವಾಗಿಯೇ ಖಂಡ ಗತಿಗೆ ಹೊಂದಿದೆ

ಅಂತೆಯೇ ಗುರ್ವಾಷ್ಟಕ, ದಶ ಶ್ಲೋಕಿ, ನಿರ್ವಾಣ ಷಟ್ಕ, ಗಣೇಶಸ್ತವ, ವೇದಸಾರ ಶಿವಸ್ತವ, ವಿಷ್ಣು. ಭುಜಂಗ, ಶ್ರೀರಾಮ ಭುಜಂಗ ಪ್ರಯಾತ, ಪಾಂಡು, ರಂಗಾಷ್ಟಕ ವಿಜ್ಞಾನ ನೌಕಾ, ಕಾಶೀಪಂಚಕ, ಭವಾನಿ ಭುಜಂಗ ಪ್ರಯಾತ, ಶಾರದಾ ಭುಜಂಗ ಪ್ರಯಾತ ಇವೆ ಮೊದಲಾದುವು ಖಂಡಗತಿಯ ಮಧ್ಯಮ ಕಾಲದ ಲಯಕ್ಕೆ ಹೊಂದುವುದು.

ಖಂಡಗತಿಯ ಲಯಕ್ಕೆ ಹೊಂದುವ ಮತ್ತೊಂದು ರಚನೆ "ಶಿವ ಪಂಚಾಕ್ಷರ ಸ್ತೋತ್ರಂ"

ನಾಗೇಂದ್ರ ಹಾರಾಯ ತ್ರಿಲೋಚನಾಯ
ಭಸ್ಮಾಂಗ ರಾಗಾಯ ಮಹೇಶ್ವರಾಯ
ನಿತ್ಯಾಯ ಶುದ್ಧಾಯ ದಿಗಂಬರಾಯ
ತಸ್ಮಾಯ ನ ಕಾರಯ ನಮಃ ಶಿವಾಯ

ಕೊನೆಯ ಅಕ್ಷರವನ್ನು 3 ಮಾತ್ರಾ ಕಾಲಕ್ಕೆ ಹಿಗ್ಗಿಸಿದಾಗ ಖಂಡಗತಿ ಏಕ ತಾಳಕ್ಕೆ ಹೊಂದುವುದು, ಅಥವಾ 2 ಸಾಲು ಸೇರಿ/ಆವರ್ತ ಚ|| ತ್ರಿಪುಟ (ಆದಿ) ತಾಳಕ್ಕೆ ಹೊಂದುವುದು.

ಇದರಂತೆ "ದ್ವಾದಶ ಜೋತಿರ್ಲಿಂಗ ಸ್ತೋತ್ರಂ" ಕೂಡ ಕೊನೆಯ ಅಕ್ಷರ 3 ಮಾತ್ರೆಗೆ ಹಿಗ್ಗಿಸಿದಾಗ ಖಂಡಗತಿಗೆ ಹೊಂದುವುದು.

ಸೌರಾಷ್ಟ್ರ ದೇಸೇ ವಸುಧಾವಾ ಕಾಶೇ
ಜ್ಯೋತಿರ್ಮಯಂ ಚಂದ್ರಕಲಾವತಂಸಂ
ಭಕ್ತಿ ಪ್ರದಾನಾಯ ಕೃತಾವತಾರಂ
ತಂ ಸೋಮನಾಥಂ ಶರಣಂ ಪ್ರಪದ್ಯೇ

ಖಂಡಗತಿಯಂತೆಯೇ ಅತ್ಯಂತ ಜನಪ್ರಿಯವಾದ ಗತಿ ತ್ರಿಶ್ಯಗತಿ ಅಥವಾ "ತ್ರಿಮಾತ್ರಲಯ"

ಕಾಲಭೈರವಾಷ್ಟಕ

ದೇವ | ರಾಜ | ಸೇವ್ಯ | ಮಾನ | ಪಾವ |
ನಾಂಘ್ರಿ | ಪಂಕ ಜಂ |

Sri Vidyabharathi Book Centre, Sringeri

CC-O. In Public Domain. Digitized by eGangotri

ವ್ಯಾಳ | ಯಜ್ಞ | ಸೂತ್ರ | ನಿಂದು ಶೇಖ | ರಂ
ಕೃ | ಪಾಕ | ರಂ
ನಾರ | ದಾದಿ | ಯೋಗಿ | ವಂದ್ಯ | ವಂದಿ | ತಂ
ದಿ | ಗಂಬ | ರಂ
ಕಾಶಿ | ಕಾಪು | ರಾಧಿ | ನಾಥ | ಕಾಲ |
ಭೈರ | ವಂ ಭ | ಜೇ

ಕೊನೆಯ ಅಕ್ಷರ 2 ಮಾತ್ರಾ ಕಾಲ ಹಿಗ್ಗಿಸುವುದರಿಂದ ತ್ರಿಶ್ಯ ಗತಿಗೆ | ಧೀಂತ | ಧೀಂತ | ಧೀಂತ | ಸರಳವಾಗಿ ಹೊಂದುವುದು.

ಸಂಗೀತ ಕಲೆಯಲ್ಲಿ ಮೈಸೂರಿನ ಕೀರ್ತಿ ಕಳಶವನ್ನು ಎತ್ತಿ ಹಿಡಿದವರಲ್ಲೊಬ್ಬರಾದ ಉದ್ಧಾಮ ಸಂಸ್ಕೃತ ಸಂಗೀತ ಪಂಡಿತರೂ, ಹಿರಿಯ ವಾಗ್ಗೇಯಕಾರರೂ ಆದ ದಿವಂಗತ ಮೈಸೂರು ವಾಸುದೇವಾಚಾರ್ಯರು ದಿಗ್ದರ್ಶನ ಮಾಡಿದ ಈ ಕಾಲಭೈರವಾಷ್ಟಕವು ಅಂದು ಅಪಾರ ಜನರ ಮನ್ನಣೆ ಪಡೆಯಿತೆಂದು ನಮ್ಮ ನಾಡಿನ ಹಿರಿಯ ಕವಿವರ್ಯ ದಿ|| ಡಾ. ಡಿ. ವಿ ಗುಂಡಪ್ಪನವರು "ನಾ ಕಂಡ ಕಲಾವಿದರು" ಪುಸ್ತಕದ ಮುನ್ನುಡಿಯಲ್ಲಿ ತಿಳಿಸಿದ್ದಾರೆ.

"ಅಚ್ಯುತಾಷ್ಟಕ"

ಅಚ್ಯು | ತಂ | ಕೇ | ಶ | ವಂ | ರಾಮ
ನಾ | ರಾಯ | ಣಂ
ಕೃಷ್ಣ | ದಾ ಮೋದ | ರಂ | ವಾಸು | ದೇ | ವಂ
ಹ | ರಿಂ

ತಕಿಟ ಧೀಂ ತಕಿಟ ಧೀಂ ತಕಿಟ ಧೀಂ ತಕಿಟ ಧೀಂ .... ಎಂದು ತ್ರಿಶ್ಯ ನಡೆಗೆ ಅಳವಡಿಸಬಹುದು.

ಅಂತೆಯೇ ಇದನ್ನು
ಅಚ್ಯುತಂ | ಕೇಶವಂ | ರಾಮನಾ | ರಾಯಣಂ
ಕೃಷ್ಣದಾ | ಮೋದರಂ | ವಾಸುದೇ | ವಂಹರಿಂ
(ತಕ-ತಕಿಟ ತಕ ತಕಿಟ ತಕ ತಕಿಟ ತಕ ತಕಿಟ)
ಎಂದೂ ಖಂಡಕ್ಕೂ ಹೊಂದಿಸಬಹುದು.

ಶ್ಯಾಮಲಾ ರತ್ನ ಮಾಲಿಕಾ ಸ್ತೋತ್ರ ಅಥವಾ ಆರ್ಯಸ್ತುತಿ

ಓಂಕಾರ ಪಂಜರ ಶುಕೀಂ | ಉಪನಿಷದುದ್ಯಾನ ಕೇಲಿಕ್ರಂ ಕಂಠೀಂ

ಹೀಗೆ 30 ಅಕ್ಷರ ಒಟ್ಟು ಬರುವುದುದರಿಂದ 1 ಪಾದಕ್ಕೆ ತ್ರಿಶ್ಯಗತಿಗೆ ಹೊಂದಿಕೆಯಾಗುವುದು. ಮೈಸೂರಿನ ಪ್ರಸಿದ್ಧ ಸಂಗೀತ ಸಂಸ್ಕೃತ ವಿದ್ವಾಂಸರಾದ ದಿವಂಗತ ಶ್ರೀ ಎಚ್. ಯೋಗನರಸಿಂಹ ಅವರು ಈ ಮಾಲಿಕೆಗೆ ಗೌಳ, ಆರಭಿ, ಆನಂದ ಭೈರವಿ, ಶಂಕರಾಭರಣ, ಬಿಲಹರಿ, ಸರಸ್ವತಿ, ತೋಡಿ, ಬೇಗಡೆ ಮಧ್ಯಮಾವತಿ ಹೀಗೆ ಕ್ರಮವಾಗಿ 9 ರಾಗಗಳನ್ನು ಬಳಸಿ ಶ್ಯಾಮಲಾ ನವರಾಗ ರತ್ನಮಾಲಿಕೆಯನ್ನು ಆದಿತಾಳಕ್ಕೆ ಅಳವಡಿಸಿದ್ದಾರೆ.

ರಾಗಮಾಲಿಕೆ :

ಗೌಳ

ಸಾಸಾರಿ ಪಾಮ ಗಮರೀ ರಿಮಪನಿ | ಸಾನಿಸರೀ
ರಿಸನಿಪಮಾ
ಓಂಕಾರ ಪಂಜರ ಶುಕೀಂ ಉಪನಿಷ |
ದುಧ್ಯಾ.ನ ಕೇ..ಲಿ
ಗಮರೀ ರಿಮಪನಿ ಸನಿಪಮ ರಿಸನಿಪ
ಕ ಲ ಕಂ ಠೀಂ
ರೀರಿರಿ ರಿಗಮರಿ ಸನಿಪಾ ನಿಸರಿಸ ರೀ ರಿಮರಿಮ |
ಪನಿಸರಿ ರೀ ರೀ ರಿಮ
ಆಗಮ ವಿಪಿನಮ ಯೂ... .ರೀಂಗ ಆ ಅ |
ಯೋ ಮಂ ತರ್ವಿ ಭಾ
ಪನಿಪಮ ಗಮರೀ ಮಾರಿ ರಿಸಸಾ
ವ ಯೇ ಗಾ ರೀಂ

ಚಿಟ್ಟೆ ಸ್ವರ

ರಿಸನಿರೀ ಸನಿಪ ರೀ ಸರಿ ನಿರಸಾ ಪಮಗಮರಿಸ
ನಿಸಾರಿ ಸರಿನೀಸಾ
ನಿಪಮರಿ ಮರಿರಿಸ ನಿಸರಿಮ ರಿರಿಸಾ | ಪಮಪಸನಿಪ
ರಿಸರಿಮರಿರಿ ಸನಿಸಾ
ಸಾನಿಸ ಸರಿಸನಿ ರಿಸರಿಮರಿಸರೀ ಮಪರಿರಿ ಸರಿಸಸ
ನಿಪ ಸನಿಪಮರೀ

Sri Vidyabharathi Book Centre, Sringeri

CC-O. In Public Domain. Digitized by eGangotri

ಗಮಂರಿಸರೀ ಗಮರಿಸ ಸನಿಪಮರೀ | ಸನಿಪ
ರಿಸಾನಿಪಮ ರಿೀಸನಿಪ ||

ಮೊದಲ ಎರಡು ಪಾದಗಳ ಒಟ್ಟು ಮಾತ್ರೆ 30. ಆದ್ದರಿಂದ ಇದನ್ನು ಖಂಡ ನಡೆಗೂ ಸಹಜವಾಗಿ ಹೊಂದಿಸಬಹುದು.

ಓಂಕಾರ | ಪಂಜರಶು | ಕೀಂಉಪನಿ | ಷದುಧ್ಯಾ
ನ ಕೇಲಿಕ | ಲಕಂಠೀಂ

ಗಣೇಶ ಪಂಚರತ್ನ ಸ್ತುತಿ :

ಮು | ದಾಕ | ರಾತ್ತ | ಮೋದ | ಕಂ ಸ | ದಾ
ವಿ | ಮುಕ್ತಿ | ಸಾಧ | ಕಂ
ಕ | ಲಾಧ | ರಾವ ತಂಸ | ಕಂ ವಿ | ಲಾ ಸಿ |
ಲೋಕ | ರ ಕ್ಷ | ಕಂ
ಅ | ನಾಯ | ಕೈಕ | ನಾಯ | ಕಂ | ವಿ
| ನಾ ಶಿ | ತೇ ಭ | ದೈ ತ್ಯ | ಕಂ
ನ | ತಾಶು | ಭಾಶು | ನಾಶ | ಮಾ ವಿ |
ತಂ ವಿ | ನಾ ಯ | ಕಂ

ಧೀಂತ–ಧೀಂತ–ಧೀಂತ ಅಥವಾ ತಕಟ–ತಕಿಟ ಎಂದು ತ್ರಿಶ್ಯಗತಿಗೆ ಹೊಂದುವುದು.

ಇದರಂತೆ ನರ್ಮದಾಷ್ಟಕ, ಕೃಷ್ಣಾಷ್ಟಕಗಳೂ ತ್ರಿಶ್ಯಗತಿಗೇ ಬರುವುದು "ನಾರಾಯಣ ಸ್ತೋತ್ರ"ವು 6 ಅಕ್ಷರಗಳ 3 ಗುಂಪು, 4 ಅಕ್ಷರ 1 ಗುಂಪು, ಇದ್ದು 22 ಮಾತ್ರೆ ಒಟ್ಟು ಇದೆ. ಕೊನೆಯ ಅಕ್ಷರವನ್ನು 2ಮಾತ್ರ ಕಾಲ ಹಿಗ್ಗಿಸಿ ರೂಪಕತಾಳಕ್ಕೆ ಹೊಂದಿಸುಬಹುದು.

ನಾರಾಯಣ – ನಾರಾಯಣ – ಜಯಗೋವಿಂದ
ಹರೇ ;
ನಾರಾಯಣ – ನಾರಾಯಣ – ಜಯಗೋಪಾಲ
ಹರೇ ;

ಚತುರ್ಮಾತ್ರಾಲಯ :– ಈ ವಿಭಾಗಕ್ಕೆ ಮೋಹ ಮುದ್ಗರವನ್ನು ಗಮನಿಸಬಹುದು :

ಭಜಗೋವಿಂದಂ ಭಜಗೋವಿಂದಂ ಗೋವಿಂದಂ
ಭಜ ಮೂಢಮತೇ
ಸಂಪ್ರಾಪ್ತೇ ಸನ್ನಿಹಿತೇಕಾಲೇ ನಹಿನಹಿ
ರಕ್ಷತಿಡುಕೃಂಕರಣೇ

ಕೊನೆಯ ಅಕ್ಷರವನ್ನು 2 ಮಾತ್ರಾಕಾಲ ಹಿಗ್ಗಿಸಿ ಚತುರ್ಮಾತ್ರಾಲಯಕ್ಕೆ ಹೊಂದಿಸಬಹುದು. ಇದನ್ನು ಭಾರತದ ಶ್ರೇಷ್ಠ ಹಿರಿಯ ಕಲಾವಿದೆ ಶ್ರೀಮತಿ ಡಾ|| ಎಂ.ಎಸ್. ಸುಬ್ಬಲಕ್ಷ್ಮಿ ಅವರು ಹಾಡಿದ್ದಾರೆ. ಅನೇಕ ಹಿರಿಯ ಕಿರಿಯ ಕಲಾವಿದರು ಈ ರೀತಿ ಕಛೇರಿಗಳಲ್ಲಿ ಇದನ್ನು ಹಾಡಿ ರಸಿಕ, ಭಕ್ತ ಶ್ರೋತೃಗಳನ್ನು ತಣಿಸುತ್ತಿದ್ದಾರೆ.

ಇದರಂತೆ ಮಧುರಾಷ್ಟಕ, ಅನ್ನಪೂರ್ಣಾ ಸ್ತೋತ್ರ, ಶಿವಾಪರಾಧ ಕ್ಷಮಾಪಣಾ ಸ್ತೋತ್ರ, ಷಟ್ಪದಿಸ್ತೋತ್ರ, ಗೋವಿಂದಾಷ್ಟಕ, ಯಮುನಾಷ್ಟಕ, ಹಾಗೂ ವರ್ಣಮಾಲಾ ಶಿವಸ್ತುತಿಗಳನ್ನೂ ಚತುರ್ಮಾತ್ರಾಲಯಕ್ಕೆ ಹೊಂದಿಸಬಹುದು. 'ಅಕಾರದಿಂದ ಕ್ಷ'ಕಾರದ ತನಕ ಇರುವ ವರ್ಣಮಾಲಾ ಶಿವಸ್ತುತಿಯಲ್ಲಿ 2ನೇ ಚರಣ ಝುಣಾತಕ ಝುಂಕಿಣು ಝುಣಾತಕ್ಕಿಟತಕ

ಶಬ್ದೈರ್ನಟಸಿ ಮಹಾನಟ ಭೋ |
ಸಾಂಬ ಸದಾಶಿವ ಶಂಭೋಶಂಕರ
ಶರಣಂ ಮೇತವ ಚರಣಯುಗಂ ||

ಎಂದು ಚತುರ್ಮಾತ್ರಾಲಯದ ಜತಿಯ ಬಳಕೆಯನ್ನು ವಿಶೇಷವಾಗಿ ಗಮನಿಸಬಹುದು.

ಪಂಚಮಾತ್ರಾ, ತ್ರೀಮಾತ್ರಾ, ಚತುರ್ಮಾತ್ರಾ ಲಯದ ನಂತರ ಅಪರೂಪವಾದ ಮಿಶ್ರ ಹಾಗೂ ಸಂಕೀರ್ಣಲಯದ ಭಾಗವನ್ನು ಗಮನಿಸಬಹದು.

"ಕನಕಧಾರಾ"

ಅಂಗಂ ಹರೇಕಿ ಪುಲಕ ಭೂಷಣ ಮಾಶ್ರಯಂತೀ
ಭೃಂಗಾಂಗನೇವ ಮುಕುಲಾಭರಣಂ ತಮಾಲಂ |
ಅಂಗೀಕೃತಾಖಿಲ ವಿಭೂತಿರಪಾಂಗ ಲೀಲಾ |
ಮಾಂಗಲ್ಯದಾಸ್ತುಮಮ ಮಂಗಲ ದೇವತಾಯಃ||

ಇದನ್ನು || ಅಂಗ ಹರೇಃ ಪುಲಕಭೂಷಣ ಮಾಶ್ರ | ಯಂತೀ || ಎಂದು ಮಿಶ್ರ ತ್ರಿಪುಟ ತಾಳಕ್ಕೆ ಹೊಂದಿಸಬಹುದು.

Sri Vidyabharathi Book Centre, Sringeri

CC-O. In Public Domain. Digitized by eGangotri

"ಜಗನಾಥಾಷ್ಟಕ ಸ್ತೋತ್ರ"

ಕದಾಚಿತ್ಕಾ | ಲಿಂ, ದೀ ; | ತಟವಿಪನಸಂ |
ಗೀತಕವರೋ |
ಮುದಾಗೋಪೀ | ನಾ ರೀವದ | ನಕಮಲಾ
ಸ್ವಾ | ದೂಮಧುಪ :||
ರಮಾಶಂಭು : | ಬ್ರಹ್ಮಾ್ಯಮರ | ಪತಿಗಣೇಶಾ |
ರ್ಚಿತಪದೋ, ||
ಜಗನ್ನಾಥ : | ಸ್ವಾಮಿನಯ ನ ಪಥಗಾಮಿ |
ಭವತು ಮೇ ; ||

ಮೀನಾಕ್ಷೀ ಪಂಚರತ್ನ

ಸೌರಾಷ್ಟ್ರ ದೇಸೇ | ವಸುಧಾವಕಾಶೇ
ಜ್ಯೋತಿರ್ಮಯಂ ಚಂ | ದ್ರ ಕಲಾವತಂಸಂ
ಭಕ್ತಿಪ್ರದಾನಾ ಯ | ಕೃತಾವತಾರಂ
ತಂ ಸೋಮನಾಥಂ | ಶರಣಂ ಪ್ರಪದ್ಯೇ ||

18 ಮಾತ್ರಾಕಾಲದ ಈ ಸ್ತೋತ್ರವನ್ನು ತಾದೀಂತ ಧೀಂಧೀ...-ತಕಧೀಂತ ಧೀಂತಾ....ಎಂದು ಸರಳವಾಗಿ ಸಂಕೀರ್ಣಲಯಕ್ಕೆ ಹೊಂದಿಸಬಹುದು.

ನಗರದಲ್ಲಿ ಇತ್ತೀಚೆಗೆ "ಪರ್ಕ್ಯು-ಸ್ಸಿವ್ ಆರ್ಟ್ಸ ಸೆಂಟರ್" (ತಾಳವಾದ್ಯ ಕಲಾ ಕೇಂದ್ರವು) ನಡೆಸಿದ (1990 ನೇ ತಿಂಗಳಲ್ಲಿ) ತಾಳವಾದ್ಯೋತ್ಸವದಲ್ಲಿ ಅನೇಕ ಹಿರಿಯ ವಿದ್ವಾಂಸರು ಪ್ರಾಚೀನವಾದ ಅಷ್ಟೋತ್ತರ ಶತ ತಾಳಗಳಲ್ಲಿ "ತಿರುಪ್ಪುಗಳ್"ಗಳನ್ನು ನಿರೂಪಿಸಿದರು. ವಿದ್ವಾನ್ ಟಿ.ಆರ್. ಸುಬ್ರಮಣ್ಯ ಅವರು ತಿರುಪ್ಪುಗಳ್ ಗಳಿಗೆ ಪ್ರಾಚೀನ ತಾಳಗಳನ್ನು ಅಳವಡಿಸಿದ್ದುದು ; ಗಮನಾರ್ಹ. ಇದರಂತೆಯೇ ನಾವು ನಮ್ಮ ಸಂಸ್ಕೃತ, ಕನ್ನಡದ ಕೆಲವು ಗೇಯಪ್ರಕಾರಗಳಿಗೆ 108 ತಾಳ ಮತ್ತು 72 ಮೇಳತಾಳಗಳನ್ನು ಬಳಸಿ, ರೂಢಿಗೆ ತರಬಹುದು.

ಉದಾ :– "ತಾಳಸಂಗ್ರಹ ಗ್ರಂಥಾಧಾರದಿಂದ" 21 ಅಕ್ಷರದ ವಸಂತ ತಿಲಕ ವೃತ್ತದ "ಶ್ರೀ ಸಂಕಷ್ಟಹರ ಲಕ್ಷ್ಮೀನೃಸಿಂಹ ಅಷ್ಟಕ"ವನ್ನು 72 ಮೇಳ ತಾಳಗಳಲ್ಲಿ 'ಲತಾಂಗಿ' ತಾಳಕ್ಕೆ ಹೊಂದಿಸಬಹುದು. ಇದರ ಲಕ್ಷಣ "ಕೋಕಿಲಪ್ರಿಯ"

ಶ್ರೀಮತ್ಪಯೋನಿಧಿ ನಿಕೇತನ ಚ | ಕ್ರಪಾ | ಣೇ
426 "ಲಕ್ಷ್ಮ"

ಶಿವನಾಮಾವಲ್ಯಷ್ಟಕ :–

ಹೇ | ಚಂದ್ರ | ಚೂ | ಡ | ಮದನಾಂ |
ತಕಶೂ | ಲ ಪಾಣೇ

ಶ್ರೀ ಬಿ ಎಂ. ಸುಂದರಂ ಅವರ "ತಾಳಸಂಗ್ರಹ" ಪುಸ್ತಕ ಈ ಬಗ್ಗೆ ನಮಗೆ ಹೆಚ್ಚು ನೆರವು ನೀಡಬಹುದು.

ಸಾಗರದಂತಿರುವ ಶಂಕರರ ಕೃತಿಗಳಲ್ಲಿ ಯೋಚಿಸಿದಷ್ಟೂ ವಿಧವಿಧವಾಗಿ ತಾಳಗಳ ಸರಣಿಯೇ ಕಣ್ಮುಂದೆ ನಿಲ್ಲುವುದು. ಹೆಚ್ಚು ಕೃತಿಗಳು, ರಾಗತಾಳಕ್ಕೆ ಸಂಯೋಜಿತಗೊಳ್ಳುವಂತಾಗಲಿ ಆಚಾರ್ಯರ ಕೃಪಾಶೀರ್ವಾದ ಎಲ್ಲಾ ಕಲಾವಿದರಿಗೂ ಲಭಿಸಲಿ ಎಂದು ಆಶಿಸಿ ಮುಂದೆ ಶಂಕರರ ಪರವಾದ ಕೃತಿಗಳ ಬಗ್ಗೆ ಗಮನಹರಿಸಬಹುದು.

ಶಂಕರರ ಪರವಾದ ಕೃತಿಗಳು :–

ಕರ್ನಾಟಕ ಸಂಗೀತ ಪ್ರಪಂಚದ ಹೆಸರಾಂತ ಸುಪ್ರಸಿದ್ಧ ವಿದ್ವಾಂಸರೂ, ವಾಗ್ಗೇಯಕಾರರೂ ಆದ ಶ್ರೀ ಮಹಾವೈದ್ಯನಾಥ್ ಅಯ್ಯರ್ ಅವರು ಶಂಕರರ ಪರವಾಗಿ ಎರಡು ಕೃತಿಗಳನ್ನು ರಚಿಸಿರುವರು.

1. ನಾಗಸ್ವರಾವಳಿ ರಾಗ–ರೂಪಕ ತಾಳದ "ಶ್ರೀ ಶಂಕರ ಗುರುವರಂ
2. ಏಕದಶರಾಗ ಮಾಲಿಕೆ–ಆದಿ ತಾಳದ "ಶಂಕರ ಗುರುವರಮಾಹಿಮಾ"

ಈ ಕೃತಿಗಳ ಕರ್ತೃವಿನ ಬಗ್ಗೆ ಭಿನ್ನಾಭಿಪ್ರಾಯವಿದೆ. ದಿ. ಗಾನಕಲಾಭೂಷಣ ಎಲ್. ರಾಜಾರಾಯರು ಈ ಕೃತಿಯು ಮಹಾ ವೈದ್ಯನಾಥ ಅಯ್ಯರ್ ಅವರದು ಎಂದು ಅಭಿಪ್ರಾಯ ಪಟ್ಟು ದೊಡ್ಡ ಅಕ್ಷರಗಳಲ್ಲೇ ಮುದ್ರಿಸಿದ್ದಾರೆ. ಮೈಸೂರು ವಾಸುದೇವಾಚಾರ್ಯರ "ನಾ ಕಂಡ ಕಲಾವಿದರು" ಪುಸ್ತಕದ ಮುನ್ನುಡಿಯಲ್ಲಿ ಶ್ರೀ ಡಿ ವಿ ಗುಂಡಪ್ಪನವರು "ಆಚಾರ್ಯರು ದಿಗ್ದರ್ಶನ ಮಾಡಿದ ಶಂಕರ ಗುರುವರಮಾಹಿಮಾ ರಾಗಮಾಲಿಕಾ

Sri Vidyabharathi Book Centre, Sringeri

CC-O. In Public Domain. Digitized by eGangotri

ಒಟ್ಟಿನಲ್ಲಿ ಇದು ಬಹಳ ಭವ್ಯವಾದ ಕೃತಿ. ಮೊದಲಿಗೆ 'ಧನ್ಯಾಸಿ'ಯಿಂದ ಆರಂಭವಾಗಿ ಬೇಹಾಗ, ಕೇದಾರ, ಮೋಹನ, ಕಮಾಜ್, ತೋಡಿ, ಶಹನ, ಕಲ್ಯಾಣಿ, ಭೈರವಿ, ಶಂಕರಾಭರಣ, ಸುರಟಿ ಮೊದಲಾಗಿ 11 ರಾಗಗಳನ್ನು ಹೆಣೆಯಲಾಗಿದೆ. ಅತ್ಯಂತ ಭಕ್ತಿಯಿಂದ ಶಂಕರ ಗುರುವರರನ್ನು ಅವರ ಮಹಿಮೆಯನ್ನು ಅವರಿಂದ ಸ್ಥಾಪಿಸಲ್ಪಟ್ಟ ಮಾತಷಟ್ಕಗಳ ಪಾಲನ ಪ್ರವಣರನ್ನೂ, ಆ ಪರಂಪರೆಯ ಜಗದ್ಗುರು ಶ್ರೀ ನರಸಿಂಹಭಾರತೀಗಳನ್ನೂ ಅನವರತ ಪೂಜಿಸಿದ್ದಾರೆ. ಭಕ್ತಾಗ್ರಣಿ ಮಹಾವೈದ್ಯನಾಥರು ಶ್ರೀ ಶಂಕರ ಗುರುಗುಣಗಳ ಕಂಠದಲ್ಲಿ ಮಣಿಯಾಗಿರಲು ಆಶಿಸುತ್ತಾರೆ. ಅತ್ಯಂತ ಮೇಧಾವಿ, ಚತುತ್ರಾರ್ಹರಾದ 'ಅಯ್ಯರ್'ರ ದಿವ್ಯಗಾಯನದಿಂದ ಆನಂದ ಹೊಂದಿದ ಜಗದ್ಗುರುಗಳು "ಮಹಾದೇವ ಮಹಾವೈದ್ಯಂತಂ ಪಾಲಯಾ ಕೃಪಾಲಯ | ಶೂಲಿನಸ್ತೇ ಸದಾಪೇಕ್ಷ್ಯಂ ಖಲ್ವಾಯುರ್ವೇದ ಪಾರಗಃ" || ಎಂದು ಹರಸಿದ್ದಾರೆ ಎಂದು ವಾಸುದೇವಾಚಾರ್ಯರು ತಮ್ಮ ಗ್ರಂಥದಲ್ಲಿ ಮಹಾವೈದ್ಯನಾಥ ಅಯ್ಯರ್ ಬಗ್ಗೆ ಪ್ರಸ್ತಾಪಿಸುವಾಗ ತಿಳಿಸಿದ್ದಾರೆ.

3. "ಶ್ರೀ ಶಂಕರಾಚಾರ್ಯಂ" ಇದು ಶಂಕರಾಭರಣ ರಾಗ ಆದಿ ತಾಳದ ವಿಳಂಬ ಕಾಲದ ಕೃತಿ. ಶ್ರೀ ಸುಬ್ಬರಾಮದೀಕ್ಷಿತರು ಈ ಕೃತಿಯಲ್ಲಿ ಶ್ರೀ ಶಂಕರರನ್ನು "ಪರಮ ಜ್ಞಾನಲತಾಲವಾಲಂ" ಭವ್ಯತರು ಸುಮನೋಜಾಲಂ, ಪರಮತ ಖಂಡನಚಂಡಿಮಶೀಲಂ, ಪರಮಾದ್ವೈತ ಸ್ಥಾಪನಲೀಲಂ" ಎಂದು ಕೊಂಡಾಡಿದ್ದಾರೆ

4 "ಶ್ರೀ ಸದ್ಗುರು ಮಹಿಮೆ" ಪದ್ಯಾತ್ಮಕವಾದ ಶ್ರೀಮಚ್ಛಂಕರಾಚಾರ್ಯರ ಜೀವನ ಚರಿತ್ರೆಯ ಗೀತೆ ಇದು. ಮೈಸೂರಿನ ಸರಸಕವಿ ರಾ. ವೆಂಕಟ ಸುಬ್ಬಶಾಸ್ತ್ರಿ ಭಾರತಿಗಳ ಈ ಕೃತಿ ಚತುರಶ್ರ ಜಾತಿ ತ್ರಿಪುಟ ತಾಳ (ಆದಿತಾಳ)ಕ್ಕೆ ಹೊಂದಿಕೆಯಾಗುವುದು.

ಶ್ರೀ ಗುರುಶಂಕರಚರಿತೆಯ ನೊರೆಯುವೆ |
ರಾಗದೊಳಿದನೊಲಿ | ದೋದುವುದು

5. ನಗರದ ವಿದ್ವಾನ್ ಶ್ರೀ ಟಿ. ಎನ್. ಪದ್ಮನಾಭನ್‌ರವರೂ 'ಶ್ರೀ ಶಂಕರ ಗುರುವಂದನಂ' ಎಂಬ ಕೃತಿಯನ್ನು ರಚಿಸಿದ್ದಾರೆ.

ಶಂಕರರ ಕೃತಿಗಳ ಧ್ವನಿಸುರುಳಿಗಳು, ಎಲ್. ಪಿ. ಗಳಂತೆ, ಅವರ ಕೃತಿಗಳ ಹಾಗೂ ಅವರ ಪರವಾದ ಕೃತಿಗಳ ಆಧಾರಿತವಾಗಿ ಅನೇಕ ಸಂಗೀತ ರೂಪಕಗಳು ಪ್ರದರ್ಶಿತವಾಗಿವೆ. ಆಕಾಶವಾಣಿ ನಿಲಯದಲ್ಲೂ ಆಗಾಗ್ಗೆ ಶಂಕರರ ಕೃತಿಗಳು ಪ್ರಸಿದ್ಧ ಹಿರಿಯ ಕಿರಿಯ ಕಲಾವಿದರ ಕಾರ್ಯಕ್ರಮಗಳಲ್ಲೂ ಮತ್ತು ಧ್ವನಿ ಮುದ್ರಣಗಳಲ್ಲೂ ಕೇಳಬರುತ್ತಿವೆ.

ಶಂಕರಾಚಾರ್ಯರ ಸ್ತೋತ್ರಗಳನ್ನು ನೃತ್ಯಕ್ಕೂ ಅಳವಡಿಸಿ ಪ್ರದರ್ಶಿತವಾಗುತ್ತಿರುವುದು ಗಮನಾರ್ಹವಾದುದು. ದೂರದರ್ಶನದಲ್ಲೂ ಆಗಿಂದಾಗ್ಗೆ ಆಚಾರ್ಯರ ಕೃತಿಗಳನ್ನು ಕಲಾವಿದರು ಹಾಡಿ. ನರ್ತಿಸುವುದನ್ನು ಗಮನಿಸಬಹುದು. ಆಚಾರ್ಯರ ಕೃತಿ ಸಾಗರದಲ್ಲಿ ಕೊಂಚವೇ ಕೃತಿಗಳನ್ನು ಸ್ಥೂಲವಾಗಿ ಗಮನಿಸಿರುವ ಲೇಖನವಿದು. ಹೆಚ್ಚು ಪ್ರಯತ್ನಗಳು ನಡೆದು ಹೆಚ್ಚು ಕೃತಿಗಳ ರಾಗ ತಾಳಗಳೊಂದಿಗೆ ಪ್ರಚಾರಕ್ಕೆ ಬರಲೆಂದು ಆಶಿಸುವೆ.

"ಸರ್ವಂ ಶಿವಂ ಮಂಗಲಂ

ಶ್ರೀ ಬೆಂಗಳೂರು ಕೆ. ವೆಂಕಟರಾಂರವರು ರಾಷ್ಟ್ರದ ಪ್ರಖ್ಯಾತ ಲಯವಾದ್ಯ ವಿದ್ವಾಂಸರು, ತಾಳವಾದ್ಯ ಕಲೆಗಳಿಗೆ ಮನ್ನಣೆ, ಅವುಗಳ ಬಗ್ಗೆ ಪ್ರಸಾರ, ಪ್ರಚಾರಕ್ಕಾಗಿ ವಿಶೇಷ ಕಾರ್ಯಕ್ರಮಗಳನ್ನು ಏರ್ಪಡಿಸಿ ಹಲವಾರು ಪ್ರಕಟನೆಗಳನ್ನು ಪರ್ಕಸ್ಸಿವ್ ಆರ್ಟ್ಸ ಸೆಂಟರ್ ಮೂಲಕ ಹೊರತಂದಿದ್ದಾರೆ. ನಮ್ಮ ದೇಶದಲ್ಲೂ ವಿದೇಶಗಳಲ್ಲೂ ತಾಳ-ಲಯಗಳ ಬಗ್ಗೆ ಪ್ರಾತ್ಯಕ್ಷಿಕೆಗಳನ್ನು ನೀಡಿರುವ ವೆಂಕಟರಾಂ ರವರು ಆಕಾಶವಾಣಿಯಲ್ಲೂ ದೂರದರ್ಶನದಲ್ಲೂ ಅನೇಕ ಬಾರಿ ವಿವಿಧ ಕಲಾವಿದರೊಂದಿಗೆ ರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ.)

—ಸಂಪಾದಕರು

Sri Vidyabharathi Book Centre, Sringeri

CC-O. In Public Domain. Digitized by eGangotri

ಶೃಂಗೇರಿ ಅಭಿನವತೀರ್ಥ ಸ್ವಾಮಿ ಶೃಂಗಾರ ಮೂರ್ತಿಯ

ದರುಶನ ಇನ್ನೆಲ್ಲಿ?

ನಿಮ್ಮ ಸೃಷ್ಟಿಸಿದನೇಕೆ
ಪರಬ್ರಹ್ಮನು ಸನ್ಯಾಸಿಯಾಗಿ
ಶೃಂಗೇರಿ ಗುರು ಪೀಠಕೆ

ಶಾರದಾ ಮಾತಾ ಇಚ್ಛೆಯಂತೆ
ನೀವು ಗುರು ಪೀಠದ
ಅನುಜ್ಞೆಯಂತೆ ನಡೆದಿರಿ

ನಿಮ್ಮ ಬಾಳಿನಲಿ
ನೀವಿರಿಸಿದ್ದ ಅಪ್ರತಿಮ
ಸರಿಸಮ ಭಾವನೆ
ನಿಜ ಮನುಜತೆಗೆ
ಅನುದಿನದ ಕಾಣ್ಕೆ
ನಿಮ್ಮ ಸಹಜ ತನವು

ನೀವು ಸನ್ಯಾಸಿಯಾದರೂ
ನಿಮ್ಮ ಬಳಿಗೆ ಎಂತೆಂತಾ
ಮಮತೆಯ ಮನುಜರು
ದೇಶ ವಿದೇಶದಿಂದ ಬಂದು
ನಿಮ್ಮ ದರುಶನಕೆ ಬಂದು
ನಿಮ್ಮಾಶೀರ್ವಾದ ಪಡೆದರು

ನಿಮ್ಮನರಸಿ ಬಂದ ಭಕ್ತನ
ಮನಕೆ ಸಂತಸ ತರುವ
ನಿಮ್ಮಲ್ಲಡಿದಾವುದೋ
ಶಕ್ತಿಯೋ ನಿಮ್ಮನರಸಿ
ಬರುತ್ತಿದ್ದವರ ಭಕುತಿಯೋ

ಅಂತು ನೀವು ಶಂಕರರ
ದೃಷ್ಟಿಗೆ ಸೃಷ್ಟಿಗೆ ಸಿಲುಕಿದಿರಿ
ಅವರ ಇಷ್ಟದ ಪೀಠಕೆ
ಗುರು ಪೀಠದ ಕಾರ್ಯ
ಮುಗಿಯಿತೆಂದು ಶಂಕರರ
ದೃಷ್ಟಿಗೆ ಸಿಲುಕಿದೊಡನೆ
ನಿಮ್ಮನ್ನು ಮುಕ್ತಿಯು
ದೊರಕಿಸಿದರು ಶಂಕರರು

ಎಷ್ಟೋ ಸಾಧು ಸಂತರ
ಕಂಡಿಹೆನು ಆದರೆ ನಿಮ್ಮಲ್ಲಿದ್ದ
ಗಾಂಭೀರ್ಯ ಶಂಕರರಂತೆ
ಇನ್ನೊಬ್ಬರಿಗೆ ಬಾರದು
ಆ ಸಹಜತನ ಅಂಥಾ
ಗಂಭೀರ ಮೂರ್ತಿಯನು
ಇನ್ನೆಲ್ಲಿ ಕಾಣುವೆನು

ನಿಮ್ಮ ಗುರು ಪೀಠಕೆ ನಿಮಗೆ
ನಿಮಗೆ ತಕ್ಕ ಪೀಠವೆನಿಸಿ
ನಿಮಗದು ಸಿಕ್ಕ ಗುರು ಪಾಠವಾಗಿತ್ತು
ಆಗುರು ಪಾಠವಿನ್ನು ನಿಮ್ಮ
ಭಕ್ತರ ಕಿವಿಗಿನ್ನು ಕೇಳದಂತಾಯ್ತು

ಶೃಂಗೇರಿಯಲ್ಲಿಂದು
ಶಾರದಾ ಗುರು ಪೀಠಕೆ
ಶೃಂಗಾರ ಮೂರುತಿಯ
ದರುಶನ ಕಾಣದಾಯಿತು

—ಬಿ. ಎನ್. ವೆಂಕಟೇಶ್ (ಅನುಭವಿ)

Sri Vidyabharathi Book Centre, Sringeri

CC-O. In Public Domain. Digitized by eGangotri

Sri Sri Abhinava Vidya Teertha Guru (Maha Sannidhanam) Maharaj

-K. V. Sbbaratnam, Erode

THE GURU, I saw

What is the aim in life ?

"Self Realisation"

How to get it ?

The MUNDAKA upanishad has proclaimed :

TAD VIGNARARTHAM SA GURUMEVA
ABHIGACCHET SAMITPANIH
STOTRIUM BRAHMA NISHTAM

"To realise that (Supreme Being) one should, with all humility, seek the aid of a Guru (Carrying samit for Homam), who is wellversed in the Vedas and sastras and who has himself realised the self—a Jivanmukta

"What is the speciality about the Jivanmukta ?"

"He has controlled all his senses and also his mind. He is ever present in GOD

The Bhagavatgita states

GNANITVATMEIVA ME MATAM

'It is my firm bolief that the Gnani ismy own self' (God). No difference between the two It is the mind that is the cause for worldliness and if that mind is made absent non-working, then the person becomes GOD, HIMSELF. Hence the GURU is extolled as the TRINITY, Lord Brahma, Lord Vishnu, Lord Maheswara and Paramatma (formless) :

Now, let us look at our GURU-PARAMPARA, which begins with Lord Mahavishnu. The Lord Vishnu, His Navel—born son, Brahma, are the Divine preceptors (even like Lord Dakshinamoorthy). Then follows the line of seers (Maharishis related as father and son), Vasistha, Sakti, Parasara, Vyasa, Suka. Thereafter come the perfected Human Beings. SRI GOWDAPADA, SRI GOVINDA BAGHAVAT PADA SRI SANKARA BHAGHVATPADA and His disciples down to the present day.

The sastras have prescribed "Self Realisation" as the required qualification for the GURU. Now the question arises in some quarters :

"Is it possible to find such a Guru in the materially minded world of Now-a-days ? The answer is :

Sri Vidyabharathi Book Centre, Sringeri

